# ಹಿಂಸೆಯ ಒಳ-ಹೊರಗು

## ಧೀರ ಹಂತಕರ

## ಅಧೀರ ಮನೋಲೋಕದೊಳಗೊಂದು ಸುತ್ತು

ಆಶೀಶ್ ನಂದಿ

ಕನ್ನಡಕ್ಕೆ: ಜಶವಂತ ಜಾಧವ್

ನನ್ನ ಈವರೆಗಿನ ಅಧ್ಯಯನದಲ್ಲಿ ನಾನು ಒಬ್ಬಾನೊಬ್ಬ ಆತ್ಮಸಂತೃಪ್ತ ಹಂತಕನನ್ನೂ ಕಂಡಿಲ್ಲ. ಬದಲು ನಾನು ಕಂಡಿರುವುದು ಒಂದಲ್ಲದಿನ್ನೊಂದು ಬಗೆಯಲ್ಲಿ ತುಸುವಾದರೂ ಆತ್ಮಸಂತಪ್ತರಾದ ಹಂತಕರನ್ನು ಮಾತ್ರ, ಹೊರಗೆ ವೀರವೇಷ ಧರಿಸಿಕೊಂಡಿದ್ದು ಒಳಗೆ ಅಧೀರತೆಯಿಂದ ಬಳಲುತ್ತಿರುವ ಸಂತ್ರಸ್ತ ಆತ್ಮರನ್ನು ಮಾತ್ರ.

... ... ...

ಎರಡು ವಿಶ್ವಸಮರಗಳು, ಹಲವಾರು ಅಂತಾರಾಷ್ಟ್ರೀಯ ಯುದ್ಧಗಳು, ಅನೇಕ ರಾಷ್ಟ್ರಮಟ್ಟದ ಕ್ರಾಂತಿಗಳು, ಅಸಂಖ್ಯ ಜನಾಂಗೀಯ ಘರ್ಷಣೆಗಳು ಹಾಗೂ ಅಗಣಿತ ಭಯೋತ್ಪಾದನಾ ಕೃತ್ಯಗಳಿಂದ ರಕ್ತಸಿಕ್ತಗೊಂಡ ಇಪ್ಪತ್ತನೆಯ ಶತಮಾನವನ್ನು ಕೆಲವು ಚಿಂತಕರು ಹಿಂಸೆಯ ಶತಮಾನವೆಂದೆ ಗುರುತಿಸಲಿಚ್ಛಿಸುತ್ತಾರೆ. ಮಾನವ ಇತಿಹಾಸದಲ್ಲಿ ಇಷ್ಟೊಂದು ವ್ಯವಸ್ಥಿತವಾಗಿ ಹಾಗೂ ಇಷ್ಟೊಂದು ಪ್ರಜ್ಞಾಪೂರ್ವಕವಾಗಿ ಅಮಾನವೀಯತೆಯನ್ನು ಮೆರೆದ ಶತಮಾನ ಇನ್ನಾವುದೂ ಇಲ್ಲವೆಂಬುದೆ ಅವರ ತಿಳುವಳಿಕೆಯಾಗಿದೆ. ಈ ವಾದವನ್ನು ಅಲ್ಲಗಳೆಯುವುದು ಅಷ್ಟೆಲ್ಲ ಸುಲಭವೂ ಅಲ್ಲ. ಹಿಂಸೆಯ ಹೊಸ ಮಾದರಿಗಳು ಹಾಗೂ ಹೊಸ ಮಾರ್ಗಗಳು ನಿತ್ಯಕ್ಕೊಂದರಂತೆ ಹುಟ್ಟಿಕೊಳ್ಳುತ್ತಿರುವ ಈ ಕಾಲಘಟ್ಟದಲ್ಲಿ ಹಿಂಸೆಯ ಹಾಗೂ ಹಿಂಸಾಚಾರಿಗಳ ಕುರಿತಾಗಿ ತುಸುವಾದರೂ ಆಳವಾಗಿ ಚಿಂತಿಸುವ ವ್ಯವಧಾನವೆ ನಮಗೆ ಇಲ್ಲದಂತಾಗಿಹೋಗಿದೆ. ಹಾಗೊಮ್ಮೆ ಅವಕಾಶ ದೊರಕಿದ ಹೊತ್ತಿನಲ್ಲೂ



ಅರೆಬರೆ ಗ್ರಹಿಕೆಗಳನ್ನೆ ವ್ಯಕ್ತಿಗತ ನಂಬಿಕೆಗಳನ್ನೆ ಸಮಗ್ರಸತ್ಯವೆಂದು ಹಠಹಿಡಿದು ಪ್ರತಿಪಾದಿಸುವಷ್ಟು ನಮ್ಮ ಸಂವೇದನೆ ಜಡ್ಡುಗಟ್ಟಿಹೋಗಿದೆ.

ನಮ್ಮ ಜಗ ಮತ್ತು ಯುಗಗಳನ್ನು ಇಷ್ಟು ವ್ಯಾಪಕವಾಗಿ ಆವರಿಸಿರುವ ಹಿಂಸಾಚಾರದ ಬಗ್ಗೆ ಅನೇಕ ಅಧ್ಯಯನಗಳು ನಡೆದಿವೆ. ಇವು ಹಿಂಸೆಯ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಮನೋವೈಜ್ಞಾನಿಕ ಇತ್ಯಾದಿ ಆಯಾಮಗಳ ಮೇಲೆ ಬೆಳಕು ಚೆಲ್ಲಿವೆ. ಹಿಂಸೆ ಸಾಮುದಾಯಿಕ ಸ್ತರದಲ್ಲೂ ಹಾಗೂ ವೈಯಕ್ತಿಕ ಸ್ತರದಲ್ಲೂ ಉದ್ಭವಗೊಳ್ಳುವ ಮತ್ತು ಉಲ್ಬಣಗೊಳ್ಳುವ ಕುರಿತು ಇವು ಅಮೂಲ್ಯವಾದ ಒಳನೋಟಗಳನ್ನು ನೀಡಿವೆ. ಆದರೆ ಇವುಗಳಲ್ಲಿ ಬಹುಪಾಲು ಅಧ್ಯಯನಗಳು ಹಿಂಸಾಚಾರದ ಹೊರರೂಪವನ್ನಷ್ಟೆ ತಮ್ಮ ಕೇಂದ್ರವಾಗಿಟ್ಟುಕೊಂಡಿದ್ದು, ಅದೇ ಹಿಂಸೆಯ ಒಳರೂಪವನ್ನು ಶೋಧಿಸುವ ಪ್ರಯತ್ನಗಳು ಮಾತ್ರ ಅತಿವಿರಳವಾಗಿವೆ. ಈ ಎರಡನೆಯ ಮಾದರಿಯ, ಸೂಕ್ಷ್ಮ ರೀತಿಯ ಅಧ್ಯಯನಗಳ ಹಿರಿಮೆಯೆಂದರೆ ಅವು ಹಿಂಸೆಯ ಕೆಲವು ಅಗೋಚರವಾದ ಆಯಾಮಗಳನ್ನು ಬಹಿರಂಗಗೊಳಿಸಬಲ್ಲವು; ಈವರೆಗೂ ಗುಪ್ತವಾಗುಳಿದಿದ್ದ ಅದರ ಅನೇಕ ಮುಖಗಳನ್ನು ಅಚ್ಚರಿ ಹುಟ್ಟಿಸುವ ಬಗೆಯಲ್ಲಿ ಅನಾವರಣಗೊಳಿಸಬಲ್ಲವು. ಇಂಥದೊಂದು ದರ್ಶನ ನನಗಾದದ್ದು ನಾವು ಕೆಲವರು ಮಿತ್ರರು ಸೇರಿ ಇತ್ತೀಚೆಗೆ ಕೈಗೊಂಡ ಭಾರತ-ಪಾಕಿಸ್ತಾನ ದೇಶವಿಭಜನೆಯ ಅನುಭವಗಳ ಹಾಗೂ ನೆನಪುಗಳ ಕುರಿತ ವಿಸ್ತಾರವಾದೊಂದು ಕ್ಷೇತ್ರಾಧ್ಯಯನದಲ್ಲಿ, ಅದರ ಭಾಗವಾಗಿ ಅನೇಕಾನೇಕ ಜನರೊಂದಿಗೆ ನಾವು ನಡೆಸಿದ ಸಂದರ್ಶನಗಳಲ್ಲಿ. ಇಲ್ಲಿ ನಾನು ಆ ಅಧ್ಯಯನ ತೋರಿಸಿಕೊಟ್ಟ ಕೆಲವು ಅಪರೂಪದ ಸತ್ಯಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ.

ಆಧುನಿಕ ಭಾರತದ ಇತಿಹಾಸವನ್ನು ಗಾಢವಾಗಿ ಪ್ರಭಾವಿಸಿದ ಹಾಗೂ ಇನ್ನೂ ಪ್ರಭಾವಿಸುತ್ತಿರುವ ವಿದ್ಯಮಾನಗಳಲ್ಲಿ ೧೯೪೭ - ೪೮ರ ಅವಧಿಯಲ್ಲಿ ದೇಶ ವಿಭಜನೆಯ ಸಂದರ್ಭದಲ್ಲಿ ನಡೆದ ಕೋಮು ಹಿಂಸಾಚಾರ ಅತ್ಯಂತ ಮುಖ್ಯವಾದುದು. ಇದರಲ್ಲಿ ಪ್ರಾಣ ಕಳೆದುಕೊಂಡವರ ಸಂಖ್ಯೆ ಕೆಲವರ ಅಂದಾಜಿನ ಪ್ರಕಾರ ಒಂದು ಮಿಲಿಯನ್ ಆದರೆ ಇನ್ನು ಕೆಲವರ ಅಂದಾಜಿನ ಪ್ರಕಾರ ಐದು ಮಿಲಿಯನ್. ಈ ಬಗೆಯ ಎಲ್ಲಾ ಲೆಕ್ಕಾಚಾರಗಳಲ್ಲಿಯೂ ಆಗುವಂತೆ ಇಲ್ಲಿಯೂ ಸಹ ಒಂದು ಅಂದಾಜು ತೀರ ಕಡಿಮೆಯಾದುದೆಂದೂ ಇನ್ನೊಂದು ತೀರಾ ಜಾಸ್ತಿಯಾದುದೆಂದೂ ಅನಿಸಿ, ಅವೆರಡರ ನಡುವಿನ ಒಂದು ಸಂಖ್ಯೆಯೆ ಸತ್ಯಕ್ಕೆ ಹೆಚ್ಚು ಹತ್ತಿರವಿರುತ್ತದೆ ಎಂಬ ತರ್ಕದ ಪ್ರಕಾರ ಲೆಕ್ಕಹಾಕಿದರೂ ಆ ಮಧ್ಯಮ ಅಂಕಿಯೆ ಎರಡೂವರೆ ಮಿಲಿಯನ್ ಮುಟ್ಟುತ್ತದೆಯೆಂಬುದು ದಿಗಿಲು ಹುಟ್ಟಿಸುತ್ತದೆ. ಈ ಎರಡೂವರೆ ಮಿಲಿಯನ್‌ನಲ್ಲಿ

ಸುಮಾರು ಒಂದು ಮಿಲಿಯನ್ ಜನರು ಹಿಂಸಾಕಾಂಡದ ನೇರ ಬಲಿಗಳಾಗಿದ್ದಿರಬಹುದು; ಇನ್ನೊಂದು ಮಿಲಿಯನ್ ಜನರು – ದಿಢೀರೆಂದು ಕೈಗೊಳ್ಳಬೇಕಾಗಿಬಂದ ಆ ದೇಶಾಂತರ ವಲಸೆಯ ಪ್ರಯಾಸದಿಂದ ಜರ್ಝರಿತರಾಗಿ ಮಾರ್ಗಮಧ್ಯದಲ್ಲೊ ಇಲ್ಲ ಗುರಿಮುಟ್ಟುತ್ತಿದ್ದಂತೆಯೊ ಪ್ರಾಣ ಕಳೆದುಕೊಂಡ ವೃದ್ಧರು ಹಾಗೂ ಬಾಲರಂಥವರು – ಅದರ ಪರೋಕ್ಷ ಬಲಿಗಳು ಆಗಿರಬಹುದು; ಉಳಿದ ಅರ್ಧ ಮಿಲಿಯನ್ ಜನ, ದಾರಿಯುದ್ದಕ್ಕೂ ಸ್ವತಃ ಅನುಭವಿಸುತ್ತಾ ಕಣ್ಣಾರೆ ನೋಡುತ್ತಾ ಬಂದ ಆ ರಾಕ್ಷಸೀಯ ಹಿಂಸಾಚಾರದಿಂದ ತತ್ತರಿಸಿಹೋಗಿ ದಿನ-ವಾರ-ತಿಂಗಳುಗಳಷ್ಟು ಹೃಸ್ವಾವಧಿಯಲ್ಲಿಯೆ ಅಸು ನೀಗಿದವರಿರಬಹುದು.

ದೇಶವಿಭಜನೆಯ ಕಾಲದ ಈ ಹಿಂಸೆ ಅರವತ್ತು ವರ್ಷಗಳ ಹಿಂದೆಂದೋ ನಡೆದುಹೋದ, ಇಂದು ನಮ್ಮ ನೆನಪಿನ ಅಂಚಿಗೆಲ್ಲೋ ಸರಿದುಹೋಗಿರುವ ಘಟನೆಯಾಗಿಲ್ಲ. ಬದಲಿಗೆ ಅದು ಇಂದಿಗೂ ಉತ್ತರ ಭಾರತದಲ್ಲಿ, ವಿಶೇಷವಾಗಿ ಭಾರತ ಮತ್ತು ಪಾಕಿಸ್ತಾನಗಳ ಗಡಿಯ ಆಚೀಚಿನ ಪ್ರದೇಶಗಳಲ್ಲಿನ ಜನಮಾನಸ ದಲ್ಲಿ ಅತೀವ ನೋವಿನ ಸ್ಮೃತಿಗಳ ರೂಪದಲ್ಲಿ ಅಚ್ಚೊತ್ತಿ ಕೂತಿರುವಂತಹ ಘಟನೆಯೆ ಆಗಿದೆ. ಆ ಹಿಂಸಾಕಾಂಡದ ನೆನಪಿನ ತೀವ್ರತೆ ಎಷ್ಟಿರಬಹುದೆಂಬುದಕ್ಕೆ ಇಲ್ಲಿ ಕೆಲವು ಉದಾಹರಣೆಗಳನ್ನು ನೋಡಬಹುದು. ಇಲ್ಲಿ ನಾನು ಉಲ್ಲೇಖಿಸ ಬಯಸುವ ಮೊದಲ ಎರಡು ಉದಾಹರಣೆಗಳು ಪ್ರಮುಖ ವ್ಯಕ್ತಿಗಳಿಗೆ ಸಂಬಂಧಿಸಿದಂಥವು ಹಾಗೂ ಎರಡೂ ಪ್ರಾತಿನಿಧಿಕವಾಗಿರುವಂಥವು.

ಮೊದಲ ನಿದರ್ಶನ ಎ. ಕ್ಯೂ. ಖಾನರಿಗೆ ಸಂಬಂಧಿಸಿದ್ದು. ಪಾಕಿಸ್ತಾನಿ ಅಣುಬಾಂಬಿನ ಜನಕನೆಂದೆ ಪ್ರಸಿದ್ಧರಾದ ಖಾನ್ ಮೂಲತಃ ಅವಿಭಜಿತ ಭಾರತದಲ್ಲಿ ಹುಟ್ಟಿ ಬೆಳೆದವರು, ವಿಭಜನೆಯ ಕಾಲಕ್ಕೆ ವಲಸೆ ಹೋಗಿ ಪಾಕಿಸ್ತಾನದಲ್ಲಿ ನೆಲೆಸಿದವರು. ಪಾಕಿಸ್ತಾನಕ್ಕೆ ಅಣ್ವಸ್ತ್ರವನ್ನು ತಯಾರಿಸಿಕೊಟ್ಟು ಅವರು ಅಂತಾರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದ ಅನಂತರದಲ್ಲಿ ಹಿರಿಯ ಹಾಗೂ ಹೆಸರಾಂತ ಭಾರತೀಯ ಪತ್ರಕರ್ತ ಕುಲದೀಪ್ ನಯ್ಯರ್ ಅವರನ್ನು ಒಮ್ಮೆ ಸಂದರ್ಶಿಸಿದ್ದರು. ಆ ಸಂದರ್ಶನದಲ್ಲಿ ನಯ್ಯರ್ ಖಾನರನ್ನು ಹೀಗೊಂದು ಪ್ರಶ್ನೆ ಕೇಳಿದರು: ಸಾಮಾನ್ಯ ತಿಳುವಳಿಕೆಗೂ ಹೊಳೆಯುವಂತೆ, ನೀವು ತಯಾರಿಸಿದ ಅಣುಬಾಂಬನ್ನು ನಿಮ್ಮ ದೇಶ ಭಾರತದ ಮೇಲೆಯೇ ಪ್ರಯೋಗಿಸುವುದು. ಹಾಗೆ ಮಾಡುವಾಗ ಅದನ್ನು ಭಾರತದ ಯಾವ ಭಾಗದ ಮೇಲೆ ಹಾಕುತ್ತೀರಿ – ದೆಹಲಿಯ ಮೇಲೋ, ಕಲಕತ್ತೆಯ ಮೇಲೋ, ಮುಂಬಯಿಯ ಮೇಲೋ ಇಲ್ಲ ಮದರಾಸಿನ ಮೇಲೋ? ಇವುಗಳಲ್ಲಿ ಯಾವ ನಗರವನ್ನು ಗುರಿಯಾಗಿಟ್ಟುಕೊಂಡರೂ ಸಹ ನೀವು ಹುಟ್ಟಿ ಬೆಳೆದ ನಗರ ಭೂಪಾಲ್



ಕೂಡ ಆ ಬಾಂಬಿಗೆ ಬಲಿಯಾಗುತ್ತದಲ್ಲವೆ? ನಿಮಗೆ ಜನ್ಮ ಕೊಟ್ಟ ಊರು ಹೀಗೆ ನಿಮ್ಮದೆ ಸೃಷ್ಟಿಯ ಬಾಂಬಿನಿಂದ ಸರ್ವನಾಶವಾಗಬಹುದು ಎಂಬ ಅರಿವು ನಿಮ್ಮಲ್ಲಿ ಯಾವುದೆ ವಿಷಾದವನ್ನಾಗಲಿ ಇಲ್ಲ ವಿಹ್ವಲತೆಯನ್ನಾಗಲಿ ಮೂಡಿಸುವುದಿಲ್ಲವೆ? ಈ ಪ್ರಶ್ನೆಗೆ ಖಾನ್ ಕೊಟ್ಟ ಉತ್ತರ ತುಂಬ ನೇರವಾಗಿತ್ತು, ಸರಳವಾಗಿತ್ತು, ಯಾವ ದ್ವಂದ್ವಭಾವವೂ ಇಲ್ಲದಂತಿತ್ತು. ಖಾನ್ ಹೇಳಿದರು, ಹೌದು, ನಾನು ಹುಟ್ಟಿ ಬೆಳೆದದ್ದು ಭೂಪಾಲಿನಲ್ಲಿ ಎಂಬುದನ್ನು ನಾನು ಮರೆತಿಲ್ಲ. ಆದರೆ ನನ್ನ ಹುಟ್ಟೂರು ನನ್ನ ಬಾಂಬಿನಿಂದ ಅಳಿದುಹೋಗುವುದೆಂಬುದರ ಬಗ್ಗೆ ನನಗೆ ಯಾವುದೆ ಸಂಕಟವಿಲ್ಲ. ಯಾಕೆಂದರೆ ಭೂಪಾಲಿನ ಬಗ್ಗೆ ನನಗೆ ಯಾವುದೆ ಪ್ರೀತಿಯ ಅಥವಾ ಸಿಹಿಯಾದ ನೆನಪೂ ಉಳಿದಿಲ್ಲ. ನನ್ನ ಬಾಲ್ಯದ ಬಗ್ಗೆ ನನ್ನ ಮನದಲ್ಲಿ ಈಗ ಉಳಿದಿರುವುದು ಇದೊಂದು ಚಿತ್ರ ಮಾತ್ರ -- ನಾನಾಗ ಸಣ್ಣ ಹುಡುಗನಾಗಿದ್ದೆ; ಭೂಪಾಲಿನಲ್ಲಿ ಹಿಂದೂ ಮೂಲಭೂತವಾದಿಗಳ ಹಿಂಸೆಯನ್ನು ತಾಳಿಕೊಳ್ಳಲಾಗದೆ, ಹೇಗಾದರೂ ಜೀವ ಉಳಿಸಿಕೊಳ್ಳಲೆಂದು ಗುಜರಾತ ಮತ್ತು ರಾಜಸ್ತಾನಗಳ ಮುಖಾಂತರ ಹಾದು ಪಾಕಿಸ್ತಾನದ ಗಡಿಯತ್ತ ಓಡಿ ಸಾಗುತ್ತಿದ್ದ ನಿಸ್ಸಹಾಯಕ ಹುಡುಗನಾಗಿದ್ದೆ. ಈ ನೆನಪು ನನ್ನನ್ನು ಈವರೆಗೂ ಕಾಡುವುದು ಬಿಟ್ಟಿಲ್ಲ. ಅದನ್ನು ನನ್ನ ಮನದಿಂದ ಕಿತ್ತೊಗೆಯಲು ನನಗಿರುವ ಮಾರ್ಗ ಇದೊಂದೆ: ಇಂಥ ನೋವಿಗೆ ಕಾರಣವಾದ ಭೂಪಾಲಿನ ಮೇಲೆ ಬಾಂಬನ್ನು ಹಾಕಿ ಆ ನಗರವನ್ನೆ ಭಸ್ಮಮಾಡಬೇಕು. ಖಾನರ ಈ ಉತ್ತರ ಶೀತಲಕ್ರೌರ್ಯದಿಂದ ತುಂಬಿದುದಾಗಿತ್ತು; ತಾನು ಅನುಭವಿಸಿದ ಹಿಂಸೆಗೆ ಸರಿಯಾದ ಉತ್ತರ ಇನ್ನೂ ಘೋರವಾದ ಪ್ರತಿಹಿಂಸೆ ಯಲ್ಲದೆ ಬೇರೇನೂ ಅಲ್ಲ ಎಂಬ ದ್ವಂದ್ವಾತೀತ ನಿಲುವನ್ನು ತೋರುತ್ತಿತ್ತು.

ಎರಡನೆಯ ನಿದರ್ಶನ ಲಾರ್ಡ್ ಮೌಂಟ್‌ಬ್ಯಾಟನ್‌ಗೆ ಸಂಬಂಧಿಸಿದ್ದು; ಎ. ಕ್ಯೂ. ಖಾನರ ಕಥೆಯಂತೆ ಹಿಂಸೆ-ಪ್ರತಿಹಿಂಸೆಗಳ ಅಂಶವನ್ನು ಒಳಗೊಳ್ಳದಿದ್ದರೂ ಇದು ಇನ್ನೊಂದೆ ಬಗೆಯ ಸಂಘರ್ಷವನ್ನು -- ಅಂತರಂಗ ಮತ್ತು ಬಹಿರಂಗಗಳ ಸಂಘರ್ಷವನ್ನು – ಒಳಗೊಂಡದ್ದು. ಮೌಂಟ್‌ಬ್ಯಾಟನ್ ೧೯೪೭-೪೮ರ ಆ ಚಾರಿತ್ರಿಕ ಅವಧಿಯಲ್ಲಿ ಭಾರತದ ವೈಸ್‌ರಾಯರಾಗಿದ್ದರು. ದೇಶವಿಭಜನೆಯ ನಿರ್ಣಯವನ್ನು ಜಾರಿಗೆ ತರುವ ಹಾಗೂ ಆ ಇಡೀ ಪ್ರಕ್ರಿಯೆ ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳುವ ಹೊಣೆ ಅವರದಾಗಿತ್ತು. ಇಂಥ ಗುರುತರ ಜವಾಬ್ದಾರಿಯನ್ನು ಹೊತ್ತಿದ್ದ ಅವರು ಭಾರತ ಮತ್ತು ಪಾಕಿಸ್ತಾನಗಳು ಎರಡು ಸ್ವತಂತ್ರ ರಾಷ್ಟ್ರಗಳಾಗಿ ಒಡೆದುಮೂಡುತ್ತಿದ್ದಂತೆಯೆ ಅಲ್ಲಿಯವರೆಗೆ ಅವೆರಡು ದೇಶಗಳ ಗಡಿಭಾಗದಲ್ಲಿದ್ದ ಬ್ರಿಟಿಷ್ ಸೇನೆಯನ್ನು ಇಡಿಯಾಗಿ ಹಿಂದಕ್ಕೆ ಕರೆಸಿಕೊಂಡರು. ಬ್ರಿಟನ್ ಅದಾಗಲೆ

ಈಯೆರಡು ದೇಶಗಳಿಗೆ ಸ್ವಾತಂತ್ರ್ಯ ನೀಡಿಯಾಗಿತ್ತೆಂಬುದೇನೋ ಹೌದು, ಆದರೆ ಅಧಿಕಾರ ಹಸ್ತಾಂತರದ ಪ್ರಕ್ರಿಯೆ ಇನ್ನೂ ಹಲವಾರು ತಿಂಗಳುಗಳ ಅನಂತರವೆ, ಇನ್ನೂ ಹಲವಾರು ತಾಂತ್ರಿಕ ವಿಧಿವಿಧಾನಗಳ ಅನಂತರವೆ ಸಂಪೂರ್ಣ ಗೊಳ್ಳುವುದಿತ್ತು. ಆ ಅಂತಿಮ ಹಂತದವರೆಗೂ ಮೌಂಟ್‌ಬ್ಯಾಟನ್ ತಮ್ಮ ಅಧಿಕಾರವನ್ನು ಚಲಾಯಿಸ ಬಹುದಿತ್ತು; ಗಡಿಯಲ್ಲಿದ್ದ ಸೈನ್ಯವನ್ನು ಅಲ್ಲಿಯೇ ಉಳಿಸಿಕೊಂಡು ಎಷ್ಟೋ ಹಿಂಸೆಯನ್ನು ತಡೆಯಬಹುದಿತ್ತು. ಆದರೆ ಅದೇನು ಅತಿಬುದ್ಧಿವಂತಿಕೆಯಿಂದಲೋ ಇಲ್ಲ ತಿಳುವಳಿಕೆಯ ಕೊರತೆಯಿಂದಲೋ ತಿಳಿಯದು, ವಿಭಜನೆಯಿಂದ ಸೃಷ್ಟಿಯಾದ ಎರಡು ದೇಶಗಳ ಜನಸಮುದಾಯಗಳ ನಡುವೆ ಭೀಕರ ಹಿಂಸೆ ಭುಗಿಲೆದ್ದ ಹೊತ್ತಿನಲ್ಲೆ ಅವರು ತಮ್ಮ ಅಧಿಕಾರದಡಿಯಿದ್ದ ಆ ಸೈನ್ಯವನ್ನು ಗಡಿಯಿಂದ ಹಿಂತೆಗೆದುಕೊಂಡರು. ಇದರ ಪರಿಣಾಮವಾಗಿ ಯಾರ ಅಂಕೆಯೂ ಇಲ್ಲದಂತೆ ಬೆಳೆದ ಆ ಹಿಂಸೆ ಮುಂದೆ ಲಕ್ಷಾನುಗಟ್ಟಲೆ ಜನರನ್ನು ಬಲಿತೆಗೆದುಕೊಂಡಿತು. (ಇತ್ತೀಚೆಗಷ್ಟೆ ಪ್ರಕಟವಾದ 'ದ ಶೇಮ್‌ಫುಲ್ ರಿಟ್ರೀಟ್' ಎಂಬ ಪುಸ್ತಕದಲ್ಲಿ ಈ ಇಡೀ ಘಟನಾವಳಿಯ ಬಗ್ಗೆ ಇನ್ನಷ್ಟು ಹೊಸ ಒಳನೋಟ ಗಳನ್ನು ಕಾಣಬಹುದು.)

ತನಗಿದ್ದ ಅಧಿಕಾರವನ್ನು ವಿವೇಚನೆಯಿಂದ ಚಲಾಯಿಸದೆಯೆ ಲಕ್ಷೋಪಲಕ್ಷ ಜನರ ಸಾವಿಗೆ ತಾನು ಪರೋಕ್ಷವಾಗಿಯಾದರೂ ಕಾರಣನಾದೆ ಎಂಬ ವೇದನೆ ಮೌಂಟ್‌ಬ್ಯಾಟನ್‌ರನ್ನು ಕೊನೆಯವರೆಗೂ ತುಂಬಾ ಆಳವಾಗಿ ಬಾಧಿಸಿರಬೇಕು. ಹಾಗೆಂದೆ ಅವರು ತಾವು ತೀರಿಕೊಳ್ಳುವ ಕೆಲವೆ ವರ್ಷಗಳ ಮೊದಲು ನೀಡಿದ ಸಂದರ್ಶನವೊಂದರಲ್ಲಿ ಹೀಗೆ ಹೇಳಿಕೊಂಡರು: ಹೌದು, ಆಗ ನಾನು ಹಾಗೆ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಂಡು ಕನಿಷ್ಠ ಒಂದು ಮಿಲಿಯನ್ ಜನರ ಸಾವಿಗೆ ಕಾರಣನಾದೆ ಎಂಬ ಭಾವನೆ ಇಂದಿಗೂ ನನ್ನನ್ನು ಕಾಡುತ್ತದೆ. ನಾಳೆ ನಾನು ಪರಲೋಕದಲ್ಲಿ ದೇವರ ಎದುರು ನಿಂತು ನನ್ನ ಪಾಪ-ಪುಣ್ಯಗಳ ಲೆಕ್ಕ ಒಪ್ಪಿಸುವಾಗ ಈ ಒಂದು ಕೃತ್ಯ ನನ್ನಲ್ಲಿ ದೊಡ್ಡದೊಂದು ಕುಂದಾಗಿ ಕಂಡುಬರುವುದರಲ್ಲಿ ಯಾವುದೆ ಸಂದೇಹವಿಲ್ಲ. ಈ ಕೃತ್ಯವನ್ನು ನಾನು ಯಾವುದಾದರೂ ಬಗೆಯಲ್ಲಿ ಸಮರ್ಥಿಸಿ ಕೊಳ್ಳಬಲ್ಲೆನೆಂಬ ಯಾವ ಧೈರ್ಯವೂ ನನ್ನಲ್ಲಿಲ್ಲ. ಆದರೆ ಅದೇ ವೇಳೆಗೆ ನಾನು ಗೈದ ಇನ್ನೊಂದು ಕೃತ್ಯದ ನೆನಪೂ ನನ್ನಲ್ಲಿ ಅಷ್ಟೆ ಗಾಢವಾಗಿ ಉಳಿದಿದೆ. ಆ ಕೃತ್ಯವನ್ನು ನಾನು ನನ್ನ ಆತ್ಮಸಮರ್ಥನೆಗೆಂದು ಸ್ವಲ್ಪವಾದರೂ ಬಳಸಿಕೊಳ್ಳಬಲ್ಲೆ. ಅದೇನೆಂದರೆ, ಅದೇ ಕಾಲಘಟ್ಟದಲ್ಲಿ ಬ್ರಿಟಿಷ್ ಸೈನ್ಯಕ್ಕೆಂದು ಆಹಾರಸಾಮಗ್ರಿಗಳನ್ನು ಹೊತ್ತ ಕೆಲವು ಹಡಗುಗಳು ಭಾರತದತ್ತ ಬರುತ್ತಿದ್ದವು. ಸೈನಿಕರಿಗೆಂದೆ ಮೀಸಲಾಗಿದ್ದ ಆ ಹಡಗುಗಳನ್ನು ನಾನು, ನನ್ನ ಮೇಲಿನವರ ಆಜ್ಞೆಯನ್ನೂ ಲೆಕ್ಕಿಸದೆ, ಬಂಗಾಳಕ್ಕೆ ತರಿಸಿಕೊಂಡು ಅಲ್ಲಿದ್ದ ನಿರಾಶ್ರಿತರ



ಆಹಾರ ಸಮಸ್ಯೆಯನ್ನು ನೀಗಿಸಿದೆ; ಆಮೂಲಕ ಸುಮಾರು ಒಂದೂವರೆ ಮಿಲಿಯನ್ ಜನರ ಜೀವಗಳನ್ನು ಉಳಿಸುವಲ್ಲಿ ನೆರವಾದೆ. ಇದೊಂದು ಕೃತ್ಯದ ಬಲದ ಮೇಲಾದರೂ ನಾನು ದೇವರೆದುರು ತುಸುವಾದರೂ ಆತ್ಮಸ್ಥೈರ್ಯದಿಂದ ನಿಂತು ನನ್ನ ಪಾಪ-ಪುಣ್ಯಗಳ ತಃಖ್ತೆ ನಿವೇದಿಸಿಕೊಳ್ಳಬಲ್ಲೆ.

ಆದರೆ, ದೇಶವಿಭಜನೆಯ ಕಾಲದ ಈ ಹಿಂಸಾಚಾರವನ್ನು ಅನುಭವಿಸಿ ದವರಲ್ಲಿ ಮತ್ತು ಕಂಡವರಲ್ಲಿ ಎಲ್ಲರೂ ಅದರ ಕುರಿತು ಇದೇ ರೀತಿ ವ್ಯಗ್ರವಾಗಿಯೋ, ವ್ಯಾಕುಲಚಿತ್ತರಾಗಿಯೋ ಇಲ್ಲ ನಿರುದ್ವಿಗ್ನರಾಗಿಯೋ ಭಾವನಿರಪೇಕ್ಷರಾಗಿಯೋ ತಮ್ಮ ಅಂತರಂಗಕ್ಕೆ ಬಹಿರಂಗದಲ್ಲಿ ಅಭಿವ್ಯಕ್ತಿಯನ್ನು ಕೊಟ್ಟುಕೊಂಡರೆಂದೇನಿಲ್ಲ; ಖಾನರಂತೆ ಮೌಂಟ್‌ಬ್ಯಾಟನ್ನರಂತೆ ತಮ್ಮ ಒಳಗನ್ನು ಸಾರ್ವಜನಿಕವಾಗಿ ಹೊರಗೆ ಪ್ರಕಟಪಡಿಸಿದರೆಂದೇನಿಲ್ಲ. ವಾಸ್ತವದಲ್ಲಿ ಅವರಲ್ಲಿ ಗಣನೀಯ ಪ್ರಮಾಣದ ಜನ ಇದಕ್ಕೆ ತೀರಾ ವ್ಯತಿರಿಕ್ತವಾದ ರೀತಿಯಲ್ಲೆ ನಡೆದುಕೊಂಡಿದ್ದಾರೆ, ಸಹಜ ಅಭಿವ್ಯಕ್ತಿಯ ಕ್ರಮಗಳನ್ನು ಬಿಟ್ಟು ಅಸಹಜ ಮೌನಕ್ಕೆ ಮೊರೆಹೋಗಿದ್ದಾರೆ. ದೇಶವಿಭಜನೆಯ ಕಾಲದ ಈ ಹಿಂಸಾಚಾರ ಒಂದೆಡೆ ನಮ್ಮ ಸಾಮುದಾಯಿಕ ಸ್ಮೃತಿಯನ್ನೂ ಹಾಗೂ ವ್ಯಕ್ತಿಸ್ಮೃತಿಗಳನ್ನೂ ತುಂಬಾ ಆಳವಾಗಿ ಕಾಡಿರುವುದು ಹೌದಾದರೂ ಇನ್ನೊಂದೆಡೆ ಅದರ ಕುರಿತು ಗಾಢವೂ ವಿಲಕ್ಷಣವೂ ಆದ ಮಹಾಮೌನವೊಂದು ಇದೇ ಸ್ಮೃತಿರೂಪಗಳಲ್ಲಿ ನೆಲೆಯಾಗಿ ನಿಂತಿದೆ. ನಾವು ಇಲ್ಲಿಯವರೆಗೆ ಕಂಡುಕೊಂಡಿರುವ ಹಿಂಸೆಯ ಕುರಿತಾದ ಪ್ರತಿಸ್ಪಂದನೆಯ ರೂಪಗಳಲ್ಲೆ ಇದು ಅತ್ಯಂತ ಸಂಕೀರ್ಣ ವಾದುದು. ಈ ಬಗೆಯ ಅಸಹಜ ಮೌನವನ್ನು ಮನೋವಿಜ್ಞಾನ ಮ್ಯೂಟಿಸಮ್ ಎಂಬ ಮನೋವ್ಯಾಧಿಸಮಾನಸ್ಥಿತಿಯಾಗಿ, ಅರ್ಥಾತ್ ಕ್ಲಿನಿಕಲ್ ಸಿಂಡ್ರೋಮ್ ಆಗಿ ಗುರುತಿಸುತ್ತದೆ. ಮ್ಯೂಟಿಸಮ್ (ಮೂಕರೋಗ-ಮೂಕಬೇನೆ-ಮೂಕವ್ಯಾಧಿ) ಎಂಬುದು ನಮ್ಮನ್ನು ಆಳವಾಗಿ ಘಾತಿಸಿದ ಘಟನೆಯೊಂದರ ಬಗ್ಗೆ ನಾವು ಒಂದು ಮಾತನ್ನು ಆಡಲೂ ಇಚ್ಛಿಸದೆ ಸುದೀರ್ಘ ಅವಧಿಯವರೆಗೆ ಮೌನಕ್ಕೆಯೆ ಶರಣಾಗಿರಲು ಇಷ್ಟಪಡುವಂತಹ ಒಂದು ಮಾನಸಿಕ ಸ್ಥಿತಿ. ಈ ಮೌನಶರಣ ರೋಗ ಜನಸಾಮಾನ್ಯರನ್ನು ಮಾತ್ರವಲ್ಲ, ಅಸಾಮಾನ್ಯರನ್ನೂ ಬಿಟ್ಟಿಲ್ಲ. ಇದನ್ನು ಎರಡು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಲೆತ್ನಿಸುತ್ತೇನೆ.

ಇವುಗಳಲ್ಲಿ ಮೊದಲನೆಯದು ಜನಸಾಮಾನ್ಯರ ವಲಯಕ್ಕೆ ಸಂಬಂಧಿಸಿದ ಉದಾಹರಣೆ, ನಮ್ಮ ಕ್ಷೇತ್ರಾಧ್ಯಯನದಲ್ಲಿ ಕಂಡುಬಂದ ಮನಕಲಕುವಂತಹ ಒಂದು ಉದಾಹರಣೆ. ಆ ಅಧ್ಯಯನದಲ್ಲಿ ನಾವು ಭೇಟಿ ಮಾಡಿದವರಲ್ಲಿ ಒಂದು ಗಂಡಹೆಂಡಿರ ಜೋಡಿಯೂ ಸೇರಿತ್ತು. ಆ ಗಂಡು ಹಾಗೂ ಆ ಹೆಣ್ಣು ಇಬ್ಬರೂ

ಪಾಕಿಸ್ತಾನದ ಕಡೆಯಿಂದ ಭಾರತದೆಡೆಗೆ ಓಡಿಬಂದವರಾಗಿದ್ದರು. ಆಗ ಇನ್ನೂ ಎಳೆಯರಾಗಿದ್ದ ಅವರು ಅಲ್ಲಿ, ಬೇರೆಬೇರೆ ಸ್ಥಳಗಳಲ್ಲಿ, ಕೋಮುಗಲಭೆಗಳಲ್ಲಿ ತಮ್ಮ ತಮ್ಮ ಕುಟುಂಬಗಳ ಎಲ್ಲ ಸದಸ್ಯರನ್ನೂ ಕಳೆದುಕೊಂಡಿದ್ದರು. ಭಾರತಕ್ಕೆ ಬಂದು ಆಶ್ರಯ ಪಡೆದುಕೊಳ್ಳುವಷ್ಟರಲ್ಲಿ ಪೂರ್ಣ ಅನಾಥರಾಗಿದ್ದರು. ಮುಂದೆಂದೊ ಒಂದು ದಿನ ಇನ್ನಾವುದೊ ಸ್ಥಳವೊಂದರಲ್ಲಿ ಅವರಿಬ್ಬರ ಪರಿಚಯವಾಗಿ, ಪರಿಚಯ ಪರಸ್ಪರ ಇಷ್ಟವಾಗಿ ಬೆಳೆದು ಅವರು ಮದುವೆಯಾಗಿದ್ದರು. ನಾವು ಅವರ ಸಂದರ್ಶನ ನಡೆಸುವ ವೇಳೆಗೆ ಅವರು ಅದಾಗಲೆ ನಲವತ್ತೈದು ವರ್ಷಗಳಷ್ಟು ಸುದೀರ್ಘ ಕಾಲ ಒಟ್ಟಿಗೆ ಬಾಳಿದ್ದರು, ಮಕ್ಕಳು-ಮೊಮ್ಮಕ್ಕಳನ್ನು ಪಡೆದಿದ್ದರು, ಕಷ್ಟ-ಸುಖ ಹಂಚಿಕೊಂಡಿದ್ದರು. ಆದರೆ ವಿಚಿತ್ರವೆಂದರೆ, ಈ ಅರ್ಧ ಶತಮಾನದಷ್ಟು ಅವಧಿಯಲ್ಲಿ ಅವರು ದೇಶವಿಭಜನೆಯ ಕಾಲದಲ್ಲಿ ತಾವು ಅನುಭವಿಸಿದ್ದ ಹಾಗೂ ಕಂಡಿದ್ದ ಹಿಂಸೆಯ ಬಗ್ಗೆ ತಮ್ಮತಮ್ಮಲ್ಲಿ ಒಂದೇ ಒಂದು ಮಾತನ್ನೂ ಆಡಿಕೊಂಡಿರಲಿಲ್ಲ. ಹೆಂಡತಿ ಹಾಗೆ ಹಿಂಸೆಗೀಡಾಗಿದ್ದಳೆಂಬುದು ಗಂಡನಿಗೆ ಗೊತ್ತಿತ್ತು, ಗಂಡನ ಕಥೆಯೂ ಅದೆಯೆ ಎಂದು ಹೆಂಡತಿಗೆ ತಿಳಿದಿತ್ತು, ಆದರೆ ಆ ಕುರಿತು ಅವರಿಬ್ಬರೂ ಪರಸ್ಪರವಾಗಿ ಒಂದು ಪ್ರಶ್ನೆಯನ್ನೂ ಕೇಳಿರಲಿಲ್ಲ, ಒಂದು ಸಣ್ಣ ವಿವರವನ್ನೂ ಕೊಟ್ಟಿರಲಿಲ್ಲ. ನಲವತ್ತೈದು ವರ್ಷಗಳ ಕಾಲ ದೇಹಮನಗಳೆರಡನ್ನೂ ಹಂಚಿಕೊಂಡು ಅತ್ಯಂತ ಆತ್ಮೀಯವಾಗಿ ಬದುಕಿದ್ದ ಆ ಪತಿ-ಪತ್ನಿಯರು ಇದೊಂದು ವಿಷಯದಲ್ಲಿ ಮಾತ್ರ ಮಾತಾಡದೆಯೆ ಒಪ್ಪಂದವನ್ನು ಮಾಡಿಕೊಂಡಿದ್ದರೆಂಬಂತೆ ಸಂಪೂರ್ಣ ಮೌನವನ್ನು ಆಶ್ರಯಿಸಿ ಕೊಂಡಿದ್ದರು.

ಈ ದಂಪತಿಗಳದ್ದು ಅಪರೂಪದ ಉದಾಹರಣೆಯೇನಾಗಿರಲಿಲ್ಲ. ಏಕೆಂದರೆ ಮುಂದೆ, ದೇಶವಿಭಜನೆಯ ಕಾಲದ ಹಿಂಸಾಕಾಂಡದಿಂದ ಬಾಧಿತ ರಾಗಿದ್ದವರಲ್ಲಿ ಯಾರನ್ನೆಲ್ಲ ನಾವು ಸಂದರ್ಶಿಸಿದೆವೋ ಅವರಲ್ಲಿ ಮೂರನೆ ಒಂದು ಭಾಗದಷ್ಟು ವ್ಯಕ್ತಿಗಳು ತಾವು ಈ ಐವತ್ತಕ್ಕೂ ಹೆಚ್ಚು ವರುಷಗಳಲ್ಲಿ ಆ ಘೋರ ಅನುಭವದ ಕುರಿತು ತಮ್ಮ ಮಕ್ಕಳು ಹಾಗೂ ಮೊಮ್ಮಕ್ಕಳ ಬಳಿ ಒಂದೇ ಒಂದು ಮಾತನ್ನೂ ಆಡಿಲ್ಲವೆಂದು ಹೇಳಿಕೊಂಡರು.

ಈ ಮೌನಶರಣ ಮನೋವಿಕಾರ ಸಾಮಾನ್ಯರನ್ನು ಮಾತ್ರವಲ್ಲದೆ ಅಸಾಮಾನ್ಯರನ್ನೂ ಕಾಡುವ ರೀತಿಗೆ ಖ್ಯಾತ ಮನೋವಿಜ್ಞಾನಿ ಗಿರೀಂದ್ರಶೇಖರ ಬೋಸರದ್ದು ಅತ್ಯಂತ ಮಹತ್ವದ ನಿದರ್ಶನವಾಗಿದೆ. ಗಿರೀಂದ್ರಶೇಖರ ಬೋಸರು (೧೮೮೭-೧೯೫೩) ಭಾರತದಲ್ಲಿ ಆಧುನಿಕ ಮನಶ್ಶಾಸ್ತ್ರಕ್ಕೆ ಅಡಿಪಾಯವನ್ನು ಹಾಕಿಕೊಟ್ಟವರು. ಅವರು ಸಿಗ್ಮಂಡ್ ಫ್ರಾಯ್ಡ್ ಸ್ಥಾಪಿಸಿದ ಮನೋವಿಜ್ಞಾನದ



ಮಾದರಿಯ ಬಹುದೊಡ್ಡ ಪ್ರವರ್ತಕರಾಗಿದ್ದರು ಮಾತ್ರವಲ್ಲದೆ ಜಗತ್ತಿನ ಮೊತ್ತಮೊದಲ ಪಶ್ಚಿಮೇತರ ಸೈಕೋ ಅನಲಿಸ್ಟ್ – ಮನೋವಿಶ್ಲೇಷಕ – ಎಂಬ ಗರಿಮೆಯನ್ನು ಕೂಡ ಪಡೆದುಕೊಂಡಿದ್ದರು. ತಮ್ಮ ವಿಶೇಷ ಆಸಕ್ತಿಯ ಕ್ಷೇತ್ರವಷ್ಟೆ ಅಲ್ಲದೆ ಭಾರತೀಯ ಇತಿಹಾಸ ಹಾಗೂ ಪುರಾಣಗಳ ಬಗ್ಗೆಯೂ ಅವರು ಆಳವಾದ ಅಧ್ಯಯನ ನಡೆಸಿ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಪುರಾಣ ಪ್ರವೇಶ (೧೯೩೪) ಎಂಬ ಗ್ರಂಥ ಸ್ಮೃತಿ-ಪುರಾಣ-ಇತಿಹಾಸ-ಮನಶ್ಶಾಸ್ತ್ರಗಳ ಕುರಿತು ಮಹತ್ವದ ಕಾಣ್ಕೆಗಳನ್ನು ಒಳಗೊಂಡ ಕೃತಿಯಾಗಿದೆ. ಗಿರೀಂದ್ರಶೇಖರರು ವಾಸವಾಗಿದ್ದುದು, ತಮ್ಮ ಅಧ್ಯಯನ ಹಾಗೂ ಬರವಣಿಗೆಗಳನ್ನು ನಡೆಸಿದ್ದು ಕಲಕತ್ತಾ ನಗರದಲ್ಲಿ. ದೇಶವಿಭಜನೆಯ ಕಾಲಕ್ಕೆ ಕಲಕತ್ತಾದಲ್ಲೂ ದೊಡ್ಡದೊಂದು ಹಿಂಸಾಕಾಂಡ ನಡೆಯಿತು. ಗಿರೀಂದ್ರಶೇಖರರಿದ್ದ ಪರಿಸರದಲ್ಲಿಯೆ, ಅವರ ಮನೆಯಿಂದ ಕೆಲವೆ ಮೈಲುಗಳ ಸುತ್ತಳತೆಯಲ್ಲಿಯೆ ಅತ್ಯಂತ ಪಾಶವಿ ಕೃತ್ಯಗಳು ಜರುಗಿದವು. ಅವರು ಅವುಗಳನ್ನು ಕಣ್ಣಾರೆ ಕಂಡಿದ್ದರು ಕೂಡ. ಆದರೆ ವಿಚಿತ್ರವೆಂದರೆ ಮುಂದೆ ಅವರು ಆ ಹಿಂಸೆಯ ಕುರಿತು ಒಂದು ಪುಸ್ತಕ ಇಲ್ಲ ಒಂದು ಲೇಖನವಲ್ಲ ಒಂದೇ ಒಂದು ಸಾಲನ್ನು ಸಹ ಬರೆಯಲಿಲ್ಲ. ಪುರಾಣ, ಇತಿಹಾಸ, ಮನೋವಿಜ್ಞಾನ ಇತ್ಯಾದಿ ಗಳಲ್ಲೆಲ್ಲ ಅಪರಿಮಿತ ಆಸಕ್ತಿ ಹಾಗೂ ಪರಿಶ್ರಮವಿದ್ದ ಆ ಮೇಧಾವಿ ತಾನು ಪ್ರತ್ಯಕ್ಷಸಾಕ್ಷಿಯಾಗಿ ಕಂಡ ಆ ಘೋರ ನರಮೇಧದ ಬಗ್ಗೆ ಮಾತ್ರ ಕೊನೆಯವರೆಗೂ ವಿಲಕ್ಷಣವಾದ ಮೌನವನ್ನು ಆಶ್ರಯಿಸಿಕೊಂಡಿದ್ದರು.

ದೇಶವಿಭಜನೆಯ ಕಾಲದ ಹಿಂಸಾಕಾಂಡದ ಸ್ಮೃತಿಗಳ ವಿಷಯದಲ್ಲಿ, ನನಗೆ ಕಂಡಂತೆ, ಮೂರನೆಯ ಮಾದರಿಯೂ ಒಂದುಂಟು. ಅಲ್ಲಿ ಆ ಸ್ಮೃತಿಗಳು ಮೇಲೆ ಪ್ರಸ್ತಾಪಿತವಾದ ಮಾತು ಮತ್ತು ಮೌನಗಳ ನಡುವಿನ ಬೇರೊಂದೆ ಅಭಿವ್ಯಕ್ತಿಯ ಉಪಾಯವನ್ನು ಹುಡುಕಿಕೊಂಡಿವೆ, ಕಾಲಾಂತರದಲ್ಲಿ ಸ್ವಾರಸ್ಯದ ಕೆಲವು ರೂಪಾಂತರಗಳ ಪರಿಭಾಷೆಯ ಮೂಲಕ ಸಂವಹಿಸುವುದನ್ನು ಕಲಿತುಕೊಂಡಿವೆ. ಆ ಹಿಂಸಾಕಾಂಡದ ಅನುಭವವಲಯದ ಒಳಗಿನವರಿಗೆ ಸುಲಭದಲ್ಲಿ ದಕ್ಕುವ ರೂಪಕಗಳಾಗಿ ಅವು ತಮ್ಮನ್ನು ಪರಿವರ್ತಿಸಿಕೊಂಡಿವೆ. ಬಿ.ಆರ್. ಚೋಪ್ರಾ ನಿರ್ದೇಶನದ ಖ್ಯಾತ ಹಿಂದಿ ಚಲನಚಿತ್ರ ವಖ್ತ್ (೧೯೬೫) ಇದಕ್ಕೆ ಉತ್ತಮ ವಾದೊಂದು ಉದಾಹರಣೆ. ಆ ಚಿತ್ರ, ತಲತಲಾಂತರದಿಂದ ಒಂದೆಡೆ ನೆಲೆ ಯಾಗಿದ್ದು ಅನಂತರ ಆಕಸ್ಮಿಕ ಕಾರಣದಿಂದ ದೂರದ ಇನ್ನೊಂದೂರಿಗೆ ವಲಸೆ ಹೋಗುವ ಕುಟುಂಬ ವೊಂದರ ವಿಘಟನೆ ಮತ್ತು ಪುನರ್ಮಿಲನದ ಕಥೆಯನ್ನು ಎರಡು ತಲೆಮಾರುಗಳ ಭಿತ್ತಿಯಲ್ಲಿ ನಿರೂಪಿಸುತ್ತದೆ. ಚಿತ್ರದ ಮೊದಲ ದೃಶ್ಯದಲ್ಲಿ ಭೀಕರ ಭೂಕಂಪವೊಂದು

ಘಟಿಸಿ ಆ ಶ್ರೀಮಂತ ವರ್ತಕರ ಕುಟುಂಬ ತನ್ನ ಆಸ್ತಿಪಾಸ್ತಿಯನ್ನು ಕಳೆದುಕೊಳ್ಳುತ್ತದೆ, ಕುಟುಂಬದ ಸದಸ್ಯರು ಹರಿದು ಹಂಚಿಹೋಗುತ್ತಾರೆ. ಇಲ್ಲಿನ ನೈಸರ್ಗಿಕ ವಿಕೋಪದ ಹಾಗೂ ಕುಟುಂಬ ಒಡೆದುಹೋಗುವ ದೃಶ್ಯದ ಸಾಂಕೇತಿಕತೆಯನ್ನು ಕಾಣಲು ಯಾವುದೇ ಮನೋವಿಜ್ಞಾನಿಯ ತಜ್ಞತೆ ಬೇಕಾಗಿಲ್ಲ. ಸರ್ವಸಾಧಾರಣ ಭಾವಶಕ್ತಿಯ ಮನುಷ್ಯರಿಗೂ ಅರ್ಥವಾಗುವಂತೆ ಆ ದುರ್ಘಟನೆಯ ದೃಶ್ಯ ಭೂಪ್ರದೇಶವೊಂದು ಬಿರಿದುಹೋದ ದೃಶ್ಯರೂಪಕ್ಕಿಂತ ಹೆಚ್ಚಾಗಿ ಸಂಕೀರ್ಣಸಂರಚನೆಯ ದೇಶವೊಂದು, ಸಮೃದ್ಧ ಸಮುದಾಯವೊಂದು ವಿಘಟಿತಗೊಂಡಾಗ ಉಂಟಾಗುವ ಆಘಾತದ ರೂಪಕದರ್ಶನವೆ ಹೌದು.

... ... ...

## ಹಿಂಸಾಪ್ರತಿರೋಧದ ಎರಡು ಮಾದರಿಗಳು

ಹಿಂಸೆಯ ವಿಷಯದಲ್ಲಿ ಮಾನವರು ತೋರುವ ಪ್ರತಿಸ್ಪಂದನೆಗಳಲ್ಲಿ ಪ್ರತಿರೋಧವೂ ಒಂದು ಬಗೆಯ ಪ್ರತಿಸ್ಪಂದನೆಯಾಗಿದೆ. ಈ ಪ್ರತಿರೋಧದಲ್ಲಿ ಮತ್ತೆ ಎರಡು ಮುಖ್ಯ ಮಾದರಿಗಳನ್ನು ಕಾಣಬಹುದು. ಅವುಗಳಲ್ಲಿ ಒಂದು ಬಾಹ್ಯಪ್ರತಿರೋಧ, ಇನ್ನೊಂದು ಅಂತಃಪ್ರತಿರೋಧ. ಇದನ್ನು ತುಸು ವಿವರಿಸುವುದಾದರೆ, ಹಿಂಸಾಕಾಂಡಗಳಲ್ಲಿ ಒಂದೆಡೆ ಮಾನವೀಯತೆ ನಷ್ಟಗೊಂಡು ಅಮಾನವೀಯತೆ ಮೆರೆಯುವ ಪ್ರಸಂಗಗಳು ಕಂಡುಬರುತ್ತವೆಯಾದರೆ ಇದಕ್ಕೆ ಪ್ರತಿಯಾಗಿ ಇನ್ನೊಂದೆಡೆ ಈ ಬಗೆಯ ರಾಕ್ಷಸೀಯ ಸಂದರ್ಭಗಳಲ್ಲಿಯೆ ಮನುಷ್ಯಜೀವಿಗಳು ತಮ್ಮ ಮೂಲಮಾನವೀಯತೆಯನ್ನು ಮರಳಿ ಕಂಡುಕೊಳ್ಳುವಂತಹ ಮತ್ತು ಅದನ್ನು ಅನ್ಯ ಮಾನವರ ಹಿತರಕ್ಷಣೆಗೆಂದು ಬಳಸುವಂತಹ ಅನೇಕ ನಿದರ್ಶನಗಳೂ ಕಾಣುತ್ತವೆ. ಬಹುಮುಖ್ಯವಾದ ಸಂಗತಿಯೆಂದರೆ, ಹಿಂಸೆಗೆ ಈಡಾದ ಜನವರ್ಗದಲ್ಲಿ ಮಾತ್ರವಲ್ಲ, ನಂಬಲೆ ಅಸಾಧ್ಯವೆಂಬಂತೆ ಹಿಂಸೆಯನ್ನು ಸೃಷ್ಟಿಸಿದ ಸಮುದಾಯದಲ್ಲೂ, ಅಲ್ಲಿನ ಕೆಲವು ಭಾಗಗಳು ಹಾಗೂ ವ್ಯಕ್ತಿಗಳಲ್ಲಾದರೂ, ಗುಪ್ತವಾದ ಕೆಲವು ರೂಪಗಳಲ್ಲಾದರೂ ಮಾನವಘನತೆ ತನ್ನ ಇರವನ್ನು ಸಾಧಿಸಿತೋರುತ್ತಿರುತ್ತದೆ, ಹಿಂಸೆಗೆ ತನ್ನ ಪ್ರತಿರೋಧವನ್ನು ಒಡ್ಡುತ್ತಿರುತ್ತದೆ. ಈ ಬಗೆಯ ಹಿಂಸಾಪ್ರತಿರೋಧ ಸಮುದಾಯ ಭಾಗಗಳ ಮತ್ತು ವ್ಯಕ್ತಿಗಳ ಬಹಿರಂಗದ ನಡವಳಿಕೆಯಲ್ಲಿ ಪ್ರಕಟವಾಗುವುದರಿಂದ ಅದನ್ನು ಬಾಹ್ಯಪ್ರತಿರೋಧವೆಂದು ಕರೆಯಬಹುದು.

ಮತ್ತೊಂದೆಡೆ, ಸಮುದಾಯ ಭಾಗಗಳು ಮತ್ತು ವ್ಯಕ್ತಿಗಳು ಬಹಿರಂಗದಲ್ಲಿ ಹಿಂಸೆಯ ಪ್ರತಿಪಾದನೆ - ಸಮರ್ಥನೆ - ಪ್ರಯೋಗಗಳಲ್ಲಿ ಬಲವಾಗಿ ತೊಡಗಿ



ಕೊಂಡಿದ್ದರೂ ಅವರ ಅಂತರಂಗ ಆ ಕುರಿತು ತೀವ್ರವಾದ ದ್ವಂದ್ವದಲ್ಲಿ ತೊಳಲಾಡುತ್ತಿರುತ್ತದೆ. ಹಿಂಸೆಯಲ್ಲಿ ತೊಡಗಿದ ವ್ಯಕ್ತಿಗೆ ಹಿಂಸೆಯಲ್ಲಿ ತೊಡಗಿದ ಸಮಯದಲ್ಲಿ ತನ್ನ ಆ ಅಂತರ್‍ದ್ವಂದ್ವ ಗೋಚರಿಸದಿರಬಹುದು, ಅದು ಮುಂದೆಯೂ ಸಹ ವರ್ಷಗಟ್ಟಲೆ ದಶಕಗಟ್ಟಲೆ ಆತನ ಜಾಗೃತ ಮನಸ್ಸಿನ ತಿಳುವಳಿಕೆಗೆ ಬಾರದೆ ಉಳಿಯಬಹುದು. ಆತನೊಳಗಿನ ಈ ಸುಪ್ತಸಂಘರ್ಷ ಆತನೊಂದಿಗೆ ದೀರ್ಘಕಾಲ ಬಾಳಿದವರಿಗೂ ಅರಿವಾಗದಿರಬಹುದು. ಆದರದು ಆತನ ಮನೋಲೋಕದೊಳಗೆ ಮೂಲಭೂತವಾದ ಪಲ್ಲಟಗಳನ್ನು ಉಂಟುಮಾಡಿರುತ್ತದೆ, ಅಲ್ಲಿ ಅನೇಕ ಬಗೆಯ ರೂಪಾಂತರ ಹಾಗೂ ವಿರೂಪಾಂತರಗಳನ್ನು ಪಡೆದುಕೊಂಡು ಬಹಿರಂಗದ ಹಿಂಸೆಗೆ ಪ್ರತಿಯಾಗಿ ತನ್ನದೆ ಒಂದು ಬಗೆಯ ಸಂದಿಗ್ಧಮಯ ಸ್ಪಂದನವನ್ನು ಸೂಕ್ಷ್ಮಾತಿಸೂಕ್ಷ್ಮವಾಗಿ ತೋರುತ್ತಿರುತ್ತದೆ. ಈ ಬಗೆಯ ಹಿಂಸಾಪ್ರತಿರೋಧ ಅಂತರಂಗದ ಸ್ತರದಲ್ಲಿ ಕಂಡುಬರುವುದರಿಂದ ಇದನ್ನು ಅಂತಃಪ್ರತಿರೋಧವೆಂದು ಗುರುತಿಸಬಹುದು.

ಇನ್ನು ನಮ್ಮ ದೇಶವಿಭಜನೆಯ ಕಾಲದ ಹಿಂಸಾಕಾಂಡವನ್ನು ಹಿನ್ನೆಲೆಯಾಗಿಟ್ಟುಕೊಂಡು ಇವೆರಡೂ ಹಿಂಸಾಪ್ರತಿರೋಧ ಮಾದರಿಗಳ ಬಗ್ಗೆ ಸ್ಥೂಲವಾದೊಂದು ಚರ್ಚೆಯನ್ನು ನಡೆಸಬಹುದು.

### ಬಾಹ್ಯಪ್ರತಿರೋಧದ ಮಾದರಿಗಳು

ಹಿಂಸೆಯ ಕುರಿತಾದ ಬಾಹ್ಯಪ್ರತಿರೋಧವನ್ನು ಮಾನವೀಯತೆಯನ್ನು ಪುನಃ ಸ್ಥಾಪಿಸುವ ಮಾದರಿಯೆಂದು ನೋಡಿದೆವಲ್ಲ, ಆದರೆ ಈವರೆಗಿನ ಅಧಿಕೃತ ದಾಖಲೆಗಳು, ಇತಿಹಾಸಲೇಖನದ ಕ್ರಮಗಳು ಮಾನವ ಘನತೆಯ ಈ ವರ್ತನಾಕ್ರಮಗಳನ್ನು ಅಷ್ಟಾಗಿ ಗಮನಿಸಿಲ್ಲ, ಒಂದು ಪಕ್ಷ ಗಮನಿಸಿದರೂ ಅವುಗಳಿಗೆ ಯೋಗ್ಯವಾಗಿ ನೀಡಬೇಕಾದ ಮಹತ್ವವನ್ನು ನೀಡಿಲ್ಲ. ಘೋರ ಹಿಂಸಾಕಾಂಡಗಳು ಜರುಗಿಯಾದ ತತ್‍ಕ್ಷಣದಲ್ಲಿ ಒಂದೆಡೆ ಹಿಂಸಾವರ್ತಿಗಳನ್ನು ಗುರುತಿಸಿ ಶಿಕ್ಷಿಸಬೇಕೆಂಬ ಸಹಜ ಧಾವಂತವಿರುವುದರಿಂದಲೋ, ಹಿಂಸೆಗೆ ಒಳಗಾದವರ ಬಗ್ಗೆ ಅತಿಸಹಜವಾಗಿ ಮೂಡುವ ಅತ್ಯಾನುಕಂಪದ ಪ್ರಭಾವದಲ್ಲಿ ಅವರ ವಿರುದ್ಧ ಹಿಂಸೆ ಪ್ರಯೋಗಿಸಿದ ಸಮುದಾಯದ ಎಲ್ಲ ಸದಸ್ಯರೂ ಸಮಾನಕ್ರೂರಿಗಳೇ ಆಗಿರಬೇಕೆಂಬ ತಿಳುವಳಿಕೆ ಬಲವಾಗಿ ಬೆಳೆಯುವುದರಿಂದಲೋ, ಅಂಥ ಅಸಹಜ ಪ್ರಮಾಣದ ಹಿಂಸೆ ನಮ್ಮಲ್ಲಿ ಭೀಭತ್ಸಭಾವವನ್ನೂ ಅತೀವ ನೈತಿಕ ಆಕ್ರೋಶವನ್ನೂ ಪ್ರಚೋದಿಸುವುದರಿಂದಲೋ ಏನೋ ಅಂಥ ಸಂದರ್ಭಗಳಲ್ಲಿ ನಾವು ಸಾಮಾನ್ಯವಾಗಿ ಸತ್ಯದ ಒಂದು ಮುಖವನ್ನು ಮಾತ್ರ ಕಾಣುತ್ತೇವೆ, ಕಾಣಬಯಸುತ್ತೇವೆ ಹಾಗೂ ಪ್ರಚುರಪಡಿಸುತ್ತೇವೆ. ಈ

ಭರದಲ್ಲಿ, ಅದೇ ಸತ್ಯ ಇನ್ನೂ ಕೆಲವು ಮುಖಗಳನ್ನು – ಮೊದಲ ಮುಖಕ್ಕೆ ತೀರಾ ಭಿನ್ನವಾದ ಮುಖಗಳನ್ನು – ಹೊಂದಿರುವುದನ್ನು ನಿರಾಕರಿಸುತ್ತೇವೆ, ಇಲ್ಲ ಅವು ತೀರಾ ನಗಣ್ಯವೆಂದು ನಿರ್ಲಕ್ಷಿಸುತ್ತೇವೆ.

ಕಳೆದ ಶತಮಾನದಲ್ಲಿ ಕಂಡುಬಂದ ನಾಝಿಗಳು ಮತ್ತು ಯಹೂದಿಗಳ ಸಂಬಂಧದ ಕಥೆ ಇದಕ್ಕೆ ಅನನ್ಯವಾದೊಂದು ನಿದರ್ಶನ. ೧೯೩೦ - ೪೦ರ ದಶಕಗಳಲ್ಲಿ ಜರ್ಮನಿಯ ನಾಝಿಗಳು ತಮ್ಮ ಹಾಗೂ ಅಕ್ಕಪಕ್ಕದ ದೇಶಗಳಲ್ಲಿ ನಡೆಸಿದ ಯಹೂದಿಗಳ ಮಾರಣಹೋಮ ಇಡಿಯ ಜಾಗತಿಕ ಇತಿಹಾಸದಲ್ಲಿ ಅತ್ಯಂತ ಕರಾಳವಾದೊಂದು ಅಧ್ಯಾಯವೆಂದು ದಾಖಲೆಯಾಗಿದೆ. ಈ ಕುರಿತು ಯಾರದ್ದೂ ಆಕ್ಷೇಪವಿರಲಾರದು ಕೂಡಾ. ಇಷ್ಟಾಗಿಯೂ ಜರ್ಮನ್ ಸಮುದಾಯದವರ ಎಣೆಯಿಲ್ಲದ ಪರಪೀಡನೆಯ ಬೃಹತ್‌ಕಥೆಯ ನಡುವೆ ಅದೇ ಸಮುದಾಯದ ಇನ್ನು ಕೆಲವರ ಧೀಮಂತ ನಿಸ್ವಾರ್ಥದ ಹಾಗೂ ಪರೋಪಕಾರದ ಪುಟ್ಟಪುಟ್ಟ ಉಪಕಥೆಗಳೂ ಇದ್ದವು. ಇದಕ್ಕೆ ಸಣ್ಣದೊಂದು ಉದಾಹರಣೆಯನ್ನು ನೀಡುವುದಾದರೆ, ದ್ವಿತೀಯ ಮಹಾಯುದ್ಧದ ಬಗ್ಗೆ ನಾನು ಓದಿದ ಮೊತ್ತಮೊದಲ ಪುಸ್ತಕಗಳು ಕೆಲವಲ್ಲಿ, ಯುದ್ಧದ ಅಂತಿಮ ಹಂತದಲ್ಲಿ ಜರ್ಮನ್ ರಾಜಧಾನಿ ಬರ್ಲಿನ್ ನಗರ ಮಿತ್ರಕೂಟದ ಕೈವಶವಾಗುತ್ತಿದ್ದಂತೆಯೆ ಅಲ್ಲಿ ಸುಮಾರು ೫೦೦ ಯಹೂದಿಗಳು ಇನ್ನೂ ಬದುಕಿಕೊಂಡಿದ್ದುದು ಪತ್ತೆಯಾಯಿತೆಂದೂ, ವರ್ಷಗಟ್ಟಲೆ ತಾವು ಅಡಗಿಕೂತಿದ್ದ ಭೂಗತ ಕೊಠಡಿಗಳು ಮತ್ತು ಗುಪ್ತ ಅಟ್ಟಗಳಂತಹ ತಾಣಗಳಿಂದ ಅವರು ಒಬ್ಬೊಬ್ಬರಾಗಿ ಪ್ರತ್ಯಕ್ಷರಾದರೆಂದೂ ವಿವರಗಳಿದ್ದವು. ಇದು ಒಂದು ಕಾಲಕ್ಕೆ ನಂಬಲು ಸಾಧ್ಯವೆ ಇಲ್ಲದಂತಹ ಸಂಗತಿಯಾಗಿತ್ತು; ಹಿಟ್ಲರ್ ಪ್ರಭುತ್ವದ ಹೃದಯಭಾಗವಾಗಿದ್ದ ಬರ್ಲಿನ್ ನಗರದಲ್ಲಿ ಒಬ್ಬಾನೊಬ್ಬ ಯಹೂದಿಯೂ ಬದುಕಿಕೊಂಡಿರಲು ಸಾಧ್ಯವಿಲ್ಲದಿದ್ದಂತಹ ಸಂದರ್ಭದಲ್ಲಿ ೫೦೦ ಯಹೂದಿಗಳು ಅದು ಹೇಗೋ ಎಲ್ಲಿಯೋ ಅವಿತುಕೂತು ತಮ್ಮ ಜೀವ ಉಳಿಸಿಕೊಂಡಿದ್ದರು ಎಂಬುದು ಕಲ್ಪನೆಗೂ ಮೀರಿದುದಾಗಿತ್ತು. ಮುಂದಿನ ಕೆಲವು ವರ್ಷಗಳಲ್ಲಿ ಬಂದ ಬೇರೊಂದಿಷ್ಟು ಅಧ್ಯಯನಗಳ ಮೂಲಕ ಈ ಸಂಖ್ಯೆ ಬರಿ ೫೦೦ ಅಲ್ಲ, ಅದು ೧೨೦೦ - ೧೫೦೦ ಎಂದು ತಿಳಿದುಬಂದಿತು. ಅದೇ ಬರ್ಲಿನ್ ನಗರದಲ್ಲಿರುವ ಹಾಲೋಕಾಸ್ಟ್ ಮ್ಯೂಸಿಯಮ್‌ಗೆ (ಆ ನರಮೇಧದ ನೆನಪುಗಳನ್ನು ಮುಂದಿನ ಪೀಳಿಗೆಗಳಿಗೆ ಇತಿಹಾಸದ ಪಾಠವಾಗಿ ಉಳಿಸಿಕೊಡುವ ಉದ್ದೇಶದಿಂದಲೆ ನಿರ್ಮಾಣವಾಗಿರುವ ಅಧಿಕೃತ ಸಂಗ್ರಹಾಲಯ ಅದು) ಹಿಂದೊಮ್ಮೆ ನಾನು ಭೇಟಿ ನೀಡಿದ್ದಾಗ ಅಲ್ಲಿನ ದಾಖಲೆಗಳು ಕೂಡ ಮೇಲ್ಕಂಡ ಸಂಖ್ಯೆಯನ್ನೆ ತೋರುತ್ತಿದ್ದವು. ಇತ್ತೀಚೆಗೆ ಇದೇ



ವಿಷಯದ ಬಗ್ಗೆ ಇನ್ನೂ ವಿಸ್ತಾರವಾದ ಕ್ಷೇತ್ರಾಧ್ಯಯನವನ್ನು ಒಳಗೊಂಡ ಮತ್ತೊಂದು ಪುಸ್ತಕ ಹೊರಬಂದಿತು; ಅದರಲ್ಲಿ ಆ ಯಹೂದಿಗಳ ಸಂಖ್ಯೆ ಸುಮಾರು ೫೦೦೦ ಎಂದು ಆಧಾರಸಹಿತವಾಗಿ ನಮೂದಾಗಿತ್ತು.

ಇಷ್ಟೊಂದು ಯಹೂದಿಗಳು ಹೀಗೆ ಎರಡನೆಯ ಮಹಾಯುದ್ಧದ ಅವಧಿಯುದ್ದಕ್ಕೂ ನಾಝಿಗಳ ಕೇಂದ್ರನಗರವಾದ ಬರ್ಲಿನ್‌ನಲ್ಲೆ ಬದುಕಿಕೊಂಡಿದ್ದರು ಎಂಬುದೇ ನಂಬಲಿಕ್ಕಾಗದ ಒಂದು ಸತ್ಯಸಂಗತಿಯಾದರೆ ಅದಕ್ಕೂ ಮಿಗಿಲಾದ ಮತ್ತೊಂದು ಸಂಗತಿ ಇದೇ ಕಥೆಯಲ್ಲಿ ಅಡಕವಾಗಿದೆ. ಈ ಐದುಸಾವಿರ ಯಹೂದಿಗಳು ತಮ್ಮ ಸ್ವಂತ ಬಲದ ಮೇಲಷ್ಟೆ ಹೀಗೆ ಉಳಿದುಕೊಂಡಿರಲು ಸಾಧ್ಯವಿಲ್ಲ ತಾನೆ? ಹಾಗಿದ್ದರೆ, ಅವರಲ್ಲಿ ಬಳಸಿಕೊಂಡಿದ್ದ ಖೊಟ್ಟಿ ಪಾಸ್‌ಪೋರ್ಟುಗಳನ್ನು ತಯಾರಿಸಿಕೊಟ್ಟ ಜರ್ಮನ್ನರ ಸಂಖ್ಯೆ ಎಷ್ಟಿದ್ದಿರಬಹುದು, ಅವರಿಗಲ್ಲಿ ತಮ್ಮ ನೆರೆಹೊರೆಯಲ್ಲಿ ಕೆಲವೆಡೆ ತಮ್ಮ ಮನೆಗಳಲ್ಲಿ ಅಡಗುತಾಣಗಳನ್ನು ಒದಗಿಸಿಕೊಟ್ಟ ಜರ್ಮನ್ನರ ಸಂಖ್ಯೆ ಎಷ್ಟಿದ್ದಿರಬಹುದು? ತಮ್ಮ ಬಾಂಧವರು ಮತ್ತು ಮಿತ್ರರು ಹೀಗೆ ವ್ಯವಸ್ಥೆ ಯಾವುದನ್ನು ದೇಶದ್ರೋಹದ ಕೃತ್ಯವೆಂದು ಪರಿಗಣಿಸಿತ್ತೋ ಅದರಲ್ಲಿ ತೊಡಗಿದ್ದನ್ನು ಕಂಡೂ ಅದರ ಕುರಿತು ಸಾನುಕಂಪದ ಮೌನವನ್ನು ಧರಿಸಿದ್ದ ಇನ್ನಿತರ ಜರ್ಮನ್ನರ ಸಂಖ್ಯೆ ಎಷ್ಟಿದ್ದಿರಬಹುದು? ಇಡಿಯ ಮಾನವ ಇತಿಹಾಸದಲ್ಲಿ ಅತ್ಯಂತ ತೀಕ್ಷ್ಣಕಣ್ಣಿನದೆಂದೂ ಚಾಣಾಕ್ಷ ಹಾಗೂ ನಿಷ್ಕರುಣಬುದ್ಧಿಯದೆಂದೂ ಕುಪ್ರಸಿದ್ಧವಾದ ಆ ತಮ್ಮ ದೇಶದ ಪ್ರಭುತ್ವದ ಕೈಯಿಂದ ಈ ಐದು ಸಾವಿರ ಪರಧರ್ಮೀಯರನ್ನು ರಕ್ಷಿಸಲೆಂದು ಅದೆಷ್ಟು ಜನ ಧರ್ಮಭೀರು ಜರ್ಮನ್ನರು ತಮ್ಮ ಪ್ರಾಣವನ್ನು ಪಣಕ್ಕಿಟ್ಟಿರಬಹುದು? ಎಷ್ಟು ಜರ್ಮನ್ನರು ತಮ್ಮದೆ ರಾಷ್ಟ್ರವ್ಯವಸ್ಥೆ ಪ್ರಯೋಗಿಸುತ್ತಿದ್ದ ಹಿಂಸೆಯ ವಿರುದ್ಧ ಹೀಗೆ ಗುಟ್ಟಾಗಿಯಾದರೂ ಮೌನವಾಗಿಯಾದರೂ ವಿದ್ರೋಹ ರೂಪದಲ್ಲಿಯಾದರೂ ತಮ್ಮ ಬಾಹ್ಯಪ್ರತಿರೋಧವನ್ನು ವ್ಯಕ್ತಪಡಿಸಿರಬಹುದು?

ಈಯೆಲ್ಲ ಪ್ರಶ್ನೆಗಳು ನಮ್ಮ ಕಲ್ಪನಾಶಕ್ತಿಗೆ ಸವಾಲನ್ನೊಡ್ಡುವಂಥವು. ಹಾಗೆಯೆ ಇನ್ನೊಂದೆಡೆ ಅವು ನಮ್ಮ ವಾಸ್ತವಗ್ರಹಣ ವಿಧಾನಗಳಲ್ಲಿರುವ ಮೂಲಭೂತ ದೋಷವೊಂದನ್ನು ಎತ್ತಿ ತೋರಿಸುತ್ತವೆ ಕೂಡ. ದ್ವಿತೀಯ ಮಹಾಯುದ್ಧದುದ್ದಕ್ಕೂ ಹಾಗೂ ಯುದ್ಧಾನಂತರದ ಸುದೀರ್ಘ ಅವಧಿಯುದ್ದಕ್ಕೂ ಜಗತ್ತು ಜರ್ಮನ್ನರ ಕ್ರೌರ್ಯವನ್ನು ಸ್ಥಾಪಿಸುವುದರಲ್ಲಿ, ಆ ಕ್ರೌರ್ಯಕ್ಕೆ ಅಧಿಕಾಧಿಕ ಪುರಾವೆಗಳನ್ನು ಸಂಗ್ರಹಿಸುವುದರಲ್ಲಿ ಹೆಚ್ಚು ಆಸಕ್ತಿ ತೋರಿತೆ ವಿನಹ ಅದೇ ಜರ್ಮನ್ ಸಮುದಾಯದ ಕೆಲವು ವ್ಯಕ್ತಿಗಳಾದರೂ ತಮ್ಮ ಕುಲಬಾಂಧವರ ವರ್ತನೆಗೆ ತದ್ವಿರುದ್ಧವಾದ ವರ್ತನೆಯನ್ನು ತೋರಿರಬಹುದೆ ಎಂದು ಪರಿಶೀಲಿಸಲೂ ಹೋಗಲಿಲ್ಲ. ಹಾಗಾಗಿ

ಜಗತ್ತಿನ ಕೈಗೆ ಅಪೂರ್ಣ ಸತ್ಯಕ್ಕಿಂತ ಹೆಚ್ಚಿನದು ಸಿಗಲಿಲ್ಲ. ನಮ್ಮ ಸತ್ಯಶೋಧನೆಯ ಕ್ರಮಗಳಲ್ಲಿರುವ ಬಹುದೊಡ್ಡ ಒಂದು ತೊಡಕು ಇದು: ಬಹಳಷ್ಟು ವಿಷಯಗಳಲ್ಲಿ, ನಾವು ಕಾಣಬಯಸುವುದನ್ನೆ ಅವು ನಮಗೆ ಕಾಣಿಸಿಕೊಡುತ್ತವೆ, ನಾವು ಕಾಣಲು ಬಯಸದ್ದನ್ನು ನಮ್ಮ ಕಣ್ಣಿನಿಂದ ಮರೆಯಾಗಿಸಿಡುತ್ತವೆ. ನಾಝಿಗಳು - ಹಾಗೂ - ಯಹೂದಿಗಳ ವಿಷಯದಲ್ಲಿಯೂ ಹೀಗೆಯೆ, ನಾವು ತುಸು ಭಾವನಿರಪೇಕ್ಷವಾಗಿಯೋ, ಇಲ್ಲ ಯಾವುದೇ ಒಂದು ಸಮುದಾಯ ಇಷ್ಟು ವಿಕಾಕಾರಿಯಾಗಿರಲು ಸಾಧ್ಯವಿಲ್ಲ, ಅದರ ಸರ್ವಸದಸ್ಯರೂ ಇಷ್ಟು ಸಮಾನವಾಗಿ ವಿಕಾರಿಗಳಾಗಿರಲು ಸಾಧ್ಯವಿಲ್ಲ ಎಂಬ ಮುಕ್ತಭಾವದಲ್ಲಿಯೋ ಹುಡುಕಿದ್ದಲ್ಲಿ ಆ ಐದು ಸಾವಿರ ಯಹೂದಿಗಳ ಹಾಗೂ ಅವರನ್ನು ಉಳಿಸುವಲ್ಲಿ ತಮ್ಮ ಜೀವವನ್ನು ಒತ್ತೆಯಿಟ್ಟಿದ್ದ ಇನ್ನೆಷ್ಟೋ ಸಾವಿರ ಜರ್ಮನ್ನರ ಕಥೆಗಳು ನಮಗೆ ಎಷ್ಟೋ ಮೊದಲೆ ಕಂಡಿರುತ್ತಿದ್ದವು. ಆಮೂಲಕ ನಾವು ಕಟ್ಟಿಕೊಂಡ ಸತ್ಯದ ಅಪೂರ್ಣತೆ ಎಷ್ಟೋ ಪಾಲು ಕಡಿಮೆಯಾಗಿರುತ್ತಿತ್ತು. ಅಲ್ಲಿ ಮಾನವರು ಸಾಮುದಾಯಿಕ ಸ್ತರದಲ್ಲಿ ಹಾಗೂ ವ್ಯಕ್ತಿಗತ ಸ್ತರದಲ್ಲಿ ಹಿಂಸೆಗೆ ಒಡ್ಡಿದ ಬಹುದೊಡ್ಡ ಪ್ರತಿರೋಧದ ಮುಖ್ಯವಾದೊಂದು ಮಾದರಿಯ ದರ್ಶನವಾಗುತ್ತಿತ್ತು.

ಇಂಥದೇ ಬಗೆಯ ಹುಡುಕಾಟವೊಂದನ್ನು ನಮ್ಮ ಪಾಕಿಸ್ತಾನಿ ಗೆಳೆಯ ಸಲೀಮ್ ಅಹ್ಮದ್ ಭಾರತ - ಪಾಕಿಸ್ತಾನ ದೇಶವಿಭಜನೆಯ ಕಾಲದ ಕೋಮು ಹಿಂಸಾಕಾಂಡದ ವಿಷಯದಲ್ಲಿ ಕೈಗೊಂಡರು. ಓರ್ವ ಉದಾರವಾದಿ ಚಿಂತಕನೂ ರಾಜಕೀಯ ಕಾರ್ಯಕರ್ತನೂ ಆದ ಅಹ್ಮದ್‌ಗೆ ನಿತ್ಯಜೀವನದಲ್ಲಿ ಹೆಜ್ಜೆಹೆಜ್ಜೆಗೂ ಪಾಕಿಸ್ತಾನದ ಮೂಲಭೂತವಾದಿಗಳ ಸವಾಲನ್ನು ಎದುರಿಸಬೇಕಿತ್ತು. ಹಿಂದೂಗಳ ಬಗ್ಗೆ ಅವರು ಮುಸ್ಲಿಮರಲ್ಲಿ ಪ್ರಸರಿಸುತ್ತಿದ್ದ ನೇತ್ಯಾತ್ಮಕ ಚಿತ್ರವನ್ನು ಒಪ್ಪಿಕೊಳ್ಳಬೇಕಿತ್ತು. ಹೀಗಿದ್ದಾಗ, ಆ ಧರ್ಮಾಂಧರನ್ನು ಮುಖಾಮುಖಿಯಾಗಬೇಕೆಂದರೆ, ಅವರ ಪ್ರತಿಪಾದನೆಯ ಅಪೂರ್ಣತೆಯನ್ನು ಎತ್ತಿತೋರಿಸಬೇಕೆಂದರೆ ಇನ್ನು ತಾನು ಅದಕ್ಕೆ ತದ್ವಿರುದ್ಧವಾದ ಸತ್ಯದ ಮುಖಗಳನ್ನು ಹುಡುಕಿಕೊಂಡು ಬರುವುದೊಂದೆ ಮಾರ್ಗವೆಂದು ತಿಳಿದು ಅಹ್ಮದ್ ದೇಶವಿಭಜನೆಯ ಕಾಲದ ಹಿಂಸೆಯ ಹೊಸ ಅಧ್ಯಯನಕ್ಕೆ ತೊಡಗಿದರು.

ಎಂತಹ ದುರ್ಘಳಿಗೆಗಳಲ್ಲೂ ಕೂಡ ಯಾವುದೇ ಸಮುದಾಯದ ಅಂತಃಸಾತ್ವಿಕತೆಯೆನ್ನುವುದು ತಾಮಸಿಕತೆಗೆ ಸಂಪೂರ್ಣ ಬಾಗುವುದು ಸಾಧ್ಯವಿಲ್ಲ ಎಂಬ ನಂಬುಗೆಯೊಂದಿಗೆ ಹೊರಟ ಸಲೀಮ್ ಅಹ್ಮದ್‌ಗೆ ಬಹುಬೇಗನೆ ಅವರ ನಂಬುಗೆಗೆ ತುಸುವಾದರೂ ಬಲವನ್ನು ಒದಗಿಸುವಂತಹ ಘಟನೆಯೊಂದರ ವಿವರಗಳು



ದೊರಕಿದವು. ದೇಶವಿಭಜನೆಯ ದುಷ್ಕಾಲವನ್ನು ದಾಟಿಬಂದಿದ್ದ ಅನೇಕಾನೇಕ ಕುಟುಂಬಗಳನ್ನು ಆತ ಹುಡುಕುತ್ತ ಭೇಟಿಯಾಗುತ್ತ ನಡೆದಂತೆ ಅಂಥದೊಂದು ಕುಟುಂಬ ತಾನು ಅಲ್ಲಿಯವರೆಗೂ ಯಾರೊಡನೆಯೂ ಹೇಳಿಕೊಂಡಿರದಿದ್ದ ಅನುಭವವೊಂದನ್ನು ಆತನ ಬಳಿ ಹೇಳಿಕೊಂಡಿತು. ( ಆ ಕುರಿತು ಅದು ಅಲ್ಲಿಯವರೆಗೂ ತಾಳಿದ್ದ ಭಯಾತಂಕಮಿಶ್ರಿತ ಮೌನಕ್ಕೆ ಕಾರಣಗಳಿಲ್ಲದಿರಲಿಲ್ಲ ಎಂಬುದನ್ನೂ ನಾವಿಲ್ಲಿ ಗಮನಿಸಬೇಕು) ಅದರ ಪ್ರಕಾರ, ವಿಭಜನೆಯ ಕಾಲದಲ್ಲಿ ಈ ಮುಸ್ಲಿಮ್ ಕುಟುಂಬದ ಯುವತಿಯೋರ್ವಳನ್ನು ಸಿಖ್ ಯುವಕನೋರ್ವ ಅಪಹರಿಸಿದ, ಆಕೆಯನ್ನು ತನ್ನ ಮನೆಗೆ ಹೊತ್ತೊಯ್ದು. (ಎಲ್ಲೆಡೆಗಳಲ್ಲೂ ಸ್ತ್ರೀಯರ ಅಪಹರಣ ನಡೆಯುತ್ತಿದ್ದ ಆ ಸಂದರ್ಭದಲ್ಲಿ ಇದೇನು ವಿಶೇಷವಾಗಿರಲಿಲ್ಲ. ಹೀಗೆ ಅಪಹೃತರಾದ ಹೆಂಗಸರ ಸಂಖ್ಯೆ ಸುಮಾರು ಒಂದು ಲಕ್ಷವಾಗಿತ್ತೆಂದು ಸರ್ಕಾರಿ ಅಂಕಿ-ಅಂಶಗಳೆ ಹೇಳುವಾಗ ವಾಸ್ತವದ ಸಂಖ್ಯೆ ಇನ್ನೂ ತುಸು ಹೆಚ್ಚೆ ಇದ್ದಿರಬೇಕು) ಯುವಕನ ವೃದ್ಧ ತಂದೆ ಮಗನನ್ನು ಬಾಗಿಲಲ್ಲೆ ತಡೆದು, ಮಗನೆ, ನಮ್ಮ ಸಿಖ್ ಧರ್ಮದಲ್ಲಿ ಇಂಥ ಕೃತ್ಯಗಳಿಗೆ ಅವಕಾಶವಿಲ್ಲ. ನೀನು ಯಾವುದೇ ಕಾರಣಕ್ಕೂ ಹೀಗೆ ಇನ್ನೊಬ್ಬರ ಮನೆಯ ಮಗಳನ್ನು ಅಪಹರಿಸುವಂತಿಲ್ಲ. ಈಗ ನಡೆ, ಆಕೆಯನ್ನು ತಿರುಗಿ ಮನೆಯವರಿಗೆ ಒಪ್ಪಿಸಿ ಬಾ, ಎಂದು ಆಜ್ಞಾಪಿಸಿದ. ಮಗ ತಂದೆಯ ಮಾತುಗಳಿಗೆ ಬೆಲೆ ಕೊಡಲಿಲ್ಲ. ಸುತ್ತಮುತ್ತಲು ಎಲ್ಲರೂ ಮಾಡುತ್ತಿರುವುದನ್ನೆ ತಾನೂ ಮಾಡಿದಲ್ಲಿ ತಪ್ಪೇನು ಎಂಬ ಧೋರಣೆಯಲ್ಲಿ ಆತ ತಂದೆಯನ್ನು ಧಿಕ್ಕರಿಸಿದ. ತಂದೆ ತಕ್ಷಣ ಮನೆಯ ಬಂದೂಕನ್ನು ಹೆಗಲಿಗೇರಿಸಿ ಮಗನನ್ನು ಅಲ್ಲಿಯೇ ವಧಿಸಿದ.

ಮುಂದೆ, ಮಿತ್ರ ಸಲೀಮ್ ಅಹ್ಮದ್‌ಗೆ ಕಿರುಕಾಲಾವಧಿಯಲ್ಲಿಯೆ ಇಂಥದೆ ಹಿಂಸಾವಿಷಯಕ ಬಾಹ್ಯಪ್ರತಿರೋಧದ ಪ್ರಸಂಗಗಳು ಸುಮಾರು ಒಂದುನೂರಾ ಎಂಬತ್ತರಷ್ಟು ಸಿಕ್ಕವು. ಅವುಗಳೆಲ್ಲ ಸೂಚಿಸುವಂತೆ, ಆ ಕಾಲಸಂದರ್ಭದ ಹಿಂಸೆಗೆ ಸಮಾಜ ಮತ್ತು ಸರ್ಕಾರಗಳು ಸುಸಂಘಟಿತವಾದ ಪ್ರತಿರೋಧ ಒಡ್ಡುವುದಕ್ಕೆ ಮೊದಲೆ ತತ್ಕ್ಷಣಸ್ಫೂರ್ತ, ಸ್ವಯಂಪ್ರೇರಿತ ಹಾಗೂ ವ್ಯಕ್ತಿಗತ ನೆಲೆಯ ಪ್ರತಿರೋಧದ ಪ್ರಸಂಗಗಳು ಗಮನಾರ್ಹ ಸಂಖ್ಯೆಯಲ್ಲಿ ಘಟಿಸಿದ್ದವು.

ಮೇಲೆ, ದ್ವಿತೀಯ ವಿಶ್ವಸಮರ ಸಂದರ್ಭದ ನಾಝಿ - ಯಹೂದಿ ಸಂಬಂಧದ ಕುರಿತಾದ ಅಧ್ಯಯನಗಳ ಪ್ರಸ್ತಾಪ ಬಂದಿತಷ್ಟೆ, ಅವುಗಳಲ್ಲಿ ಕೆಲವು ಆ ನ್ಯಾಯಭೀರು ಜರ್ಮನ್ನರು ಅಷ್ಟೆಲ್ಲ ಅಪಾಯವನ್ನು ಲೆಕ್ಕಿಸದೆ ಪರರಕ್ಷಣೆಗೆ ಮುಂದಾದದ್ದು ಏಕಿದ್ದಿರಬಹುದು, ಹಾಗೆ ಅಸೀಮ ಧೈರ್ಯ ತೋರಿದವರಲ್ಲಿ ಸಮಾನವಾದ ಗುಣ-ಲಕ್ಷಣಗಳು ಏನಾದರೂ ಇದ್ದುವೋ ಎಂಬ ಪ್ರಶ್ನೆಗಳನ್ನೂ ಎದುರಿಟ್ಟು

ಕೊಂಡಿದ್ದವು. ಆ ಶೋಧದಲ್ಲಿ ಆ ಪರೋಪಕಾರಿಗಳಲ್ಲೆಲ್ಲ ಮುಖ್ಯವಾಗಿ ಎರಡು ಸಾಮ್ಯಗಳು ಕಂಡುಬಂದವು. ಮೊದಲನೆಯದಾಗಿ, ಅವರೆಲ್ಲ ತಮ್ಮತಮ್ಮ ಕುಟುಂಬಗಳು ಹಾಗೂ ಸಮುದಾಯಗಳೊಂದಿಗೆ ಅತ್ಯಂತ ಅನ್ಯೋನ್ಯ ಸಂಬಂಧ ಹೊಂದಿದ್ದರು; ಜನರನ್ನು ಪ್ರೀತಿಸುತ್ತಿದ್ದರು, ಆ ಜನರೂ ತಮ್ಮನ್ನು ಪ್ರೀತಿಸುತ್ತಾರೆ ಎಂದು ತಿಳಿದವರಾಗಿದ್ದರು. ಎರಡನೆಯದಾಗಿ, ಅವರಲ್ಲಿ ಬಹುಪಾಲು ಜನರು ಆಳ ಧಾರ್ಮಿಕ ಶ್ರದ್ಧೆಯುಳ್ಳವರಾಗಿದ್ದರು. (ಆಳ ನಿರ್ಧಾರ್ಮಿಕತೆಯ ವ್ಯಕ್ತಿಯಾದ ನನಗಂತೂ ಈ ಸಂಗತಿ ಬಹುದೊಡ್ಡ ಸವಾಲಾಗಿ ಕಂಡಿತು; ಆದರೆ ಕೊನೆಗೆ ಅದರ ಸತ್ಯ-ಸತ್ವವನ್ನು ಒಪ್ಪಿಕೊಳ್ಳದೆ ನನಗೆ ಬೇರೆ ದಾರಿಯಿರಲಿಲ್ಲ.) ಇದನ್ನೆಲ್ಲ ನೆನಪಿಸಿಕೊಳ್ಳುತ್ತಿದ್ದಂತೆ ದೇಶವಿಭಜನೆಯ ಕಾಲದ ಹಿಂಸೆಯ ಅಧ್ಯಯನ ಪ್ರಾರಂಭಿಸಿಕೊಂಡಿದ್ದ ನಮ್ಮಲ್ಲೂ ತುಸು ಹುಮ್ಮಸ್ಸು ಮೂಡಿತು. ಜರ್ಮನ್ನರ ಕಥೆಯೆ ಹೀಗೆಂದಾದಮೇಲೆ ಧರ್ಮಶ್ರದ್ಧೆಗೆ, ಕೌಟುಂಬಿಕ ಹಾಗೂ ಸಾಮುದಾಯಿಕ ಭಾವಬಂಧಗಳಿಗೆ ಕೊರತೆಯಿರದ ನಮ್ಮ ಜಗದ್‌ಭಾಗದಲ್ಲಿ ಅದೇ ಬಗೆಯ ನಿಸ್ವಾರ್ಥಿ ಪರೋಪಕಾರದ ಪ್ರಸಂಗಗಳು ನಿಶ್ಚಿತವಾಗಿ ಸಿಗುತ್ತವೆ ಎಂಬ ವಿಶ್ವಾಸ ಬಲಿಯಿತು.

ನಮ್ಮ ಅಧ್ಯಯನದ ಉದ್ದಕ್ಕೂ ನಾವು ಕಂಡುಕೊಂಡ ಕೌತುಕದ ಅಂಶವೊಂದೆಂದರೆ, ದೇಶವಿಭಜನೆಯ ಕಾಲದಲ್ಲಿ ಹಿಂಸೆಗೆ ಗುರಿಯಾದವರನ್ನೂ ಹಾಗೂ ಹಿಂಸೆಯನ್ನು ಪ್ರಯೋಗಿಸಿದವರನ್ನೂ ನಾವು ಹಲವಾರು ದಿನ - ವಾರ - ತಿಂಗಳುಗಳ ಅವಧಿಯಲ್ಲಿ ಅನೇಕಾನೇಕ ಸುತ್ತುಗಳಲ್ಲಿ ಸಂದರ್ಶಿಸುತ್ತಾ ಹೋಗುತ್ತಿದ್ದಂತೆಯೆ ಅವರ ಹೆಪ್ಪುಗಟ್ಟಿದ್ದ ಮೌನ ನಿಧಾನಕ್ಕಾಗಿಯಾದರೂ ಕರಗತೊಡಗಿತು; ಬಿಡಿಸಲು ಸಾಧ್ಯವೆ ಇಲ್ಲವೋ ಎಂಬಷ್ಟು ಕಗ್ಗಂಟಾಗಿಹೋಗಿದ್ದ ಅವರ ನೆನಪಿನ ಸುರುಳಿ ಹಂತಹಂತವಾಗಿ ಬಿಚ್ಚಿಕೊಳ್ಳತೊಡಗಿತು. ಅವರೆಗೆ ಯಾರೊಂದಿಗೂ — ಅಕ್ಷರಶಃ ಯಾರ‍್ಯಾರೊಂದಿಗೂ — ಹಂಚಿಕೊಂಡಿರದಿದ್ದ ಅಸಂಖ್ಯ ಅನುಭವಗಳನ್ನು ಅವರು ಈಗ ನಮ್ಮೊಂದಿಗೆ — ಅಪರಿಚಿತರೊಂದಿಗೆ ಅಸಂಬಂಧಿಕರೊಂದಿಗೆ — ಹೇಳಿಕೊಳ್ಳಲಾರಂಭಿಸಿದರು. ಆಳದ ವೇದನೆಯನ್ನು ಆತ್ಮನಿವೇದನೆಯನ್ನಾಗಿ ಮಾರ್ಪಡಿಸುವ ಈ ಪ್ರಕ್ರಿಯೆಯಲ್ಲಿ ನಿರ್ದಿಷ್ಟವಾದೊಂದು ವಿನ್ಯಾಸವೂ ಇತ್ತು. ಅವರು ತಮ್ಮ ಆಂತರ್ಯದ ಆ ಅಂಶಗಳನ್ನು ಪರಿಚಯದ ಮೊದಲ ಕ್ಷಣಗಳಲ್ಲಿಯೆ ಅಥವಾ ಮೊದಲ ಭೇಟಿಯಲ್ಲಿಯೆ ಹೇಳಿಕೊಳ್ಳಲಿಲ್ಲ. ನಾಲ್ಕೈದು ಸುತ್ತು ಸಂದರ್ಶನಗಳ ಅನಂತರವೆ, ಸಂದರ್ಶಕರ ಬಗ್ಗೆ ತುಸು ವಿಶ್ವಾಸ ಮೂಡಿದ ಮೇಲಷ್ಟೆ ಅವರು ತಮ್ಮ ಅಂತರಂಗವನ್ನು ತೋಡಿಕೊಳ್ಳತೊಡಗಿದರು. ಅಲ್ಲಿ ಅವರು ದಾಖಲಿತ ಚರಿತ್ರೆಗೆ, ಅಧಿಕೃತ ಇತಿಹಾಸಕ್ಕೆ ವ್ಯತಿರಿಕ್ತವಾಗಿದ್ದ ವಾಸ್ತವಾಂಶಗಳನ್ನು ಒಳಗಿಂದ ಬಗೆದು



ನೀಡಲಾರಂಭಿಸಿದರು. ಅದೆಷ್ಟೋ ಬಾರಿ ತಮಗೆ ಅರಿವಿಲ್ಲದಂತೆಯೆ, ತಮ್ಮ ವೈರಿಗಳನ್ನು ದೂಷಿಸುತ್ತಿದ್ದಂತೆಯೆ ಅದೇ ವೈರಿ ಸಮುದಾಯದ ಬೇರೆ ಕೆಲವರು ತಮಗೆ ಮರೆಯಲಾಗದ ರೀತಿಯ ಸಹಾಯ ಒದಗಿಸಿದ್ದರ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಅವರು ಭಾವುಕರಾಗಿ ನೆನೆಸಿಕೊಳ್ಳತೊಡಗುತ್ತಿದ್ದರು.

ನಮ್ಮ ಸಂದರ್ಶನಸರಣಿಯ ಮೊದಲ ಘಟ್ಟದಲ್ಲಿ ನಾವು ಸಂದರ್ಶಿಸಿದ ಹಿಂಸಾಕಾಂಡಬಾಧಿತರಲ್ಲಿ ೨೬ ಶತಾಂಶದಷ್ಟು ಜನರು, ತಾವು ಪಾಕಿಸ್ತಾನದಲ್ಲಿ ಮುಸ್ಲಿಮರ ಹಿಂಸೆಯಿಂದ ನರಳಿದೆವೆನ್ನುವುದಷ್ಟೆ ಸತ್ಯವಲ್ಲ; ಅಷ್ಟೆ ದೊಡ್ಡದಾದ ಮತ್ತೊಂದು ಸತ್ಯವೆಂದರೆ ಅದೇ ಮುಸ್ಲಿಮ್ ಸಮುದಾಯದ ಎಷ್ಟೊ ಜನರು ಸ್ವಂತ ಪ್ರಾಣಕ್ಕಿದ್ದ ಅಪಾಯವನ್ನೂ ಲೆಕ್ಕಿಸದೆ ತಮ್ಮ ಪ್ರಾಣ ಕಾಪಾಡಿದರು, ಅಷ್ಟಲ್ಲದೆ ಅವರು ತಮ್ಮ ಸಂಬಂಧಿಕರ ಮತ್ತು ಸ್ನೇಹಿತರ ಪ್ರಾಣಗಳನ್ನೂ ಆಸ್ತಿ - ಪಾಸ್ತಿಗಳನ್ನೂ ಉಳಿಸಿಕೊಟ್ಟರು ಎಂದು ಮುಕ್ತವಾಗಿ ಹೇಳಿಕೊಂಡರು. ಎಷ್ಟೋ ಪ್ರಸಂಗಗಳಲ್ಲಿ ಅಂತಹ ಮುಸ್ಲಿಮರು ತಮ್ಮ ಜೀವವನ್ನು ಕಳೆದುಕೊಂಡರು ಕೂಡ ಎಂದು ನೆನೆದು ಆರ್ದ್ರರಾದರು. ಹೀಗೆ ದಶಕಗಳ ಕಾಲ ಮನದಾಳದಲ್ಲಿ ಹೂತುಹಾಕಿದ್ದ ಆ ಘೋರ ನೆನಪುಗಳನ್ನು ಮತ್ತೆ ಮನದ ಮೇಲ್ಪದರಕ್ಕೆ ತಂದುಕೊಳ್ಳುವ ಅತೀವ ನೋವಿನಲ್ಲಿಯೂ, ಆಗ ಪರಸಮುದಾಯದವರಲ್ಲಿ ತಾವು ಕಂಡಿದ್ದ ಮಾನವಘನತೆಯ ಅಂಶಗಳನ್ನು ಅವರು ನೆನಪಿಸಿಕೊಂಡರು. ನಮ್ಮ ಸಂದರ್ಶನಸರಣಿಯ ಎರಡನೆಯ ಹಂತದಲ್ಲಿ ಇಂಥವರ ಪ್ರಮಾಣ ಪ್ರತಿಶತ ೫೦ಕ್ಕೆ ಏರಿತು; ಪರಸಮುದಾಯದವರು ತಮ್ಮವರದೇ ಹಿಂಸೆಗೆ ಒಡ್ಡಿದ ಬಾಹ್ಯಪ್ರತಿರೋಧವನ್ನು ನೆನಪಿಸಿಕೊಂಡವರ ಪ್ರಮಾಣ ಎರಡುಪಟ್ಟು ವೃದ್ಧಿಯಾಯಿತು.

ಆದರೆ, ಪರರಿಂದ ತಾವು ಪಡೆದ ಪ್ರೀತಿ ಮತ್ತು ರಕ್ಷಣೆಗಳನ್ನು ನೆನಪಿಸಿಕೊಂಡ ಎಲ್ಲರೂ ಅದನ್ನು ತಾವಾಗಿಯೆ ನೆನಪಿಸಿಕೊಂಡರೆಂದೇನಿಲ್ಲ. ಪರರ ಹಿಂಸಾಪ್ರಯೋಗ ಹಾಗೂ ಹಿಂಸಾಪ್ರತಿರೋಧಗಳೆರಡನ್ನೂ ಕಂಡಿದ್ದ ಕೆಲವರು ಅವುಗಳಲ್ಲಿ ಮೊದಲನೆಯದರ ಕುರಿತು ಅತಿಮಾತನ್ನು ಮತ್ತು ಎರಡನೆಯದರ ಕುರಿತು ಅತಿಮೌನವನ್ನು ರೂಢಿಸಿಕೊಂಡಿದ್ದರು. ಅಂಥವರು ಕೊನೆಗೆ ನಮ್ಮ ಸಂದರ್ಶನಗಳಲ್ಲಿ ತಮ್ಮ ಆ ಅತಿಮೌನವನ್ನು ಒಡೆದದ್ದು ಅಪ್ರಜ್ಞಾಪೂರ್ವಕ ಕ್ರಮಗಳಲ್ಲಿ ಮಾತ್ರವಾಗಿತ್ತು, ಅತಿವಿಶಿಷ್ಟವಾದ ಕೆಲವು ಭಾವಸಂದರ್ಭಗಳಲ್ಲಿ ಮಾತ್ರವಾಗಿತ್ತು. ಇದಕ್ಕೆ ಬಿ.ಎಲ್. ಶರ್ಮಾ ‘ಪ್ರೇಮ್’ರದ್ದು ಮಾರ್ಮಿಕವಾದೊಂದು ಉದಾಹರಣೆಯಾಗಿದೆ. ನಾವಿಲ್ಲಿ ಚರ್ಚಿಸುತ್ತಿರುವ ಹಿಂಸಾವಿಷಯಕ ಬಾಹ್ಯಪ್ರತಿರೋಧದ ನಿರ್ದಿಷ್ಟ ಅಂಶವನ್ನು ಹೊಂದಿರದಿದ್ದರೂ ಶರ್ಮಾರ ಪ್ರಸಂಗ ಪರರಿಂದ ಪಡೆದ ಪ್ರೇಮ

- ವಿಶ್ವಾಸಗಳ ಅಂಶವನ್ನು ಒಳಗೊಂಡಿದ್ದು ಅತ್ಯಪರೂಪದ ನಿದರ್ಶನವಾಗಿದೆ. ಬೆಂಕಿಯುಗುಳುವ ಭಾಷಣಕಾರರೆಂದೂ ಸದಾಕಾಲ ಮುಸ್ಲಿಮ್-ದ್ವೇಷದ ದಳ್ಳುರಿ ಹರಡಿಸುವವರೆಂದೂ ಪ್ರಸಿದ್ಧಿಯನ್ನು ಪಡೆದಿದ್ದ ಶರ್ಮಾ ದೆಹಲಿಯಲ್ಲಿ ಹಿಂದುತ್ವವಾದಿಗಳ ಅಗ್ರನಾಯಕರಾಗಿದ್ದರು. ಅವರೂ ಸಹ ದೇಶವಿಭಜನೆಯ ಕಾಲದಲ್ಲಿ ಪಾಕಿಸ್ತಾನದಿಂದ ಭಾರತಕ್ಕೆ ವಲಸೆ ಬಂದವರಾಗಿದ್ದು, ಸಾರ್ವಜನಿಕ ವೇದಿಕೆಗಳಲ್ಲೆಲ್ಲ ಆ ಕಾಲದ ಹಿಂಸಾಕಾಂಡದಲ್ಲಿ ತಾನು ಅನುಭವಿಸಿದ ಸಂಕಷ್ಟದ ಕುರಿತು ಅತ್ಯುಗ್ರ ಮಾತು ಗಳನ್ನಾಡುತ್ತಿದ್ದರು.

ಇಂಥ ಶರ್ಮಾರನ್ನು ನಮ್ಮ ಅಧ್ಯಯನ ತಂಡದ ಸದಸ್ಯ ಸುಕೇತು ಮೆಹ್ತಾ ಭೇಟಿಯಾದಾಗ ಸಂದರ್ಶನದ ಮೊದಲ ಭಾಗ ಶರ್ಮಾರ ಬೇರಾವುದೆ ಸಂದರ್ಶನ ಕ್ಕಿಂತ ಭಿನ್ನವಾಗಿರಲಿಲ್ಲ. ಬೇರೆಡೆಗಳಲ್ಲೆಲ್ಲ ಮಾಡುತ್ತಬಂದಿದ್ದಂತೆಯೆ ಶರ್ಮಾ ಇಲ್ಲೂ ಕೂಡ ಮುಸ್ಲಿಮರನ್ನು ದೂಷಿಸಿದರು, ಅದೇ ಆವೇಶದಲ್ಲಿ ಹಿಂದೂಗಳನ್ನು ಹೀಯಾಳಿಸಿದರು. ಉದಾಹರಣೆಗೆ, ಆ ಮೊದಲೆ ಸಾವಿರಾರು ಬಾರಿ ಸಾರಿದ್ದಂತೆ ಇಲ್ಲಿಯೂ ಶರ್ಮಾ, ಮುಸ್ಲಿಮ್ ಹೆಂಗಸರು ಮಾತ್ರ ನಿಜವಾದ ಗಂಡಸರನ್ನು ಹೆರುವವರಾಗಿದ್ದು ಹಿಂದೂ ಹೆಂಗಸರು ಬರಿದೆ ಇಲಿ - ಹೆಗ್ಗಣಗಳನ್ನು ಹೆರುತ್ತಾರೆಂದೂ, ಆ ಕಾರಣದಿಂದಲೆ ದೇಶವಿಭಜನೆಯ ಸಂದರ್ಭದಲ್ಲಿ ಮುಸ್ಲಿಮರೆಲ್ಲ ಅರ್ಧಹೊತ್ತು ಹಿಂದೂ ಗಂಡಸರ ಹತ್ಯೆಗೈಯುತ್ತ ಇನ್ನರ್ಧಹೊತ್ತು ಹಿಂದೂ ಹೆಂಗಸರ ಶೀಲಭಂಗ ಮಾಡುತ್ತ ಇದ್ದಲ್ಲಿ ಹಿಂದೂ ಗಂಡಸರು ಮಾತ್ರ ಜುಜುಬಿ ದುಡ್ಡುಕಾಸು ಸಾಮಾನುಸರಂಜಾಮುಗಳನ್ನು ಲೂಟಿಮಾಡುತ್ತಲೆ ಕಾಲಕಳೆದರೆಂದೂ ಕನಲಿ ನುಡಿದರು. ಹಿಂದೂ ಗಂಡಸರು ಹಾಗೂ ಹೆಂಗಸರನ್ನು ಅಷ್ಟು ಸುಲಭದಲ್ಲಿ ಮಣಿಸುವ ಶಕ್ತಿ ಮುಸ್ಲಿಮರಿಗೆ ಬಂದದ್ದು ಅವರು ಗೋಮಾಂಸವನ್ನು ತಿನ್ನುವುದ ರಿಂದಲೆ, ಆ ಆಹಾರದಿಂದ ಅವರ ದೇಹಬಲವೂ ಕಾಮಶಕ್ತಿಯೂ ಅಪಾರವಾಗಿ ವರ್ಧನೆ ಯಾಗಿದ್ದರಿಂದಲೆ ಎಂದು ಹೇಳುತ್ತ ವ್ಯಗ್ರರಾದರು. ಹಿಂದೂಗಳು ಸಹ ಮುಸ್ಲಿಮರಂತೆಯೆ ಪೌರುಷ ಪ್ರದರ್ಶಿಸಿದ್ದಲ್ಲಿ ಲಾಹೋರ್ ಕರಾಚಿ ನಗರಗಳು ಮಾತ್ರವಲ್ಲ ಪ್ರಾಯಶಃ ಇಡಿಯ ಪಾಕಿಸ್ತಾನದ ಭಾಗ ನಮ್ಮ ಕೈಯಲ್ಲೆ ಉಳಿದು ಕೊಳ್ಳುತ್ತಿತ್ತೆಂದೂ ಅವರು ಕ್ರೋಧಾವಿಷ್ಟರಾಗಿ ಹೇಳಿದರು. ವಿಚಿತ್ರವೆಂದರೆ, ಶರ್ಮಾ ಮುಸ್ಲಿಮರನ್ನು ಹೀನಾಯವಾಗಿ ಬೈಯುತ್ತಿದ್ದ ಕ್ರಮದಲ್ಲಿಯೆ ಮುಸ್ಲಿಮರ ಬಗ್ಗೆ ಅವರಲ್ಲಿ ಸುಪ್ತವಾಗಿದ್ದ ಅಸೂಯೆಯ ಹಾಗೂ ಮೆಚ್ಚುಗೆಯ ಒಳಎಳೆಯೊಂದು ಅವರಿಗೇ ತಿಳಿಯದಂತೆ ಕಾಣತೊಡಗುತ್ತಿತ್ತು. ಹಿಂದೂಗಳು ತಮ್ಮ ಹೆಣ್ಣಿಗತನದಿಂದಲೆ ಇಂತಹ ದಯನೀಯ ಸೋಲನ್ನು ಅನುಭವಿಸಬೇಕಾಗಿಬಂತೆಂದು ಅವರು



ವಾದಿಸುತ್ತಿದ್ದ ರೀತಿಯಲ್ಲಿ ಹಿಂದೂಗಳ ಕುರಿತು ಅವರಿಗಿದ್ದ ತೀವ್ರ ತಿರಸ್ಕಾರ ವ್ಯಕ್ತವಾಗುತ್ತಿತ್ತು.

ಈ ಸಂದರ್ಶನವನ್ನು ಯಾರಾದರೂ ಸಾಮಾನ್ಯಮಟ್ಟದ ಪತ್ರಕರ್ತನೋರ್ವ ಮಾಡಿದ್ದಲ್ಲಿ ಆತ ಶರ್ಮಾರವರ ಇಷ್ಟು ಮಾತುಗಳಿಗೆಯೆ ತೃಪ್ತನಾಗುತ್ತಿದ್ದ; ತನ್ನ ಪುಟ ತುಂಬಿಸಲೂ ತನ್ನ ಪತ್ರಿಕೆಯ ಮಾರಾಟ ಹೆಚ್ಚಿಸಲೂ ರೋಚಕವಾದ ಸುದ್ದಿ ದೊರಕಿತು ಎಂದು ಪುಳಕಿತನಾಗುತ್ತಿದ್ದ. ಶರ್ಮಾರ ಈ ಬಗೆಯ ಹೇಳಿಕೆಗಳನ್ನು ಉದ್ಧರಿಸಿ, ಮಧ್ಯಮವರ್ಗದ ಬುದ್ಧಿಜೀವಿಯೊಬ್ಬನ ದೃಷ್ಟಿಕೋನದಿಂದ ಅವುಗಳನ್ನು ತೀವ್ರವಾಗಿ ಟೀಕಿಸಿ, ಆತ ತನ್ನ ಆ ಲೇಖನ ಸಹಮನಸ್ಕರಿಂದ ಗಳಿಸಬಹುದಾದ ಮೆಚ್ಚುಗೆಯನ್ನು ಲೆಕ್ಕಹಾಕುತ್ತ ಕೂರುತ್ತಿದ್ದ. (ವಾಸ್ತವದಲ್ಲಿ ಸಮೂಹಮಾಧ್ಯಮ ಕ್ಷೇತ್ರದ ಬಹುಪಾಲು ಕರ್ಮಿಗಳು ಮಾಡುವುದು ಹೀಗೆಯೆ. ಮತ್ತು ಶರ್ಮಾರಂಥ ಮೂಲಭೂತವಾದಿಗಳು ಬಯಸುವುದು ಇದನ್ನೆಯೆ. ಅವರಿಬ್ಬರು ಪರಸ್ಪರ ಏನೇ ತೆಗಳಿಕೊಳ್ಳಲಿ, ಅಂಥ ಮಾತು-ಸುದ್ದಿಗಳ ಪ್ರಸಾರದಿಂದ ಒಂದೆಡೆ ಮಾಧ್ಯಮಗಳಿಗೆ ಅಪಾರ ಧನಲಾಭ ವಾಗುತ್ತದೆ, ಇನ್ನೊಂದೆಡೆ ನಾಯಕರಿಗೆ ಪುಕ್ಕಟೆ ಪ್ರಚಾರ ದೊರಕುತ್ತದೆ. ಮತ್ತು ಈ ವಿಷಯದಲ್ಲಿ ಒಬ್ಬರ ಗುಟ್ಟು ಇನ್ನೊಬ್ಬರಿಗೆ ಚೆನ್ನಾಗಿಯೆ ತಿಳಿದಿರುತ್ತದೆ.)

ಆದರೆ ಈ ಸಂದರ್ಶನವನ್ನು ನಡೆಸುತ್ತಿದ್ದ ಸುಕೇತು ಮೆಹ್ತಾ ಇಷ್ಟಕ್ಕೆಯೆ ನಿಲ್ಲಲಿಲ್ಲ. ಅವರು ಮುಂದೆ ಬೇರೆಯೆ ಬಗೆಯ ಪ್ರಶ್ನೆಗಳನ್ನು ಕೇಳುತ್ತ ನಡೆದರು, ಶರ್ಮಾರ ಮನದ ಆಳವನ್ನು ಇನ್ನೊಂದಿಷ್ಟು ಅಳೆಯುವ ಪ್ರಯತ್ನಕ್ಕೆ ತೊಡಗಿದರು. ಆಗ ಶರ್ಮಾರ ಬಾಹ್ಯಗೋಚರ ವ್ಯಕ್ತಿತ್ವ ನಿಧಾನವಾಗಿ ಕರಗುತ್ತ ಅವರ ಅಂತರಂಗದ ಕೆಲವು ಅಜ್ಞಾತ ಆಯಾಮಗಳು ತೆರೆದುಕೊಳ್ಳಲಾರಂಭಿಸಿದವು. ದೇಶವಿಭಜನೆಗೆ ಮೊದಲು ಪಾಕಿಸ್ತಾನದ ಭಾಗದಲ್ಲಿ ತಾವು ಕಳೆದ ಬಾಲ್ಯ, ಹುಟ್ಟಿಬೆಳೆದ ಊರು - ಪರಿಸರ, ಅಲ್ಲಿದ್ದ ನೆರೆಹೊರೆಯವರು ಹಾಗೂ ಒಡನಾಡಿಗಳು ಇತ್ಯಾದಿಗಳನ್ನು ಅವರು ನೆನಪಿಸಿಕೊಳ್ಳುತ್ತ, ಮೆಹ್ತಾರವರಿಗೆ ವರ್ಣಿಸುತ್ತ ನಡೆದಂತೆಯೆ ಅವರ ಮಾತುಗಳ ಮೂಲಕ ಬೇರೊಂದೆ ರೀತಿಯ ಸ್ಮೃತಿಚಿತ್ರ ಮೂಡಲಾರಂಭಿಸಿತು; ಅಷ್ಟೆ ಅಲ್ಲ, ಶರ್ಮಾರ ವ್ಯಕ್ತಿತ್ವದ ಮತ್ತೊಂದೆ ಮುಖ ತೋರತೊಡಗಿತು.

ಆ ಸ್ಮೃತಿರಾಶಿಯ ಪ್ರಕಾರ, ಶರ್ಮಾ ಎಳೆಯ ಮಗುವಾಗಿದ್ದಾಗಲೆ ಅವರ ತಾಯಿ ತೀರಿಹೋಗಿದ್ದರು; ತಾಯಿಯ ಎದೆಹಾಲ ಭಾಗ್ಯವನ್ನು ಕಳೆದುಕೊಂಡಿದ್ದ ಆ ತಬ್ಬಲಿಗೆ ನೆರೆಯ ಮುಸ್ಲಿಮ್ ಮಹಿಳೆಯೋರ್ವಳು ತನ್ನ ಎದೆಹಾಲನ್ನುಣಿಸಿ ಪೊರೆದಿದ್ದಳು. ಹೀಗೆ ಬೆಳೆದ ಶರ್ಮಾ ಮುಂದೆ ಸುತ್ತಮುತ್ತಲ ಮುಸ್ಲಿಮರೊಂದಿಗೆ ಅನ್ಯೋನ್ಯವಾಗಿ ಬಾಳಿದ್ದರು, ಅನೇಕ ಮುಸ್ಲಿಮ್ ಸ್ನೇಹಿತರು ಹಾಗೂ ಹಿತೈಷಿಗಳನ್ನು

ಪಡೆದುಕೊಂಡಿದ್ದರು. ಇದಾದ ಕೆಲವೆ ವರ್ಷಗಳಲ್ಲಿ ದೇಶವಿಭಜನೆಯಾದುದು ಹೌದು, ಕೋಮುಗಲಭೆ ಸ್ಫೋಟಿಸಿದ್ದೂ ಹೌದು, ಹಿಂದೂ - ಮುಸ್ಲಿಮರು ಪರಸ್ಪರ ಕೊಚ್ಚಿಕೊಂಡದ್ದೂ ಹೌದು, ಮೂಲನೆಲೆಯನ್ನು ಕಳೆದುಕೊಂಡು ಶರ್ಮಾ ಮತ್ತು ಅವರಂತಹ ಲಕ್ಷೋಪಲಕ್ಷ ಹಿಂದೂಗಳು ಭಾರತಕ್ಕೆ ಬಂದು ಹೊಸನೆಲೆಯನ್ನು ಕಂಡುಕೊಂಡದ್ದೂ ಹೌದು. ಆದರೆ ಈಯೆಲ್ಲ ಭೀಕರ ಅನುಭವಗಳ ಅನಂತರವೂ ಶರ್ಮಾ ತಮ್ಮ ಬಾಲ್ಯದ ಸಿಹಿ ನೆನಪುಗಳನ್ನು ಕಳೆದುಕೊಂಡಿರಲಿಲ್ಲ, ಆಗ ಆತ್ಮೀಯರಾಗಿದ್ದು ಈಗ ವೈರಿಗಳಾಗಿದ್ದವರ ವಿಷಯದಲ್ಲಿ ವಿಷಭಾವ ಬೆಳೆಸಿಕೊಂಡಿರಲಿಲ್ಲ. ಬಹಿರಂಗದಲ್ಲಿ ಅವರು ಒಟ್ಟಾರೆ ಮುಸ್ಲಿಮರ ಬಗ್ಗೆ ಅದೆಷ್ಟೆ ದ್ವೇಷ ತೋರಿದರೂ ಅವರ ಅಂತರಂಗದಲ್ಲಿ ತಮ್ಮ ಬಾಲ್ಯದ ಆ ಮುಸ್ಲಿಮ್ ಆಪ್ತರ ಬಗ್ಗೆ ಅಪಾರ ಮಾರ್ದವತೆ ಹಾಗೂ ಕೃತಜ್ಞತೆಗಳೆ ತುಂಬಿಕೊಂಡಿದ್ದವು. ಆದರೆ ಈ ಅಂತರಂಗವನ್ನು ಬಹಿರಂಗದಲ್ಲಿ ಪ್ರಕಟಿಸಲು ಮಾತ್ರ ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಹಾಗೆ ಮಾಡುವಲ್ಲಿದ್ದ ಏಕೈಕ ಸಮಸ್ಯೆಯೆಂದರೆ ಅವರು ತಮ್ಮ ವ್ಯಕ್ತಿತ್ವವನ್ನು (ಆ ಆತ್ಮಛೇದಕ ಹಿಂಸೆಯ ಪರಿಣಾಮವಾಗಿಯೊ ಎಂಬಂತೆ) ಎರಡು ಭಾಗಗಳಾಗಿ ಸೀಳಿಕೊಂಡಿದ್ದರು, ಅವುಗಳಲ್ಲಿ ಒಂದು ಭಾಗವನ್ನು ಬಹಿರಂಗದಲ್ಲಿ ಪ್ರದರ್ಶಿಸಿ ಹಿಂದೂ ಮತೀಯವಾದಿಗಳ ಮುಂದಾಳುವಾಗಿ ಮೆರೆಯುತ್ತಿದ್ದರು, ಇನ್ನೊಂದು ಭಾಗದಲ್ಲಿ ಆ ಮತೀಯವಾದಿ ಸಹವರ್ತಿಗಳಿಗೆ ತಿಳಿಯದಂತೆ ಗುಟ್ಟಾಗಿ ಅಂತರಂಗದ ಕರೆಗೆ ಓಗೊಡುತ್ತಿದ್ದರು. ಉದಾಹರಣೆಗೆ, ಸಂದರ್ಶನದಲ್ಲಿ ಅವರೆ ಹೇಳಿಕೊಂಡಂತೆ, ಶೈಶವದಲ್ಲಿ ಅವರ ಜೀವವನ್ನು ಕಾಪಾಡಿದ್ದ ಆ ಸ್ತನದಾಯಿನಿ ಮುಸ್ಲಿಮ್ ಹೆಣ್ಣು ಬದುಕಿದ್ದ ತನಕವೂ ಆಕೆಗೆ ಅವರು ಪ್ರತಿತಿಂಗಳು ಒಂದಿಷ್ಟು ಹಣವನ್ನು ಕಳಿಸಿಕೊಟ್ಟಿದ್ದರು; ಆಗಾಗ ಗುಪ್ತವಾಗಿ ಪಾಕಿಸ್ತಾನಕ್ಕೆ ಹೋಗಿ, ಅಲ್ಲಿದ್ದ ತನ್ನ ಬಾಲ್ಯದ ಮುಸ್ಲಿಮ್ ಸ್ನೇಹಿತರ ಮನೆಗಳಲ್ಲಿ (ಗೋಮಾಂಸಭಕ್ಷಕರ ಹಾಗೂ ಕಾಮಪಿಪಾಸುಗಳ ಮನೆಗಳಲ್ಲಿ, ಹಿಂದೂಸ್ತ್ರೀಯರ ಮೇಲೆ ಅತ್ಯಾಚಾರ ನಡೆಸಿದ ಸಮುದಾಯದವರ ಮನೆಗಳಲ್ಲಿ!) ಕೆಲವು ದಿನ ತಂಗಿ ಕಷ್ಟ ಸುಖ ಹಂಚಿಕೊಂಡು ಬರುತ್ತಿದ್ದರು.

ತಮ್ಮ ಅಂತರಂಗದ ಈ ಸತ್ಯಗಳನ್ನು ಶರ್ಮಾ ಮಾಧ್ಯಮದವರೆದುರು ಎಂದೂ ನಿವೇದಿಸಿಕೊಳ್ಳಲಿಲ್ಲ. ಅಂಥ ಸತ್ಯಗಳನ್ನು ಸಾರ್ವಜನಿಕವಾಗಿ ಹೇಳಿಕೊಳ್ಳುವುದು ತನಗೆ ಸುದ್ದಿಸಂತೆಯಲ್ಲಿ ಹೆಚ್ಚು ಬೇಡಿಕೆ ತರುವುದಿಲ್ಲವೆಂದು, ಸ್ಪರ್ಧಾತ್ಮಕ ರಾಜಕೀಯದಲ್ಲಿ ಹೆಚ್ಚು ವೋಟುಗಳನ್ನು ಗಳಿಸಿಕೊಡುವುದಿಲ್ಲವೆಂದು, ತಾನು ಬಹಿರಂಗದಲ್ಲಿ ಅದಾಗಲೆ ಕಟ್ಟಿಕೊಂಡಿದ್ದ ಇಮೇಜಿಗೆ ಪುಷ್ಟಿ ನೀಡುವುದಿಲ್ಲವೆಂದು ಅವರಿಗೆ ಸ್ಪಷ್ಟವಾಗಿ ಗೊತ್ತಿತ್ತು. ಹಾಗಾಗಿ ಅವರು ತಮ್ಮ ಗತಜೀವನದ ಸ್ಮೃತಿಕೋಶದ



ಒಂದು ಭಾಗವನ್ನು ಮಾತ್ರ ಸಕ್ರಿಯವಾಗಿರಿಸಿಕೊಂಡು ಇನ್ನೊಂದು ಭಾಗವನ್ನು ಉದ್ದೇಶಪೂರ್ವಕವಾಗಿ ಮೌನದ ಮೂಲೆಗೆ ದೂಡಿದ್ದರು. ಆದರೆ ಹಾಗೆ ಮೌನವಾಸಕ್ಕೆ ಗುರಿಯಾಗಿದ್ದ ಆ ಸ್ಮೃತಿಭಾಗ ಮೂಕವಾಗಿತ್ತೆ ವಿನಃ ನಿಷ್ಕ್ರಿಯವೇನಾಗಿರಲಿಲ್ಲ; ಮೌನವನ್ನೊಡೆದು ಮಾತಾಗಿ ಪುಟಿದುಬರಲು ಅದು ತವಕಿಸುತ್ತಾ ಕುಳಿತಿತ್ತು. ಶರ್ಮಾ ಕೊನೆಗೂ ಹಾಗೆ ತಮ್ಮ ಒಳಗನ್ನು ತೆರೆದದ್ದು ಮಾನವ ಜೀವನಾನುಭವದ ವಿವಿಧ ವಲಯಗಳನ್ನು ಸ್ಪರ್ಶಿಸಿದ, ಅನೇಕಾನೇಕ ಸುತ್ತುಗಳಲ್ಲಿ ಸುದೀರ್ಘವಾಗಿ ಬೆಳೆಯುತ್ತ ಮನೋಲೋಕದ ವಿಭಿನ್ನ ಸ್ತರಸೂಕ್ಷ್ಮಗಳನ್ನು ಶೋಧಿಸಿದ ಸಂದರ್ಶನಸರಣಿಯೊಂದರಲ್ಲಿ ಎಂಬ ಸಂಗತಿಯೆ ಇಲ್ಲಿ ಇನ್ನೂ ಕೆಲವು ಮುಖ್ಯ ಸತ್ಯಗಳನ್ನು ಹೊಳೆಯಿಸುವಂತಹುದಾಗಿದೆ.

### ಅಂತಃಪ್ರತಿರೋಧದ ಮಾದರಿಗಳು

ನನ್ನ ಈವರೆಗಿನ ಜೀವನದ ಅಧ್ಯಯನದಲ್ಲಿ ನಾನು ಒಬ್ಬಾನೊಬ್ಬ ಆತ್ಮಸಂತೃಪ್ತ ಹಂತಕನನ್ನೂ ಕಂಡಿಲ್ಲ. ಬದಲು ನಾನು ಕಂಡಿರುವುದು ಒಂದಲ್ಲದಿನ್ನೊಂದು ಬಗೆಯಲ್ಲಿ ತುಸುವಾದರೂ ಆತ್ಮಸಂತಪ್ತರಾದ ಹಂತಕರನ್ನಷ್ಟೆ; ಹೊರಗೆ ವೀರಾವೇಶ ಮೆರೆಯುತ್ತ ಒಳಗೆ ಅಧೀರತೆಯಿಂದ ಬಳಲುತ್ತಿರುವ ಸಂತ್ರಸ್ತ ಆತ್ಮರನ್ನಷ್ಟೆ.

... ... ...

ಹೊರಪ್ರತಿರೋಧದ ಮಾದರಿಗಳ ಚರ್ಚೆಯಿಂದ ಈಗ ಒಳಪ್ರತಿರೋಧದ ಮಾದರಿಗಳಿಗೆ ಹೊರಳಬಹುದು.

ನಮ್ಮ ಅಧ್ಯಯನದಲ್ಲಿ ನಾವು ೧೯೪೭ - ೪೮ರ ಹಿಂಸಾಕಾಂಡದಲ್ಲಿ ಬಾಧಿತರಾದವರ ಜೊತೆಗೆ ಅದರಲ್ಲಿ ಇಷ್ಟಪಟ್ಟೊ ಇಲ್ಲ ಅನಿವಾರ್ಯವಾಗಿಯೊ ಭಾಗಿಯಾಗಿದ್ದ ಕೆಲವರನ್ನೂ ಭೇಟಿಯಾಗಿದ್ದೆವು, ಅವರೊಡನೆಯೂ ದೀರ್ಘ ಸಂದರ್ಶನಸರಣಿಗಳನ್ನು ನಡೆಸಿದ್ದೆವು. ಬಾಧಿತರಲ್ಲಿಯಂತೆಯೆ ಭಾಗಿಯಾದವರಲ್ಲಿಯೂ ಸಹ ವಿಶಿಷ್ಟವಾದ ಕೆಲವು ಭಾವವಿನ್ಯಾಸಗಳೂ ವಾದಮಾದರಿಗಳೂ ಕಂಡುಬಂದವು; ಬಹಿರಂಗ ಹಾಗೂ ಅಂತರಂಗಗಳ ನಡುವಿನ ಕೊಡುಕೊಳೆಯ ಮಟ್ಟಿಗೆ, ಸ್ಮೃತಿರೂಪ ಹಾಗೂ ಸ್ಮೃತಿಯನ್ನು ಅನುಸಂಧಿಸುವ ಕ್ರಮಗಳ ಅಂತರ್ಕ್ರಿಯೆಯ ಮಟ್ಟಿಗೆ ಇಲ್ಲಿಯೂ ಕೂಡ ವಿಶಿಷ್ಟವಾದ ಕೆಲವು ಮಾದರಿಗಳು ಗೋಚರವಾದವು. ಇವುಗಳು ಕೆಲವೆಡೆ ಬಾಧಿತರಲ್ಲಿ ಕಂಡುಬಂದ ಮಾದರಿಗಳನ್ನು ಹೋಲುತ್ತಿದ್ದರೆ ಇನ್ನು ಕೆಲವೆಡೆ ಸಾಕಷ್ಟು ಭಿನ್ನವಾಗಿದ್ದವು.

ಬಹುಮುಖ್ಯವಾಗಿ –

ಆ ಘಟನಾವಳಿಯಲ್ಲಿ ಸ್ವತಃ ಹಿಂಸೆಯನ್ನು ಪ್ರಯೋಗಿಸಿದ್ದವರು ಮೊದ ಮೊದಲು ತಾವು ಎದುರಾಳಿಗಳನ್ನು ಕೊಂದದ್ದನ್ನು ಅತ್ಯುಗ್ರವಾಗಿ ಸಮರ್ಥಿಸಿ ಕೊಳ್ಳುತ್ತಿದ್ದರು, ಆ ಕುರಿತು ಹಮ್ಮಿನಲ್ಲಿ ಬೀಗುತ್ತಿದ್ದರು. ಕೆಲವರು ಆತ್ಮರಕ್ಷಣೆಗೆಂದು ತಾವು ಪರರನ್ನು ಕೊಲ್ಲಬೇಕಾಯಿತೆಂದು ವಾದಿಸಿದರೆ ಇನ್ನು ಕೆಲವರು ತಮ್ಮ ಸಮುದಾಯದ ಗೌರವ ಕಾಪಾಡಲೆಂದು ತಾವು ಹಿಂಸೆಯ ಮೊರೆ ಹೋಗಬೇಕಾಯಿತೆಂದು ನುಡಿದರು. ಆ ಅನ್ಯಪಂಗಡದವರ ಸೊಕ್ಕು ಇಳಿಸಲು ತಮಗೆ ಹಿಂಸೆಯನ್ನು ಬಿಟ್ಟು ಬೇರಾವ ಮಾರ್ಗವೂ ಉಳಿದಿರಲಿಲ್ಲವೆಂದು ಕೆಲವರು ಹೇಳಿದರೆ ಮತ್ತೆ ಕೆಲವರು ತಮ್ಮ ಪಕ್ಷದವರಿಗೆ ಆ ಪರರು ಬೇರೆಡೆಯೆಲ್ಲೋ ನೀಡಿದ ಹಿಂಸೆಯನ್ನು ತಾವು ಅದೇ ಪರಪಂಗಡದ ಬೇರೆ ಸದಸ್ಯರಿಗೆ ಇಲ್ಲಿ ನೀಡಬಹುದೆಂಬುದನ್ನು ಸಿದ್ಧಮಾಡಿ ತೋರಿಸಲು ಹಾಗೆ ನಡೆದುಕೊಂಡೆವೆಂದು ವಾದಿಸಿದರು. ಹೀಗೆ ಅವರೆಲ್ಲ ಸಂದರ್ಶನದ ಪ್ರಥಮ ಘಟ್ಟಗಳಲ್ಲಿ ಚರ್ಚಾಸ್ಪರ್ಧೆಯೊಂದರಲ್ಲಿ ಭಾಗವಹಿಸಿದ ವಾಕ್ಪಟುಗಳಂತೆ ವಿವಿಧ ವೈಖರಿಗಳ ವಾದಗಳನ್ನು ಹೂಡಿ ತಮ್ಮ ಅಂದಿನ ಕೃತ್ಯಗಳನ್ನು ದ್ವಂದ್ವರಹಿತ ವಾದ ಧಾಟಿಯಲ್ಲಿ ಸಮರ್ಥಿಸಿಕೊಂಡರು. ಅವರಲ್ಲಿ ಯಾರೊಬ್ಬರೂ ಆ ಕೃತ್ಯಗಳ ಬಗ್ಗೆ ಯಾವುದೆ ಬಗೆಯ ನೀತಿಬಾಧೆಯನ್ನು ತೋರಲಿಲ್ಲ.

ಆದರೆ ಮುಂದೊಂದು ಅಚ್ಚರಿ ಕಾದಿತ್ತು. ನಿಧಾನವಾಗಿ, ಸಂದರ್ಶನಗಳು ಮುಂದುವರಿಯುತ್ತಿದ್ದಂತೆ, ಅವರೊಳಗಿನಿಂದ ಮತ್ತೊಂದೆ ಬಗೆಯ ವ್ಯಕ್ತಿತ್ವ ಒಡೆದುಮೂಡತೊಡಗಿತು. ಈಗ ಅವರು ಮಲ್ಲಮಾತುಗಳ ಮಧ್ಯೆ ಮೌನಕ್ಕೆ ಶರಣಾಗುತ್ತಿದ್ದರು, ನೆನಪಿನ ಪ್ರವಾಹದಲ್ಲೆಲ್ಲೋ ಮುಳುಗಿಹೋದಂತೆ ಅನ್ಯಮನಸ್ಕರಾಗಿ ವಿಷಣ್ಣವದನರಾಗಿ ಕುಳಿತಿರುತ್ತಿದ್ದರು; ಮತ್ತೆ ಸ್ವಾಧೀನ ಗಳಿಸಿಕೊಂಡು ನೀಳವಾಗಿ ನಿಡುಸುಯ್ದು, ನಾನಾಗ ಬಿಸಿಹರೆಯದವನಾಗಿದ್ದೆ, ಕುದಿರಕ್ತ ತುಂಬಿದವನಾಗಿದ್ದೆ, ಹಾಗಾಗಿ ಅಂಥ ಪೌರುಷ ಮೆರೆದಿದ್ದೆ, ಇಂದು ಅಂದಿನಂಥದೆ ಸಂದರ್ಭ ಪುನರಾವರ್ತನೆಯಾದಲ್ಲಿ ಮತ್ತೆ ಹಾಗೆಲ್ಲ ಮಾಡುವೆನೊ ಗೊತ್ತಿಲ್ಲ, ಎಂಬ ಬಗೆಯ ತುಸುತುಸುವೆ ಆತ್ಮಪರಿಶೀಲನೆಯ ಅಂಶವಿದ್ದ ಮಾತುಗಳನ್ನು ಮೆಲ್ಲಮೆಲ್ಲನೆ ಉಸುರುತ್ತಿದ್ದರು. ಕೆಲವರು ಆಗಿನ ಕಾಲಗುಣವೆ ಹಾಗಿತ್ತು, ಎಲ್ಲೆಡೆ ತಮಸ್ಸು ತಾಂಡವವಾಡುತ್ತಿತ್ತು, ಅಲ್ಲಿ ತಮ್ಮೆದುರು ಹಿಂಸೆಗೆ ಪರ್ಯಾಯವಾದ ಮಾದರಿಗಳೆ ಇರಲಿಲ್ಲ ಎಂದರು. ಎಷ್ಟೊ ಪ್ರಸಂಗಗಳಲ್ಲಿ ತಮ್ಮ ಮನದ ಭಾರವನ್ನು ಇಳಿಸಿಕೊಳ್ಳಲು ಅವರು ಸೂಕ್ತವಾದೊಂದು ಅವಕಾಶಕ್ಕೆಂದು ದಶಕಗಟ್ಟಲೆ ಕಾಯುತ್ತಿದ್ದರೊ, ನಮ್ಮ ಸಂದರ್ಶನಗಳಲ್ಲಿ ಅಂಥ ಅವಕಾಶವನ್ನು ಕಂಡರೊ ಎಂಬಂತೆ ನಡೆದುಕೊಳ್ಳುತ್ತಿದ್ದರು. ಇನ್ನು ಕೆಲವೆಡೆ, ತಮ್ಮ ಸ್ವಂತ ಮಕ್ಕಳು - ಮೊಮ್ಮಕ್ಕಳ ಬಳಿಯೆ ಹೇಳಿಕೊಳ್ಳಲಾಗದ್ದನ್ನು



ಈಗ ಅದೇ ಮಕ್ಕಳು - ಮೊಮ್ಮಕ್ಕಳ ವಯಸ್ಸಿನವರಾದ ಆದರೆ ಅಪರಿಚಿತರಾದ ಈ ಯುವ ಸಂದರ್ಶಕರ ಬಳಿ ಆದಷ್ಟು ಬೇಗ ಹೇಳಿಕೊಂಡುಬಿಡಬೇಕು ಎಂಬ ತೀವ್ರತೆಯೂ ಅವರಲ್ಲಿ ಎದ್ದುಕಾಣುತ್ತಿತ್ತು (ನಾವು ಸಂದರ್ಶಿಸಿದ ಈ ಹಂತಕರಲ್ಲಿ ಅತ್ಯಂತ ಕಿರಿಯ ವ್ಯಕ್ತಿಗಳು ೭೦ - ೭೫ ವರ್ಷದವರಾಗಿದ್ದರೆ ಅತ್ಯಂತ ಹಿರಿಯ ಅದಾಗಲೆ ೧೦೮ ವರ್ಷದವನಾಗಿದ್ದ). ನಲವತ್ತು - ನಲವತ್ತೈದು ವರ್ಷಗಳ ಹಿಂದೆ ತಾನು ನಿರ್ದಿಷ್ಟವಾದೊಂದು ಸನ್ನಿವೇಶದಲ್ಲಿ ನಿರ್ದಿಷ್ಟವಾದ ಕೆಲವು ವ್ಯಕ್ತಿಗಳನ್ನು ನಿರ್ದಿಷ್ಟವಾದ ಕೆಲವು ಕ್ರಮಗಳಲ್ಲಿ ಕೊಂದದ್ದು ಸರಿಯೋ ತಪ್ಪೋ ಎಂಬ ಸಂದಿಗ್ಧ ಅವರನ್ನು ಕಾಡುತ್ತಿತ್ತು. ಇಷ್ಟು ದಶಕಗಳು ಯಾರಲ್ಲೂ ಆ ಆತ್ಮಗ್ಲಾನಿಯನ್ನು ಹೇಳಿಕೊಳ್ಳಲಾಗದೆ ಈಗ ಯಾರೋ ಕೆಲವರು ಬಂದು ತಾವಾಗಿ ಆ ವಿಷಯವೆತ್ತಿ ಮಾತನಾಡುವಾಗಲಾದರೂ ಹೇಗಾದರೂ ಮಾಡಿ ತಾನಂದುಗೈದ ಕೃತ್ಯದ ನೀತಿ - ಅನೀತಿಯ ಕುರಿತು ಅನ್ಯರಿಂದ ಸಮರ್ಥನೆಯನ್ನು ಪಡೆದು ಆ ಆತ್ಮಬಾಧೆಯನ್ನು ನೀಗಿಕೊಳ್ಳಬೇಕೆಂದು ಅವರು ಅತೀವವಾಗಿ ಹಂಬಲಿಸಿದಂತಿತ್ತು.

ಒಟ್ಟಿನಲ್ಲಿ, ಎಲ್ಲರಲ್ಲೂ ಬಹುಸ್ಪಷ್ಟವಾಗಿ ದ್ವಂದ್ವಗೊಂದಲವೊಂದು ಕಂಡುಬರುತ್ತಿತ್ತು; ಅವರ ತೊಳಲಾಟದ ಧಾಟಿಯಲ್ಲಿಯೆ ಅವರ ವ್ಯಕ್ತಿತ್ವದ ಒಡಕೊಂದು ಗೋಚರಿಸುತ್ತಿತ್ತು. ಅವರ ಒಂದು ಸ್ತರದ ಮಾತು ಬಹಿರಂಗವನ್ನು ಪ್ರದರ್ಶಿಸುತ್ತಿದ್ದಂತೆ ಇನ್ನೊಂದು ಸ್ತರದ ಮಾತು ಅದಕ್ಕೆ ತೀರಾ ವಿರುದ್ಧವಾಗಿ ಅಂತರಂಗವನ್ನು ಪ್ರತಿಫಲಿಸುತ್ತಿದ್ದಂತೆ ಕಾಣುತ್ತಿತ್ತು. ಅರ್ಥಾತ್, ಆ ಧೀರ ಹಂತಕರ ಮನದೊಂದು ಮೂಲೆಯಲ್ಲಿ ಅಧೀರತೆಯ ಭೂತ ಕಾಡುತ್ತ ಕುಳಿತಿತ್ತು.

ನಮ್ಮ ಇಡೀ ಅಧ್ಯಯನದಲ್ಲಿ ನಾವು ಒಬ್ಬಾನೊಬ್ಬ ಆತ್ಮಸಂತೃಪ್ತ ಹಂತಕನನ್ನೂ ಕಾಣಲಿಲ್ಲ. ಬದಲಿಗೆ ಅಲ್ಲಿ ನಾವು ಕಂಡಿದ್ದು ಒಂದಲ್ಲದಿನ್ನೊಂದು ಬಗೆಯಲ್ಲಿ ತುಸುವಾದರೂ ಆತ್ಮಸಂತಪ್ತರಾದ ಹಂತಕರನ್ನು ಮಾತ್ರ, ಹೊರಗೆ ವೀರವೇಷ ಧರಿಸಿಕೊಂಡಿದ್ದು ಒಳಗೆ ಅಧೀರತೆಯಿಂದ ಬಳಲುತ್ತಿದ್ದ ಸಂತ್ರಸ್ತ ಆತ್ಮರನ್ನು ಮಾತ್ರ.

ಇದಕ್ಕೊಂದು ಉದಾಹರಣೆಯಾಗಿ ಮಂಗತ್‌ರಾಮನ ಪ್ರಸಂಗವನ್ನು ನೋಡಬಹುದು. ಜಾಟ್ ಸಮುದಾಯಕ್ಕೆ ಸೇರಿದ ಮಂಗತ್‌ರಾಮ್ ನಮ್ಮ ಸಂದರ್ಶನದ ವೇಳೆಗಾಗಲೆ ವಯೋವೃದ್ಧನಾಗಿದ್ದ. ಮೊದಲಿನಿಂದಲೂ ಬೆಳೆಸಿಕೊಂಡು ಬಂದಿದ್ದ ಕುಟುಂಬದ ಹಾಗೂ ಪಂಗಡದ ಹಿರಿಯನ ಗತ್ತನ್ನು ಆತ ಇಳಿವಯಸ್ಸಿನಲ್ಲಿಯೂ ಗಟ್ಟಿಯಾಗಿ ಉಳಿಸಿಕೊಂಡಿದ್ದ. ತನ್ನನ್ನು ಸಂದರ್ಶಿಸಲು ಬಂದವರೊಡನೆ ಆತ ಅಧಿಕಾರದರ್ಪದ ಹಿರಿಯರು ಕಿರಿಯರೊಡನೆ ಬಳಸುವಂತಹ ಗಡಸುದನಿಯಲ್ಲಿಯೆ ಮಾತನಾಡುತ್ತಿದ್ದ. ಸಂದರ್ಶನದ ಮೊದಲ ಸುತ್ತುಗಳಲ್ಲಿ ಎಲ್ಲರೂ

ನಡೆದುಕೊಂಡಂತೆಯೆ ಆತ ಕೂಡ ತಾನು ಕಂಡಿದ್ದ ಮತ್ತು ಭಾಗಿಯಾಗಿದ್ದ ಆ ಕೋಮು ಹಿಂಸಾಚಾರದ ಬಗ್ಗೆ ಕ್ರುದ್ಧ ಭಾವದಲ್ಲೆ ವಿವರಗಳನ್ನು ನೀಡಿದ; ತಾನು ಆ ಹಿಂಸೆಯಲ್ಲಿ ಪಾಲ್ಗೊಂಡಿದ್ದನ್ನು ಪದೇಪದೆ ಸಮರ್ಥಿಸಿಕೊಂಡ. ಹಾಗೆಯೆ, ಕಾಡಲ್ಲಿ ದೊಡ್ಡ ಮರವೊಂದು ಕಡಿದುಬಿದ್ದಾಗ ಅದರ ಬುಡದಲ್ಲಿ ಬೆಳೆದಿದ್ದ ಸಣ್ಣಪುಟ್ಟ ಗಿಡಗಳು ನೆಲಸಮವಾಗುವುದಕ್ಕೆ ಯಾರೂ ಏನೂ ಮಾಡಲು ಸಾಧ್ಯವಿಲ್ಲವೆಂಬ ಹಳೆಯದೊಂದು ಉಕ್ತಿಯನ್ನು ಉದ್ಧರಿಸಿದ, ಅದನ್ನು ತಂದು ಆ ಹಿಂಸಾಕಾಂಡಕ್ಕೆ ಅನ್ವಯಿಸಿದ. ಇಷ್ಟಾಗುವಷ್ಟರಲ್ಲಿ ಸಂದರ್ಶನದ ಮಾತು ಆತ ಸ್ವತಃ ನಡೆಸಿದ ಹಿಂಸಾಕೃತ್ಯಗಳತ್ತ ತಿರುಗಿತು. ಆತ ಅಂಥದೊಂದು ಕೃತ್ಯವನ್ನು ವರ್ಣಿಸತೊಡಗಿದ. ಆತನ ಊರಲ್ಲಿ ಆಗ ಮುಸ್ಲಿಮರ ಸಮುದಾಯವೊಂದು ಬಾಳಿಕೊಂಡಿತ್ತಂತೆ. ವಿಭಜನೆಯ ಕಾವು ಏರುತ್ತಿದ್ದಂತೆಯೆ ಆ ಮುಸ್ಲಿಮರು ಒಟ್ಟಿಗೆ ತಂಡ ಕಟ್ಟಿಕೊಂಡು ಪಾಕಿಸ್ತಾನಕ್ಕೆ ವಲಸೆ ಹೋಗಲು ಯತ್ನಿಸಿದರಂತೆ. ಈ ಸನ್ನಿವೇಶದಲ್ಲಿ ಊರಿನ ಜಾಟರು ಸೇರಿಕೊಂಡು ದಾಳಿ ನಡೆಸಿ ಆ ಮುಸ್ಲಿಮರ ಸಾಮೂಹಿಕ ಹತ್ಯೆ ನಡೆಸಿದರಂತೆ, ಅದರಲ್ಲಿ ಆ ಮುಸ್ಲಿಮರು ಎಲ್ಲ ಬಲಿಯಾದರಂತೆ. ಇದನ್ನೆಲ್ಲ ವಿವರಿಸುತ್ತ ಮಂಗತ್‌ರಾಮ್, ಆ ಹತ್ಯೆಯಲ್ಲಿ ನಾನೂ ಪಾಲುಗೊಂಡಿದ್ದೆ, ಊರ ಹೊರಗಿನ ಕಾಲುವೆ ದಾಟಿ ಸಾಗುತ್ತಿದ್ದ ಆ ನಿಶ್ಶಸ್ತ್ರ ಮುಸ್ಲಿಮರ ಮೇಲೆ ನನ್ನ ಬಂದೂಕಿನಿಂದ ಗುಂಡಿನ ಮಳೆಗರೆದೆ, ಹೆಂಗಸರು ಮಕ್ಕಳು ಮುದುಕರು ಸೇರಿದಂತೆ ಅನೇಕರನ್ನು ಆಹುತಿ ತೆಗೆದುಕೊಂಡೆ ಎಂದು ಹೇಳಿದ. ಅದರ ಮರುಉಸಿರಿನಲ್ಲೆ ಸ್ವಸಮರ್ಥನೆಗೆ ತೊಡಗಿದ: ನಾನಾಗ ಬಿಸಿರಕ್ತದ ಯುವಕನಾಗಿದ್ದೆ, ಹಾಗಾಗಿ ಅಂಥ ಪರಾಕ್ರಮ ತೋರಿದೆ; ಈಗ ನಾನು ಅಂಥದನ್ನೆಲ್ಲ ಮಾಡಲು ಅಶಕ್ತ; ತಮ್ಮ ಸಮುದಾಯದ ತಮ್ಮ ದೇಶದ ಗೌರವ ರಕ್ಷಣೆಗೆಂದು ಹೀಗೆಲ್ಲ ಮಾಡುವುದು ಯುವಕರಿಗೆ ಮಾತ್ರ ಸಾಧ್ಯ, ಇತ್ಯಾದಿಯಾಗಿ ನುಡಿದ.

ಇಷ್ಟು ಹೇಳುವ ಹೊತ್ತಿಗೆ ಆತನ ಮನೋನಿಗ್ರಹದ ಕಟ್ಟೆ ಒಡೆದುಹೋಯಿತು. ಕೈಗಳಲ್ಲಿ ಮುಖ ಹುದುಗಿಸಿಕೊಂಡು ಆತ ಗಳಗಳ ಅಳತೊಡಗಿದ, ಮುಂದೆ ಮಾತು ಸಾಧ್ಯವಿಲ್ಲವೆಂಬಂತೆ ಮೂರ್ತಿಯ ಹಾಗೆ ಕುಳಿತುಕೊಂಡ. ಅದು ಆತ ನಮಗೆ ನೀಡಿದ ಅಂತಿಮ ಸಂದರ್ಶನವಾಯಿತು. ಸಂದರ್ಶನದ ಮೊದಲ ಸುತ್ತೊಂದರಲ್ಲಿ ಮಂಗತ್‌ರಾಮ್, ಹೆಂಗಸರಂತೆ ವರ್ತಿಸುವ ಗಂಡಸರ ಬಗ್ಗೆ, ಅದರಲ್ಲೂ ಹೆಂಗಸರಂತೆ ಅಳುವ ಗಂಡಸರ ಬಗ್ಗೆ ಇರುವಷ್ಟು ಅಸಹ್ಯಭಾವ ತನಗೆ ಇನ್ಯಾವುದರ ಬಗ್ಗೆಯೂ ಇಲ್ಲವೆಂದು ಹೆಮ್ಮೆಯಿಂದ ಹೇಳಿಕೊಂಡಿದ್ದ. ಈಗ ಅದೇ ಸಂದರ್ಶಕನ ಎದುರು ತನ್ನ ಒಳಗಿನ ಹೆಣ್ತನ ಬಯಲಾದ ಮೇಲೆ ಮತ್ತೆ ಮೊದಲಿನಂತೆ ಅವನನ್ನು ಎದುರಿಸಲಾರೆ ಎಂಬ ಅಧೀರತೆ ಆತನನ್ನು ಕಾಡಿತೋ ಏನೋ, ಮುಂದೆ ನಮ್ಮ ತಂಡದ ಸಂದರ್ಶಕ ಎಷ್ಟು



ಪ್ರಯತ್ನಿಸಿದರೂ ಮಂಗತ್‌ರಾಮ್ ಅವನನ್ನು ಮತ್ತೆ ಭೇಟಿಯಾಗಲು ಒಪ್ಪಲೆ ಇಲ್ಲ.

ಈ ಸ್ಥಿರ - ಅಸ್ಥಿರ ಮನೋವಿನ್ಯಾಸ ನಮಗೆ ಅತ್ಯಂತ ಗಾಢವಾಗಿಯೂ ಸಂಕೀರ್ಣವಾಗಿಯೂ ಕಂಡುಬಂದದ್ದು ಇನ್ನೋರ್ವ ವ್ಯಕ್ತಿಯಲ್ಲಿ, ನಾವು ಸಂದರ್ಶಿಸಿದವರಲ್ಲೆಲ್ಲ ಅತಿಹೆಚ್ಚು ಕುಖ್ಯಾತಿಯನ್ನು ಗಳಿಸಿದ್ದ ಒಬ್ಬ ಹಂತಕನಲ್ಲಿ. ಈತ ಮದನ್‌ಲಾಲ್ ಪಾಹ್ವಾ, ಮೋಹನದಾಸ್ ಕರಮಚಂದ್ ಗಾಂಧಿಯ ಹತ್ಯೆಯ ಸಂಚನ್ನು ರೂಪಿಸಿದವರಲ್ಲಿ ಒಬ್ಬನಾಗಿದ್ದವನು; ನಾಥುರಾಮ್ ಗೋಡ್ಸೆ ಕೊನೆಗೆ ಗಾಂಧಿಯನ್ನು ಬಲಿ ತೆಗೆದುಕೊಳ್ಳುವ ಐದು ದಿನಗಳ ಮೊದಲು ಅದೇ ಗುರಿಯನ್ನಿಟ್ಟು ಕೊಂಡು ಪ್ರಾರ್ಥನಾ ಸಭೆಯೊಂದರಲ್ಲಿ ಗಾಂಧಿಯತ್ತ ಬಾಂಬು ಎಸೆದವನು. ಜನವರಿ ೨೫, ೧೯೪೮ರಂದು ಪಾಹ್ವಾ ನಡೆಸಿದ ಈ ಪ್ರಯತ್ನ ವಿಫಲವಾಗಿ ಗಾಂಧಿಗೆ ಇನ್ನೈದು ದಿನಗಳ ಅಧಿಕ ಜೀವನ ದೊರಕಿತು. ಪಾಹ್ವಾ ಸೆರೆಸಿಕ್ಕು ಮುಂದೆ ವಿಚಾರಣೆಗೆ ಒಳಪಟ್ಟ, ಗಾಂಧಿ ಹತ್ಯೆಯ ಸಂಚಿನಲ್ಲಿ ಆತನ ಪಾಲು ಸಾಬೀತಾಗಿ ಜೈಲುಶಿಕ್ಷೆ ಅನುಭವಿಸಿದ.

ನಾವು ಆತನನ್ನು ಸಂದರ್ಶಿಸುವ ಹೊತ್ತಿಗೆ ಪಾಹ್ವಾ ಅದಾಗಲೇ ಇತಿಹಾಸದ ಪುಟಗಳಿಗೆ ಸೇರಿಹೋದ ವ್ಯಕ್ತಿಯಾಗಿದ್ದ. ಆತನಿಗಾಗ ಎಪ್ಪತ್ತೈದರ ಮೇಲೆ ವಯಸ್ಸಾಗಿತ್ತು, ದೇಹಾರೋಗ್ಯ ಶಿಥಿಲಗೊಂಡಿತ್ತು, ಮತ್ತು ಹೊರಜಗತ್ತು ಆತನನ್ನು ಸಂಪೂರ್ಣವೆಂಬಂತೆ ಮರೆತಿತ್ತು. ಇಂಥ ದಯನೀಯ ಸ್ಥಿತಿಯಲ್ಲಿ ಆತ ಮುಂಬಯಿ ನಗರದ ಬಡ ವಲಯವೊಂದರಲ್ಲಿ ಹರುಕುಮುರುಕಾದ ಕಟ್ಟಡವೊಂದರಲ್ಲಿ ಯಾವುದೊ ಒಂದು ಉದ್ಯೋಗ ಒದಗಿಸುವ ಏಜನ್ಸಿಯನ್ನು ನಡೆಸಿಕೊಂಡು, ತನ್ನ ಪತ್ನಿಯೊಂದಿಗೆ ಜೀವಿಸಿಕೊಂಡಿದ್ದ. ನಾವು ಬಹುಬೇಗ ಕಂಡುಕೊಂಡಂತೆ, ಮೇಲಿನ ಕಥೆಯ ಮಂಗತ್‌ರಾಮನಂತೆ ಪಾಹ್ವಾನಲ್ಲೂ ಗತ್ತಿತ್ತು, ಆತನ ಮಾತಿನಲ್ಲಿ ಗರ್ವವಿತ್ತು. ನಮ್ಮ ಸಂದರ್ಶನಸರಣಿಯಲ್ಲಿ ಆತ ಎಂದಿಗೂ ಗಾಂಧಿಹತ್ಯೆಯಲ್ಲಿ ಭಾಗಿಯಾಗಿ ತಾನು ತಪ್ಪೆಸಗಿದೆನೇನೋ ಎಂಬ ಆತ್ಮಸಂಶಯದ ಸಣ್ಣ ಸೆಳಕನ್ನೂ ತೋರಲಿಲ್ಲ. ತದ್ವಿರುದ್ಧವಾಗಿ ತನ್ನ ಆ ಕೃತ್ಯದ ಬಗ್ಗೆ ಆತ ದೊಡ್ಡ ಹೆಮ್ಮೆಯನ್ನೆ ಬೆಳೆಸಿಕೊಂಡಿದ್ದ; ಅದು ತನ್ನ ಇಡಿಯ ಜೀವನಕ್ಕೆ ಘನವಾದ ಅರ್ಥವೊಂದನ್ನು ಪ್ರದಾನ ಮಾಡಿದ ಕೃತ್ಯವೆಂದೆ ಆತ ನಂಬಿಕೊಂಡಿದ್ದ. ಆ ಒಂದು ಕೃತ್ಯದಿಂದ ಆತ ೧೭ ವರ್ಷಗಳನ್ನು – ಜೀವಾವಧಿ ಶಿಕ್ಷೆಗಿಂತಲೂ ಹೆಚ್ಚಾದ ಅವಧಿಯನ್ನು – ಕಾರಾಗೃಹದಲ್ಲಿ ಕಳೆಯುವಂತಾಗಿತ್ತು. ಸಂಚಿನಲ್ಲಿ ಭಾಗಿಯಾಗಿದ್ದ ಕಾಲದಲ್ಲಿ ಆತನಿನ್ನೂ ಕಿರಿಯ ವಯಸ್ಸಿನವನಾಗಿದ್ದನೆಂಬ ಕಾರಣಕ್ಕೆ ನ್ಯಾಯಾಲಯ ಆತನಿಗೆ ಗೋಡ್ಸೆಗೆ ಕೊಟ್ಟಂತಹ ಮರಣಶಿಕ್ಷೆಯ ಬದಲಿಗೆ ಜೀವಾವಧಿ ಶಿಕ್ಷೆಯನ್ನಷ್ಟೆ ನೀಡಿತ್ತು. ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಜೈಲಿಗೆ ಹೋಗಿದ್ದ ಪಾಹ್ವಾ ಅಲ್ಲಿ ಹದಿನೇಳು ವರ್ಷಗಳನ್ನು ಕಳೆದು ಮತ್ತೆ ಹೊರಜಗತ್ತಿಗೆ

ಮರಳಿದ್ದ. ಆತ ಸೆರೆಮನೆಯಿಂದ ಹೊರಬರುತ್ತಿದ್ದಂತೆಯೆ ನಾಥುರಾಮನ ಸಹೋದರ ಗೋಪಾಲ್ ಗೋಡ್ಸೆ ಆತನಿಗೆಂದು ಗೊತ್ತುಮಾಡಿಕೊಟ್ಟ ಮಹಾರಾಷ್ಟ್ರೀಯ ವಧುವೋರ್ವಳನ್ನು ವರಿಸಿ ಸರ್ವಸಾಮಾನ್ಯ ಸಾಂಸಾರಿಕ ಜೀವನ ನಡೆಸಿಕೊಂಡಿದ್ದ. ಸಂದರ್ಶನದ ಉದ್ದಕ್ಕೂ ಆತ ಮತ್ತೆಮತ್ತೆ ಹೇಳುತ್ತಿದ್ದ: ಅಹಿಂಸೆ - ಸತ್ಯಗಳಂತಹ ಅಪ್ರಯೋಜಕ ತತ್ತ್ವಗಳಿಂದ ಹಾಗೂ ಸತ್ಯಾಗ್ರಹ - ಆತ್ಮಶಕ್ತಿಪ್ರಯೋಗಗಳಂತಹ ತಮ್ಮ ಮೂರ್ಖ ಮೂಢ ಕ್ರಮಗಳಿಂದ ಗಾಂಧಿ ಭಾರತ ಪ್ರಬಲವಾದ ಆಧುನಿಕ ರಾಷ್ಟ್ರವಾಗಿ ಬೆಳೆಯುವಲ್ಲಿ ಬಹುದೊಡ್ಡ ಅಡ್ಡಿಯಾಗಿದ್ದರು; ಮುಸ್ಲಿಮರ ಪೀರ (ಹಿರಿಯ)ನಾಗುತ್ತೇನೆಂದು ಹೊರಟು ಹಿಂದೂಗಳ ಹಿತವನ್ನು ಕಡೆಗಣಿಸಿದರು; ಹಾಗಾಗಿ ನಾನು ಗಾಂಧಿಯ ಹತ್ಯೆಯಲ್ಲಿ ಪಾಲ್ಗೊಂಡಿದ್ದು ದೇಶಸೇವೆಯ ಕೃತ್ಯವಲ್ಲದೆ ಬೇರೇನೂ ಅಲ್ಲ. ನಾವು ಆತನೊಡನೆ ಮಾತನಾಡುವಾಗ ಕೆಲವೊಮ್ಮೆ ಆತನ ಹೆಂಡತಿಯೂ ಜೊತೆಗಿರುತ್ತಿದ್ದಳು, ಗಂಡನೊಂದಿಗೆ ದನಿಗೂಡಿಸುತ್ತಾ, ಹೌದು, ಇವರು ಮಾಡಿದ್ದೆಲ್ಲವೂ ದೇಶಕ್ಕಾಗಿಯೆ ಅಲ್ಲವಾ ಎಂದು ನಮ್ಮತ್ತ ತಿರುಗಿ ಕೇಳುತ್ತಿದ್ದಳು.

ನಮ್ಮ ಸಂದರ್ಶನಸರಣಿ ಮುಂದುವರಿದಂತೆ ಪಾಹ್ವಾನ ಸ್ಮೃತಿಸುರುಳಿ ಬಿಚ್ಚಿಕೊಳ್ಳತೊಡಗಿತು. ಮಾತುಕತೆ ಆತನ ವೈಯಕ್ತಿಕ ಜೀವನದತ್ತ ಹೊರಳಿ, ಆತ ತನ್ನ ಬಾಲ್ಯಕಾಲ ಕಥೆಯನ್ನು ಹೇಳಿಕೊಳ್ಳಲಾರಂಭಿಸಿದ. ಆತನ ಜನ್ಮ ಇಂದಿನ ಪಾಕಿಸ್ತಾನದಲ್ಲಿರುವ ಬಾಗ್‌ಪತ್ತನ್ ಎಂಬ ಸಣ್ಣ ಹಳ್ಳಿಯಲ್ಲಾಗಿತ್ತು. ಆತ ಆ ತನ್ನ ಎಳವೆಯ ದಿನಗಳನ್ನು ನೆನಪಿಸಿಕೊಳ್ಳುತ್ತಿದ್ದಂತೆಯೆ ಆತನ ಕಥನದಲ್ಲಿ ಅನಿರೀಕ್ಷಿತವೂ ಅಪರೂಪವೂ ಆದೊಂದು ಮಾರ್ದವ, ಮಮತೆ ಹಾಗೂ ಚೆಲುವುಗಳನ್ನೊಳಗೊಂಡ ಶೈಲಿ ತೋರತೊಡಗಿತು. ಆ ದಿನಗಳು ತನ್ನ ಒಟ್ಟೂ ಜೀವನದ ಅತ್ಯಂತ ಚಂದದ ದಿನಗಳಾಗಿದ್ದುವೆಂದು ಆತ ಮತ್ತೆಮತ್ತೆ ಸ್ಮರಿಸಿಕೊಂಡ. (ಹೀಗೆ ತಮ್ಮ ಬಾಲ್ಯಕಾಲ ಸ್ಮೃತಿಗೆ ತಿರುಗುತ್ತಿದ್ದಂತೆಯೆ ಭಾವಸಮೃದ್ಧರಾಗುವುದು ಹಾಗೂ ಆ ಕಾಲಾವಧಿಯ ಕುರಿತು ಆರಾಧಕ ಭಾಷೆಯಲ್ಲಿ ಮಾತನಾಡುವುದು ಪಾಹ್ವಾನಲ್ಲಿ ಮಾತ್ರವಲ್ಲ, ನಾವು ಸಂದರ್ಶಿಸಿದ ಬಹುಪಾಲು ಹಂತಕರಲ್ಲಿ ಸರ್ವಸಾಧಾರಣವಾಗಿ ಕಂಡುಬಂದ ಪ್ರಮುಖ ಲಕ್ಷಣವೊಂದಾಗಿತ್ತು.) ಸಂದರ್ಶನದ ಮೊದಲ ಸುತ್ತುಗಳಲ್ಲೆಲ್ಲ ಮುಸ್ಲಿಮರನ್ನು ಅತಿದ್ವೇಷದಿಂದ ದೂಷಿಸಿದ್ದ ಪಾಹ್ವಾ ಈಗ ಅದೇ ಧರ್ಮದ ತನ್ನ ಬಾಲ್ಯ ಸ್ನೇಹಿತರನ್ನು ಮತ್ತು ನೆರೆಹೊರೆಯವರನ್ನು ತುಂಬುಹೃದಯದೊಂದಿಗೆ ನೆನಪಿಸಿಕೊಂಡ. ಆತನ ಒಟ್ಟೂ ಸ್ಮೃತಿಸಂಪುಟದಿಂದ ಸ್ಪಷ್ಟವಾಗಿ ತಿಳಿಯಬರುತ್ತಿದ್ದಂತೆ, ಆತನ ಬಾಲ್ಯದ ಬಾಗ್‌ಪತ್ತನ್‌ನ ಒಟ್ಟೂ ಸಾಮುದಾಯಿಕ ಜೀವನ ಆ ಊರಿನಲ್ಲಿದ್ದ ಬಾಬಾ ಫರೀದ್‌ನ ದರ್ಗಾದ ಸುತ್ತ ಕಟ್ಟಲ್ಪಟ್ಟಿತ್ತು. ಪಾಹ್ವಾ ಹೇಳಿಕೊಂಡಂತೆ, ಆ ದರ್ಗಾದಲ್ಲಿ ಪ್ರತಿವರ್ಷ



ಮೂರುದಿನಗಳ ಉತ್ಸವವೊಂದು ನಡೆಯುತ್ತಿತ್ತು, ಖ್ಯಾತ ಕವಾಲಿ ಗಾಯಕರು ಅನೇಕರು ಆಗಮಿಸಿ ಅಲ್ಲಿ ಹಾಡುತ್ತಿದ್ದರು, ಆತ ಅತ್ಯಾಸಕ್ತಿಯೊಂದಿಗೆ ಆ ಸಮಾರಂಭಗಳಲ್ಲಿ ಪಾಲ್ಗೊಳ್ಳುತ್ತಿದ್ದ. ನಮ್ಮ ಸಂದರ್ಶನಗಳಲ್ಲಿ ಈ ವಿವರಗಳನ್ನೆಲ್ಲ ಮನದ ಮುನ್ನೆಲೆಗೆ ತಂದುಕೊಳ್ಳುತ್ತ ಪಾಹ್ವಾ ಭಾವಾವಿಷ್ಟನಾಗಿಹೋದ, ದಶಕಗಳ ಹಿಂದೆ ಕೇಳಿ ಖುಷಿಪಟ್ಟಿದ್ದ ಕವ್ವಾಲಿಗಳ ಕೆಲವು ಸಾಲುಗಳನ್ನು ಭಾವಾಭಿನಯಸಹಿತ ಹಾಡಿ ತೋರಿಸಿದ ಕೂಡ. ನಿಸ್ಸಂದೇಹವಾಗಿ ಅಂತರಾಳಪ್ರೇರಿತವಾಗಿದ್ದ ಆತನ ಆ ವರ್ತನೆ ಆತನ ಇಡಿಯ ಜೀವನದ ಅಂತರಾರ್ಥವೆ ಆ ಬಾಲ್ಯಕಾಲಸ್ಮೃತಿಯಿಂದ ನಿಯಂತ್ರಿತವಾಗಿತ್ತೋ ಎನ್ನುವ ಅನುಮಾನಕ್ಕೆ ಬಲವಾದ ಸಾಕ್ಷ್ಯಾಧಾರ ಒದಗಿಸುವಂತಿತ್ತು.

ಮುಂದೆ, ಆತ ಹೇಳಿಕೊಂಡಂತೆ, ಪಾಹ್ವಾ ಹುಡುಗನಾಗಿದ್ದಾಗಲೆ ತನ್ನ ತಾಯಿಯನ್ನು ಕಳೆದುಕೊಂಡ; ಆತನ ತಂದೆ ಮತ್ತೊಂದು ಮದುವೆಯಾದ. ಮಲತಾಯಿ ಪಾಹ್ವಾನನ್ನು ಕ್ರೂರವಾಗಿ ನಡೆಸಿಕೊಳ್ಳುತ್ತಿದ್ದಳು; ತಂದೆ ತನ್ನ ಎರಡನೆಯ ಹೆಂಡತಿಯ ಕಡೆಗೇ ಹೆಚ್ಚು ಒಲವು ತೋರುತ್ತಿದ್ದ. ಪಾಹ್ವಾನಿಗೂ ಆ ಮಲತಾಯಿಗೂ ಆಗಾಗ ಜಗಳಗಳಾಗುತ್ತಿದ್ದವಂತೆ, ಆಗೆಲ್ಲ ತಂದೆ ನ್ಯಾಯಾನ್ಯಾಯ ವಿಚಾರಿಸದೆಯೆ ಹೆಂಡತಿಯ ಪಕ್ಷ ವಹಿಸುತ್ತಿದ್ದನಂತೆ, ಪಾಹ್ವಾನನ್ನು ನಿರ್ದಯವಾಗಿ ಹೊಡೆಯುತ್ತಿದ್ದನಂತೆ. ನಮ್ಮ ಸಂದರ್ಶನಗಳ ಉದ್ದಕ್ಕೂ ಪಾಹ್ವಾ ತನ್ನ ತಂದೆಯ ವಿಷಯದಲ್ಲಿ ತೀವ್ರ ಆಕ್ರೋಶವನ್ನೆ ತೋರುತ್ತಿದ್ದ. ತಂದೆ - ಮಲತಾಯಿಯರ ಈ ಉಪಟಳ ತಾಳಲಾಗದೆ ಪಾಹ್ವಾ ಕೊನೆಗೆ ಮನೆಬಿಟ್ಟು ಓಡಿಬಂದು, ಕೆಲಸದ ಬೇಟೆಯಲ್ಲಿ ತೊಡಗಿದ. ಮೊದಲು ಬ್ರಿಟಿಷ್ ಇಂಡಿಯಾದ ನೌಕಾಪಡೆಯನ್ನು ಸೇರಲೆತ್ನಿಸಿ ವಿಫಲನಾದ, ಆದರೆ ಮುಂದೆ ಕೆಲವು ದಿನಗಳಲ್ಲೆ ಬ್ರಿಟಿಷ್ ಇಂಡಿಯಾದ ಸೇನಾಪಡೆಯಲ್ಲಿ ಉದ್ಯೋಗವೊಂದನ್ನು ಪಡೆದುಕೊಂಡ. ಸೇನೆಯಲ್ಲಿ ಟೆಲಿಗ್ರಫಿಯಲ್ಲಿ ವಿಶೇಷ ತರಬೇತಿ ಹೊಂದಿ ಲಾಹೋರ್‌ನಲ್ಲಿ ಸೇವೆ ಸಲ್ಲಿಸಿದ ಆತ ಮುಂದೆ ತನ್ನ ಇಪ್ಪತ್ತನೆ ವಯಸ್ಸಿನ ವೇಳೆಗೆ ಸೇವೆಯಿಂದ ನಿವೃತ್ತನಾದ. (ಅದು ಎರಡನೆ ಮಹಾಯುದ್ಧದ ಕಾಲವಾಗಿತ್ತು; ಆಗ ರಕ್ಷಣಾ ಪಡೆಗಳಲ್ಲಿ ಕಿರು ಅವಧಿಯ ನೇಮಕಾತಿಗಳನ್ನು ನೀಡುವುದು ಸರ್ವಸಾಮಾನ್ಯ ವಾಗಿತ್ತು.) ಇದಾದಮೇಲೆ ಪಾಹ್ವಾನಿಗೆ ಕಾಲೇಜು ವ್ಯಾಸಂಗ ಮಾಡಬೇಕೆಂಬ ಆಸೆಯಿತ್ತಂತೆ, ಆದರೆ ಅದೇ ವೇಳೆಗೆ ಘಟಿಸಿದ ದೇಶವಿಭಜನೆ ಅದಕ್ಕೆ ಅವಕಾಶ ಕೊಡಲಿಲ್ಲ. ಪಾಹ್ವಾ ಬೇರೆ ನೆಲೆ ಕಂಡುಕೊಳ್ಳುವುದು ಅನಿವಾರ್ಯವಾಯಿತು. ಪಾಕಿಸ್ತಾನದ ಭಾಗದಿಂದ ಭಾರತಕ್ಕೆ ವಲಸೆ ಬರುವ ದಾರಿಯುದ್ದಕ್ಕೂ ಕಂಡ ಭೀಕರ ಹಿಂಸೆ ಆತನ ಹೃದಯವನ್ನು

ಕಠಿಣಗೊಳಿಸಿತು, ದೇಶವಿಭಜನೆಯ ಬಗ್ಗೆ ಹಾಗೂ ಮುಸ್ಲಿಮರ ಬಗ್ಗೆ ಆತನಲ್ಲಿ ಅಪಾರ ಕ್ರೋಧವನ್ನು ತುಂಬಿತು. ಭಾರತವನ್ನು ತಲುಪಿದ ಅನಂತರ ಆತ ಕೆಲವು ದಿನ ಗೊತ್ತುಗುರಿಯಿಲ್ಲದೆ ಅಲೆದಾಡಿಕೊಂಡಿದ್ದ, ಆಮೇಲೆ ಉಗ್ರ ಹಿಂದೂ ಸಂಘಟನೆಗಳಿಗೆ ಸೇರಿಕೊಂಡು ಮುಸ್ಲಿಮರ ವಿರುದ್ಧ ನಡೆಯುತ್ತಿದ್ದ ಕೋಮುಗಲಭೆಗಳಲ್ಲಿ ಭಾಗಿಯಾಗತೊಡಗಿದ. ಆಗ ಆತ ಕಾರ್ಯಾಚರಣೆ ನಡೆಸಿದ್ದು ಮುಖ್ಯವಾಗಿ ಮೂರು ನಗರಗಳಲ್ಲಿ – ಗ್ವಾಲಿಯರ್, ಮುಂಬಯಿ ಹಾಗೂ ಹೈದರಾಬಾದ್‌ಗಳಲ್ಲಿ – ಆಗಿತ್ತು. ಈ ಮೂರು ಊರುಗಳಲ್ಲಿ ಆತ ಮನೆಯಲ್ಲಿ ತಯಾರಿಸಿದ ಪಿಸ್ತೂಲುಗಳನ್ನೂ ಮದ್ದುಗುಂಡು ಕೈಬಾಂಬುಗಳನ್ನೂ ಗಲಭೆಕೋರರಿಗೆ ಸರಬರಾಜು ಮಾಡಿದ. ಹೈದರಾಬಾದಿನಲ್ಲಿ ಆತ ಗುಂಪುಗಟ್ಟಿಕೊಂಡು ಹೋಗಿ ಬೆದರಿಕೆ ಹಾಕಿ ಮುಸ್ಲಿಮರನ್ನು ಅವರ ಮನೆಗಳಿಂದ ಹೊರಗೋಡಿಸಿದ್ದ, ಅವರ ಆಸ್ತಿಪಾಸ್ತಿ ಯನ್ನು ಲೂಟಿಗೈದಿದ್ದ. ಹಾಗೆಯೆ ಹಲವೆಡೆ ಮುಸ್ಲಿಮರ ಸಾಮೂಹಿಕಹತ್ಯೆಯಲ್ಲಿ ಪಾಲುಗೊಂಡ. ಇದೆಲ್ಲದರ ನಡುವೆ, ಪ್ರಾಯಶ್ಚಿತ್ತದ ಒಂದು ಕ್ರಮವೋ ಎಂಬಂತೆ, ತಾನು ಹೀಗೆ ಒಟ್ಟುಮಾಡಿದ್ದ ಹಣದ ಒಂದಿಷ್ಟು ಭಾಗವನ್ನು ಹಿಂದೂ ಸಂಘಟನೆಗಳು ನಿರಾಶ್ರಿತರಿಗೆಂದು ನಡೆಸುತ್ತಿದ್ದ ಸಹಾಯ ಮತ್ತು ಪುನರ್ವಸತಿ ಕಾರ್ಯಗಳಿಗೆ ಆತ ದಾನವಾಗಿ ನೀಡುತ್ತಿದ್ದ. ಒಟ್ಟು ಇಪ್ಪತ್ತೂ ಚಿಲ್ಲರೆ ವಯಸ್ಸಿಗಾಗಲೆ ಆತ ನಿಪುಣ ಹಂತಕನಾಗಿಹೋಗಿದ್ದ, ನೂರಾರು ಅಲ್ಲದಿದ್ದಲ್ಲಿ ನಿಶ್ಚಿತವಾಗಿ ಹತ್ತೈವತ್ತರ ಸಂಖ್ಯೆಯಲ್ಲಿ ಆತ ಜನರನ್ನು ಕೊಂದಿದ್ದ.

ಈ ವೇಳೆಗೆ ಆತನಿಗೆ ಗಾಂಧಿಹತ್ಯೆಯ ಸಂಚು ಹೂಡುತ್ತಿದ್ದ ಪ್ರಮುಖರ ಪರಿಚಯ ಬೆಳೆಯಿತು; ಆತ ಅವರ ತಂಡ ಸೇರಿಕೊಂಡ. (ಮೊದಲೆ ಪ್ರಸ್ತಾಪಿಸಿದಂತೆ ವಿಧಿಯ ಆಟ ಬೇರೊಂದು ಬಗೆಯಲ್ಲಿ ನಡೆದಿದ್ದಲ್ಲಿ ಗಾಂಧಿ ಪಾಹ್ವಾನ ಕೈಯಲ್ಲೆ, ಇನ್ನೂ ಐದು ದಿನ ಮೊದಲೆ ಸಾವು ಕಾಣಬೇಕಿತ್ತು, ಆದರೆ ಹಾಗೆ ನಡೆಯಲಿಲ್ಲ.) ಪಾಹ್ವಾ ನೆನಪಿಸಿಕೊಂಡಂತೆ, ಆತನ ಮತ್ತು ನಾಥುರಾಮ್ ಗೋಡ್ಸೆಯ ನಡುವೆ ತುಂಬು ಆತ್ಮೀಯತೆ ಇತ್ತಂತೆ; ಆತ ಆ ಸಂಚುಗಾರರ ತಂಡದಲ್ಲೆ ಅತ್ಯಂತ ಎಳೆಯ ಸದಸ್ಯನಾಗಿದ್ದರಿಂದ ಗೋಡ್ಸೆಗೆ ಆತನ ಬಗ್ಗೆ ವಿಶೇಷವಾದ ಅಭಿಮಾನ ಮತ್ತು ಪ್ರೀತಿಗಳಿದ್ದವಂತೆ. ಗಾಂಧಿ ಹತ್ಯೆಯ ಅನಂತರದಲ್ಲಿ, ಗೋಡ್ಸೆ ಪಾಹ್ವಾನಿಗೆ, ನೀನು ನಿನ್ನ ಪಾಲಿನ ದೇಶಸೇವೆಯನ್ನು ಮಾಡಿಯಾಯಿತು, ಸೆರೆಯಿಂದ ಬಿಡುಗಡೆಯಾದ ಮೇಲೆ ಎಲ್ಲರಂತೆ ಜೀವನ ನಡೆಸು, ಇನ್ನು ನಿನಗೆ ರಾಜಕಾರಣ ಸಾಕು ಎಂದು ಸಲಹೆ ನೀಡಿದ್ದನಂತೆ. (ಅಂದರೆ ಗೋಡ್ಸೆಗೆ ಜನರ ಹತ್ಯೆಗೈಯುವುದೂ ರಾಜಕೀಯ ಕ್ರಿಯೆಯಾಗಿತ್ತು, ರಾಜಕಾರಣದ ಬಗ್ಗೆ ಆತನ ಪರಿಕಲ್ಪನೆ ಹಾಗಿತ್ತು.) ಈ ಭಾವಸಂಬಂಧವನ್ನು ಆಧರಿಸಿಯೆ ಮುಂದೆ ಗೋಪಾಲ್ ಗೋಡ್ಸೆ ಪಾಹ್ವಾನಿಗೆ



ಜೋಡಿಯೊಂದನ್ನು ಹುಡುಕಿದ್ದು, ಪಶ್ಚಿಮ ಪಂಜಾಬ್ ಮೂಲದ ಆತನಿಗೆ ಮಹಾರಾಷ್ಟ್ರದ ಹೆಣ್ಣೊಂದನ್ನು ಗೊತ್ತುಮಾಡಿಕೊಟ್ಟದ್ದು.

ನಮ್ಮ ಸಂದರ್ಶನಸರಣಿಯ ಯಾವ ಹಂತದಲ್ಲೂ ಪಾಹ್ವಾ ತಾನು ಕೋಮುಗಲಭೆಗಳಲ್ಲಿ ಜನರನ್ನು ಕೊಂದದ್ದರ ಬಗೆಗಾಗಲಿ, ಗಾಂಧಿಹತ್ಯೆಯಲ್ಲಿ ಭಾಗಿಯಾದದ್ದರ ಬಗೆಗಾಗಲಿ ಕಿಂಚಿತ್ ವಿಷಾದವನ್ನೂ ಲವಲೇಶದ ದ್ವಂದ್ವ ಭಾವವನ್ನೂ ತೋರಲಿಲ್ಲ. ಬದಲಿಗೆ ಆತ ಆ ಘಟನಾವಳಿಗಳು ನಡೆದು ಕೆಲವು ದಶಕಗಳ ಅನಂತರವೆ ನೀಡುತ್ತಿದ್ದ ಈ ಸಂದರ್ಶನದಲ್ಲೂ ಕೂಡ ತನ್ನ ಅಂದಿನ ಕೃತ್ಯಗಳನ್ನು ಬಲವಾಗಿಯೆ ಸಮರ್ಥಿಸಿಕೊಂಡ. ಒಮ್ಮೆ ಆತ ಅತೀವ ಹೆಮ್ಮೆಯಿಂದ ಹೇಳಿಕೊಂಡ: ಗಾಂಧಿಹತ್ಯೆಯ ಆತನ ಯತ್ನ ವಿಫಲವಾಗುತ್ತಿದ್ದಂತೆಯೆ ಪೋಲಿಸರು ಆತನನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸತೊಡಗಿದ್ದರು. ಅವರು ಆತನನ್ನು ಪ್ರಶ್ನಿಸುತ್ತಿದ್ದ ವೇಳೆಯಲ್ಲಿಯೆ ಗಾಂಧಿ ಹತ್ಯೆಯಾದ ಸುದ್ದಿ ಬಂದಿತು. ಆಗ ಪೋಲಿಸರು ತೀವ್ರ ಕೋಪದಲ್ಲಿ ಆತನಿಗೆ, ನೀವು ಕೊನೆಗೂ ಆತನನ್ನು ಹೊಡೆದುಬಿಟ್ಟಿರಿ ಎಂದು ಹೇಳಿದರಂತೆ. ಅದಕ್ಕೆ ಆತ ಸುಮಾರು ಈ ಅರ್ಥದ ಮಾತಿನೊಂದಿಗೆ ಉತ್ತರಿಸಿದನಂತೆ – ಆ ದರಿದ್ರದವ ಸತ್ತದ್ದು ಒಳ್ಳೆಯದೆ ಆಯಿತು, ಇದು ನಮ್ಮ ಹಾಗೂ ನಮ್ಮ ದೇಶದ ಸೌಭಾಗ್ಯವೆ ಹೌದು.

ಇಲ್ಲಿ, ಪಾಹ್ವಾನ ಕಥೆಗೆ ಸಂಬಂಧಿಸಿದ ಸಣ್ಣದೊಂದು ಉಪಕಥೆಯನ್ನೂ ನಿಮ್ಮೊಡನೆ ಹಂಚಿಕೊಳ್ಳಬೇಕು. ಆತನೊಂದಿಗಿನ ನಮ್ಮ ಒಟ್ಟೂ ಸಂದರ್ಶನಗಳಲ್ಲಿ ಮೊದಲ ಕೆಲವು ಸುತ್ತುಗಳನ್ನು ನಾನೇ ನಡೆಸಿದ್ದೆ. ಆದರೆ ಆಮೇಲೆ ಕೆಲವು ಅಡೆತಡೆಗಳು ಎದುರಾದವು. ಒಂದೆಡೆ, ಮೂತ್ರಕೋಶವೈಫಲ್ಯದಿಂದ ನರಳುತ್ತಿದ್ದ ಪಾಹ್ವಾ ಡಯಲಿಸಿಸ್ ಮಾಡಿಸಿಕೊಳ್ಳಲು ವಾರಕ್ಕೆರಡು ಬಾರಿ ಆಸ್ಪತ್ರೆಗೆ ದಾಖಲಾಗ ಬೇಕಿತ್ತು; ಅದರ ನಡುವೆ ಆತ ಯಾವಾಗ ಆರಾಮವಾಗಿ ಕೂತು ಮಾತನಾಡುವ ಸ್ಥಿತಿಯಲ್ಲಿರುತ್ತಾನೆ ಎಂಬುದನ್ನು ಊಹಿಸಲು ಸಾಧ್ಯವಾಗುತ್ತಿರಲಿಲ್ಲ. ಇನ್ನೊಂದೆಡೆ, ಆತ ಮುಂಬಯಿಯಲ್ಲಿ ವಾಸವಾಗಿದ್ದರೆ ನಾನು ದಿಲ್ಲಿಯಲ್ಲಿದ್ದು ಆಯೆರಡು ದೂರದ ಊರುಗಳ ನಡುವೆ ಪದೇಪದೆ ಪ್ರಯಾಣಿಸುವುದು ನನಗೆ ಪ್ರಯಾಸದ ಮಾತಾಗಿತ್ತು. ಎಷ್ಟೋ ಸಲ, ನಾನು ದಿಲ್ಲಿಯಿಂದಲೆ ಫೋನ್ ಮೂಲಕ ಪಾಹ್ವಾನನ್ನು ಸಂಪರ್ಕಿಸಿ, ಆತನ ಆರೋಗ್ಯದ ಬಗ್ಗೆ ವಿಚಾರಿಸಿ, ಮುಂದಿನ ಕೆಲವುದಿನ ಸಂದರ್ಶನ ನಡೆಸಬಹು ದೆಂದು ಆತನೆ ಖಾತರಿ ಮಾಡಿದ ಮೇಲಷ್ಟೆ ಹೊರಟು ಮುಂಬಯಿಗೆ ಬಂದಿಳಿಯು ತ್ತಿದ್ದಂತೆಯೆ ಏಕಾಏಕಿ ಆತನ ದೇಹಸ್ಥಿತಿ ವಿಷಮಿಸುತ್ತಿತ್ತು, ನನ್ನ ಅಷ್ಟೂ ಸಮಯ - ಹಣ - ಶ್ರಮಗಳು ವ್ಯರ್ಥವಾಗುತ್ತಿದ್ದವು. ಇಷ್ಟಾಗಿಯೂ ಆತ, ಇಲ್ಲ, ನೀವು ಇನ್ನೊಂದು

ಆರು ತಿಂಗಳು ಬಿಟ್ಟು ಬನ್ನಿ, ನಾನಾಗ ಸಂಪೂರ್ಣ ಚೇತರಿಸಿ ಕೊಂಡಿರುತ್ತೇನೆ, ನಿಮ್ಮೊಂದಿಗೆ ಕುಳಿತು ಮಾತನಾಡುತ್ತೇನೆ ಎನ್ನುತ್ತಿದ್ದ. ಅದಾಗಲೇ ಎಂಬತ್ತರ ಹತ್ತಿರ ವಯಸ್ಸಾಗಿದ್ದರೂ, ಅದಾಗಲೇ ಅರೆಜೀವವಾಗಿದ್ದರೂ ಆತ ತಾನು ಅಜರಾಮರನೋ ಎಂಬಂತೆ ಸಂದರ್ಶನದ ಮುಂದಿನ ಸುತ್ತುಗಳ ಕುರಿತು ಭರವಸೆ ನೀಡುತ್ತಿದ್ದ. ನಡುನಡುವೆ, ನನಗೊಂದಿಷ್ಟು ಒಳ್ಳೆಯ ಟಾನಿಕ್ಕುಗಳ ಹೆಸರು ತಿಳಿಸುತ್ತೀರಾ ಎಂದೂ ಕೇಳುತ್ತಿದ್ದ. ನಾನು ಕೆಲವೊಮ್ಮೆ ಉದ್ದೇಶಪೂರ್ವಕವಾಗಿ ಆತನನ್ನು ತಪ್ಪಿಸಿ ಆತನ ಪತ್ನಿಯೊಂದಿಗೆ ನಡೆಸಿದ್ದ ಟೆಲಿಫೋನ್ ಸಂಭಾಷಣೆಯಲ್ಲಿ ಆಕೆ ನನಗೆ ಕೊಟ್ಟಿದ್ದ ಆತನ ರೋಗಲಕ್ಷಣಗಳ ಬಗೆಗಿನ ಮಾಹಿತಿಯಿಂದ ಆತ ಇನ್ನು ಹೆಚ್ಚು ದಿನ ಬದುಕಿರಲಾರ, ಬದುಕಿದ್ದಷ್ಟು ದಿನ ಡಯಲಿಸಿಸ್‌ನಿಂದ ಮುಕ್ತಿ ಪಡೆಯಲಾರ ಎಂಬುದು ಸ್ಪಷ್ಟವಾಗತೊಡಗಿತ್ತು. ಹಾಗಾಗಿ ನಾನು ಆಗ ಮುಂಬಯಿಯಲ್ಲಿದ್ದ ನನ್ನ ಪತ್ರಕರ್ತೆ - ಸ್ನೇಹಿತೆ ರಜನಿ ಬಕ್ಷಿಯವರನ್ನು ನನ್ನ ಪರವಾಗಿ ಪಾಹ್ವಾನ ಸಂಪರ್ಕದಲ್ಲಿರುವಂತೆಯೂ, ಆ ನಮ್ಮ ಸಂದರ್ಶನಸರಣಿಯನ್ನು ಮುಂದುವರಿಸು ವಂತೆಯೂ ಕೋರಿಕೊಂಡೆ. ಮುಂಬಯಿವಾಸಿಯಾಗಿದ್ದ ಆಕೆಗೆ ಹೆಚ್ಚು ವ್ಯರ್ಥ ಶ್ರಮವಿಲ್ಲದೆ ಆತನ ಸಂದರ್ಶನ ನಡೆಸುವುದು ಸಾಧ್ಯವಿತ್ತು.

ಈ ಬದಲಿ ವ್ಯವಸ್ಥೆ ಮೊದಮೊದಲು ಯಶಸ್ವಿಯಾದಂತೆ ತೋರಿದರೂ ಕೆಲವು ದಿನಗಳ ಅನಂತರ ಅದರಲ್ಲಿಯೂ ಅಡಚಣೆಗಳು ತಲೆದೋರಿದವು. ಅವುಗಳಲ್ಲಿ ಅತಿಮುಖ್ಯವಾದ ಅಡಚಣೆಯೆಂದರೆ ರಜನಿ ಬಕ್ಷಿ ನನ್ನಂತೆ ಬರಿದೆ ಮನೋವಿಶ್ಲೇಷಕ ರಾಗಿರದೆ ಆಳಶ್ರದ್ಧೆಯ ಗಾಂಧಿವಾದಿಯಾಗಿದ್ದರು, ಸಾಮಾಜಿಕ - ರಾಜಕೀಯ ಕಾರ್ಯಕರ್ತೆಯಾಗಿದ್ದರು. ಪಾಹ್ವಾ ಕೋಮುಗಲಭೆಗಳಲ್ಲಿ ತಾನು ಮುಸ್ಲಿಮರನ್ನು ಕೊಂದದ್ದರ ಕುರಿತು, ಗಾಂಧಿಹತ್ಯೆಯ ಸಂಚಿನಲ್ಲಿ ಭಾಗಿಯಾಗಿದ್ದರ ಕುರಿತು ಬೀಗುಮಾತುಗಳನ್ನು ಆಡುತ್ತಿದ್ದಂತೆಯೆ ಬಕ್ಷಿಯವರಿಗೆ ಅಸಹನೀಯ ಕಿರಿಕಿರಿಯಾಗ ಲಾರಂಭಿಸಿತು. ಕೊನೆಗೆ ಆತ ಬಹುಹೆಮ್ಮೆಯಿಂದ ಹೇಳಿಕೊಂಡ ಒಂದು ಪ್ರಸಂಗ ಆಕೆಯಲ್ಲಿ ಆತನ ಕುರಿತು ಅತೀವ ಹೇಸಿಗೆ ಮೂಡಿಸಿತು. ಒಮ್ಮೆ, ಪಾಹ್ವಾ ಹೈದರಾಬಾದಿನಲ್ಲಿದ್ದಾಗ ಪರ್ಚುರೆ ಎಂಬ ಹೆಸರಿನ ಗಾಂಧಿಹತ್ಯೆಯ ಮತ್ತೊಬ್ಬ ಸಂಚುಗಾರ ಪಾಹ್ವಾನ ಪೌರುಷವನ್ನು ಪರೀಕ್ಷಿಸುವ ಧಾಟಿಯಲ್ಲಿ, ಜೀವಂತ ಜನರಾಶಿಯ ಮೇಲೆ ಬಾಂಬೊಂದನ್ನು ಪ್ರಯೋಗಿಸುವ ಛಾತಿ ನಿನಗಿದೆಯೋ ಎಂದು ಸವಾಲು ಹಾಕಿದ್ದನಂತೆ. ಅದನ್ನು ಸ್ವೀಕರಿಸಿದ ಪಾಹ್ವಾ ಹೈದರಾಬಾದಿನ ಸಿನೆಮಾ ಮಂದಿರವೊಂದರಲ್ಲಿ ಪ್ರದರ್ಶನ ಪ್ರಾರಂಭವಾಗುವ ತುಸು ಮೊದಲು ಒಂದು ಬಾಂಬನ್ನು ಅಡಗಿಸಿಟ್ಟು ಹೊರಕ್ಕೋಡಿ ಬಂದಿದ್ದನಂತೆ; ಅನಂತರ ಘಟಿಸಿದ



ಸ್ಫೋಟದಲ್ಲಿ ಹತ್ತೋ ಹನ್ನೆರಡೋ ಜನ ಪ್ರಾಣ ಕಳೆದುಕೊಂಡಿದ್ದರಂತೆ. ಈ ವಿವರಗಳನ್ನು ಕೇಳುತ್ತಿದ್ದಂತೆಯೆ ಕನಲಿ ರಜನಿ ಬಕ್ಷಿ ಆತನನ್ನು ಆ ಬಲಿಯಾದವರಲ್ಲಿ ಮುಸ್ಲಿಮರು ಎಷ್ಟಿದ್ದರು, ಹಿಂದೂಗಳು ಎಷ್ಟಿದ್ದರು, ನಿನಗೆ ಗೊತ್ತೋ ಎಂದು ಕೇಳಿದರು. ಅದಕ್ಕಾತ, ನನಗೆ ತಿಳಿದಿಲ್ಲ, ತಿಳಿಯಬೇಕೆಂಬ ಅಪೇಕ್ಷೆಯೂ ಇಲ್ಲ ಎಂದು ಉತ್ತರಿಸಿದ. ಅದಕ್ಕೆ ಬಕ್ಷಿ, ಅಲ್ಲ, ನೀನಲ್ಲಿ ಅನೇಕ ಹಿಂದೂಗಳ ಸಾವಿಗೂ ಕಾರಣನಾಗಿರಬಹುದಲ್ಲ; ಗಾಂಧಿ ಮತ್ತು ಮುಸ್ಲಿಮರ ಕುರಿತಾದ ನಿನ್ನ ದ್ವೇಷಭಾವ ವನ್ನು ನಾನು ಒಪ್ಪದಿದ್ದರೂ ಕನಿಷ್ಠಪಕ್ಷ ಅರ್ಥಮಾಡಿಕೊಳ್ಳಬಲ್ಲೆ; ದೇಶಕ್ಕೆ ಸ್ವಾತಂತ್ರ್ಯ ಲಭಿಸುವ ಆ ಘಳಿಗೆಯಲ್ಲಿ ಮುಸ್ಲಿಮರ ಹಾಗೂ ಗಾಂಧಿಯ ವರ್ತನೆ ಹಿಂದೂಗಳಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಕಂಡುಬಂತು ಎನ್ನುವ ಐತಿಹಾಸಿಕ ತಿಳುವಳಿಕೆಯ ಹಿನ್ನೆಲೆಯಲ್ಲಿ ನಿನ್ನ ಕ್ರುದ್ಧ ಕೃತ್ಯಗಳಲ್ಲಿ ಕೆಲವನ್ನಾದರೂ ನಿರ್ಲಿಪ್ತವಾಗಿ ನೋಡಬಲ್ಲೆ; ಆದರೆ ಆ ಸಿನೆಮಾಮಂದಿರದಲ್ಲಿ ನೀನು ಅಡಗಿಸಿಟ್ಟ ಬಾಂಬಿನಿಂದ ಸಾವಿಗೀಡಾದವರಲ್ಲಿ ಕೆಲವರು ಮುಸ್ಲಿಮರಾಗಿದ್ದಂತೆಯೆ ಇನ್ನು ಕೆಲವರು ಹಿಂದೂಗಳೂ ಆಗಿದ್ದಿರಬಹುದೆಂಬುದು, ಸಿನೆಮಾದ ಸಂತಸ ಪಡೆಯಲು ಬಂದ ಆ ಮುಗ್ಧ ಹಿಂದೂಗಳು ನೀನಿಟ್ಟ ಬಾಂಬಿನ ಸ್ಫೋಟಕ್ಕೆ ಸಿಡಿದು ಛಿದ್ರವಾಗಿಹೋದ ರೆಂಬುದು ನಿನ್ನಲ್ಲಿ ಸಂಕಟ ಉಂಟುಮಾಡುವುದಿಲ್ಲವೋ ಎಂದು ಕೇಳಿದರು. ಈ ಪ್ರಶ್ನೆಗೆ ಪಾಹ್ವಾ ನೀಡಿದ ಉತ್ತರ ಅತಿತ್ವರಿತವೂ ಅತಿಸರಳವೂ ಆಗಿತ್ತು. ಆತ ಹೇಳಿದ: ಮುಸ್ಲಿಮರೋ ಹಿಂದೂಗಳೋ, ಭೇದವೇನುಂಟು? ಸಿನೆಮಾ ನೋಡುವವರೆಲ್ಲ ಬದ್ಮಾಷರೆ ಹೌದು.

ಇಲ್ಲಿಗೆ ನನ್ನ ಸನ್ಮಿತ್ರೆ ರಜನಿ ಬಕ್ಷಿಯ ತಾಳ್ಮೆಯ ಕಟ್ಟೆಯೊಡೆದುಹೋಯಿತು. ಆಕೆ ನನಗೊಂದು ಪತ್ರ ಬರೆದು, ನಾನು ಬೇಕೆಂದೆ ಆಕೆಯ ಸಹನಶಕ್ತಿಯನ್ನು ಒರೆಗೆ ಹಚ್ಚಲೆಂದೆ ಇಂಥ ಒಬ್ಬ ದುರುಳನ ಸಂದರ್ಶನಕ್ಕೆ ಹಾಗೂ ಇಂಥ ಖೂಳಕೃತ್ಯಗಳ ವಿವರಗಳನ್ನು ಆಲಿಸುವುದಕ್ಕೆ ಕಳಿಸಿದ್ದೆನೆಂದು ತನಗೀಗ ತಿಳಿಯಿತೆಂದೂ, ಪಾಹ್ವಾನೊಂದಿಗಿನ ಸಂದರ್ಶನವನ್ನು ಮುಂದುವರೆಸುವಲ್ಲಿ ತನಗಿನ್ನು ಯಾವುದೆ ಬಗೆಯ ಆಸಕ್ತಿ ಇಲ್ಲವೆಂದೂ ಹೇಳಿದಳು. ಆಕೆಯ ನಿಷ್ಠುರ ಆದರೆ ನೇರ ಮಾತುಗಳ ಪತ್ರವನ್ನು ಓದಿದ ಮೇಲೆ ಆಕೆಯನ್ನು ಇನ್ಯಾವ ರೀತಿಯಲ್ಲೂ ಒತ್ತಾಯಿಸಲಾಗದೆ ನಾನೂ ಆ ವಿಷಯವನ್ನು ಅಲ್ಲಿಗೆಯೆ ಕೈಬಿಟ್ಟೆ.

ಆದರೂ ನನಗಿಂದೂ ಅನಿಸುತ್ತದೆ – ರಜನಿ ಬಕ್ಷಿ ಇನ್ನೊಂದಿಷ್ಟು ಸಹನೆಯನ್ನು ತೋರಿದ್ದರೆ ಚೆನ್ನಿತ್ತು, ತನ್ನೆಲ್ಲ ವೈಯಕ್ತಿಕ ನಿಷ್ಠಾನಿಷ್ಠೆಯನ್ನು ತುಸು ಬದಿಗಿಟ್ಟು ಪಾಹ್ವಾನೊಂದಿಗೆ ಇನ್ನೊಂದಿಷ್ಟು ಮಾತುಕತೆ ನಡೆಸಿದ್ದರೆ ಒಳ್ಳೆಯದಿತ್ತು. ಆಕೆ ಓರ್ವ

ಗಾಂಧಿವಾದಿಯೂ ಮಾನವಹಕ್ಕುಗಳ ಕಾರ್ಯಕರ್ತೆಯೂ ಆಗಿದ್ದಳೆಂಬ ಅರಿವೇ ಪಾಹ್ವಾ ಆಕೆಯೊಡನೆ ನಡೆಸಿದ ಸಂವಾದಕ್ಕೆ ಬೇರೊಂದು ಬಗೆಯ ಆಯಾಮವನ್ನು ತಂದೀಯಬಲ್ಲುದಾಗಿತ್ತು. ಆಕೆಗೂ ತಾನು ನಂಬಿಕೊಂಡಿದ್ದ ತತ್ತ್ವಗಳನ್ನೆಲ್ಲ ತಿರುವುಮುರುವಾಗಿ ಕಂಡಿದ್ದ ಪ್ರತಿದ್ವಂದ್ವಿಯೋರ್ವನ ಪರಿಚಯವಾಗಬಹುದಿತ್ತು. ಏಕೆಂದರೆ, ಬಕ್ಷಿ ನಡೆಸಿದ ಸಂದರ್ಶನದ ಕೊನೆಯ ಸುತ್ತುಗಳಲ್ಲಿ ನನಗೆ ಕಂಡುಬಂದಂತೆ, ಪಾಹ್ವಾ ತನ್ನ ಹತ್ಯಾಕೃತ್ಯಗಳ ಇಡಿಯ ತರ್ಕವನ್ನು ಮೊದಲಿಗಿಂತ ತದ್ವಿರುದ್ಧವಾದ ಬಗೆಯಲ್ಲಿ ಮಂಡಿಸತೊಡಗಿದ್ದ; ಆತ ಯಾರ ಹತ್ಯೆಯಲ್ಲಿ ಭಾಗಿಯಾಗಿದ್ದನೋ ಆ ಗಾಂಧಿಯ ತಾತ್ವಿಕ ಪರಿಭಾಷೆಯಲ್ಲಿಯೆ ತನ್ನ ವಾದವನ್ನು ಪ್ರಸ್ತುತಪಡಿಸಲಾರಂಭಿಸಿದ್ದ. ಆತನ ಈ ವಿಲಕ್ಷಣ ತರ್ಕವಿಧಾನಪಲ್ಲಟಕ್ಕೊಂದು ಉದಾಹರಣೆ ನೀಡಬೇಕೆಂದರೆ, ನಾನಾಗ ಮಾನವತಾವಾದಿಯಾಗಿರಲಿಲ್ಲ, ಈಗ ಆಗಿದ್ದೇನೆ, ನಾನಾಗ ಮಾಡಿದ ಕೃತ್ಯಗಳನ್ನು ಈಗ ಮಾನವತಾವಾದದ ನೆಲೆಯಲ್ಲೆ ಸಮರ್ಥಿಸಿಕೊಳ್ಳ ಬಯಸುತ್ತೇನೆ ಎಂದೂ ಆತ ಒಂದೆಡೆ ನುಡಿದಿದ್ದ. ಸಂದರ್ಶನಗಳನ್ನು ಮುಂದುವರಿಸಲು ಸಾಧ್ಯವಾಗಿದ್ದಲ್ಲಿ ಈ ರೀತಿಯ ಪಲ್ಲಟಗಳು ಇನ್ನಷ್ಟು ಕಂಡುಬರುವುದೂ ಸಾಧ್ಯವಿತ್ತೇನೊ.

ಆದರೂ ಇಷ್ಟರಲ್ಲಿಯೆ, ನಾನು ಮತ್ತು ರಜನಿ ಬಕ್ಷಿ ಪಾಹ್ವಾನೊಂದಿಗೆ ಆವರೆಗೆ ನಡೆಸಿದ್ದ ಸಂದರ್ಶನಗಳಲ್ಲಿಯೆ ಆತನ ವ್ಯಕ್ತಿತ್ವದ ಕೆಲವು ಮುಖಗಳು ಅತಿನಿಚ್ಚಳವಾಗಿ ಗೋಚರಿಸಿದ್ದವು. ಮೊದಲನೆಯದಾಗಿ, ಭೌತಿಕವಾಗಿ ಆತ ಆಗ ಇಪ್ಪತ್ತೊಂದನೆಯ ಶತಮಾನದಲ್ಲಿ ಬಾಳಿಕೊಂಡಿದ್ದರೂ ಭಾವನಾತ್ಮಕವಾಗಿ ಆತ ಆ ೧೯೪೦ರ ದಶಕದಿಂದ ಇನ್ನೂ ಹೊರಬಂದಿರಲಿಲ್ಲ. ಸುತ್ತಮುತ್ತಲ ವಾಸ್ತವದ ಪರಿವೆಯೆ ಇಲ್ಲವೇನೋ, ಕಾಲ ಚಲಿಸಿದ್ದು ಹಾಗೂ ಲೋಕ ಬದಲಾದದ್ದರ ಅರಿವೆ ಇಲ್ಲವೇನೋ ಎಂಬಷ್ಟು ಆಳವಾಗಿ ಆತನ ಮನಸ್ಸು ಐವತ್ತು - ಅರವತ್ತು ವರ್ಷಗಳಷ್ಟು ಹಳೆಯ ನೆನಪುಗಳಲ್ಲೆ ನೆಟ್ಟುನಿಂತಿತ್ತು. ಆತನ ಸ್ಮೃತಿ ಈಗಲೂ ಕೂಡ ಆ ಕಾಲಘಟ್ಟದ ಪ್ರಮುಖ ನಾಯಕರಾಗಿದ್ದ ಸಾವರ್ಕರ್, ಗಾಂಧಿ, ಜಿನ್ನಾ ಇತ್ಯಾದಿಯವರ ಸುತ್ತಲೇ ಗಿರಕಿ ಹೊಡೆದುಕೊಂಡಿತ್ತು.

ಎರಡನೆಯದಾಗಿ ಮತ್ತು ಇನ್ನೂ ಮುಖ್ಯವಾಗಿ, ಆತನ ಇಡೀ ಅಂತರಂಗ ಈಗಲೂ ಅದೇ ಗತಕಾಲದ ಇಬ್ಬರು ವ್ಯಕ್ತಿಗಳನ್ನು ತನ್ನ ತುಂಬ ತುಂಬಿಕೊಂಡಿತ್ತು. ಇವರಲ್ಲಿ ಮೊದಲನೆಯನು ನಾಥುರಾಮ್ ಗೋಡ್ಸೆ. (ಎರಡನೆಯಾತ ಯಾರೆಂದು ಮುಂದೆ ನೋಡೋಣ.) ಈ ಮೊದಲೆ ಪ್ರಸ್ತಾಪಿಸಿರುವಂತೆ ಪಾಹ್ವಾನಿಗೂ ಗೋಡ್ಸೆಗೂ ಪರಸ್ಪರ ತುಂಬ ಆತ್ಮೀಯತೆಯಿತ್ತು. ನಮ್ಮ ಸಂದರ್ಶನಗಳ ಉದ್ದಕ್ಕೂ ಪಾಹ್ವಾ



ನಿಮಿಷನಿಮಿಷಕ್ಕೂ ಗೋಡ್ಸೆಯನ್ನು ಜ್ಞಾಪಿಸಿಕೊಳ್ಳುತ್ತಿದ್ದ, ಆತ ಏನೋ ಹೇಳಿದ್ದನ್ನ ಏನೋ ಮಾಡಿದ್ದನ್ನ ಮತ್ತೆಮತ್ತೆ ಉಲ್ಲೇಖಿಸುತ್ತಿದ್ದ. ಇಲ್ಲಿ ನಮಗೆ ಕಂಡುಬಂದ ಮತ್ತೊಂದು ವೈಚಿತ್ರ್ಯವೆಂದರೆ, ಗಾಂಧಿಹತ್ಯೆಯ ಅಷ್ಟೂ ಸಂಚುಗಾರರ ಹೆಸರುಗಳಲ್ಲಿ ಪಾಹ್ವಾನಿಗೆ ನಾಥುರಾಮ್ ಗೋಡ್ಸೆಯ ಹೆಸರು ಒಂದೇ ಅದರ ಪೂರ್ಣರೂಪದಲ್ಲಿ ನೆನಪಿದ್ದುದು. ಬೇರೆಲ್ಲರ ಮಟ್ಟಿಗೆ ಆತನಿಗೆ ಒಮ್ಮೆ ಅವರ ವ್ಯಕ್ತಿನಾಮ ನೆನಪಾಗುತ್ತಿತ್ತು, ಇನ್ನೊಮ್ಮೆ ಅವರ ಕುಲನಾಮ ನೆನಪಾಗುತ್ತಿತ್ತು. ಆದರೆ ಅವೆರಡೂ ಸೇರಿ ಆಗುವ ಪೂರ್ಣನಾಮ ಮಾತ್ರ ಆತನಿಗೆ ನೆನಪಿಗೇ ಬರುತ್ತಿರಲಿಲ್ಲ. ಮತ್ತೆ ನೋಡಿದರೆ, ಆತ ಅವರೊಂದಿಗೆಲ್ಲ ಆಪ್ತವಾಗಿ ಒಡನಾಡಿದ್ದ; ವಿಚಾರಣೆಯ ಕಾಲದಲ್ಲಿ ಅವರೊಂದಿಗೆ ಒಂದೇ ನ್ಯಾಯಾಲಯದಲ್ಲಿ ಒಂದೇ ಬೆಂಚಿನ ಮೇಲೆ ಕುಳಿತು, ನಿತ್ಯ ಅವರ ಮುಖ ನೋಡುತ್ತ ನಿತ್ಯ ಅವರೊಂದಿಗೆ ಮಾತನಾಡುತ್ತ ಎರಡು ವರ್ಷ ಕಳೆದಿದ್ದ. ಮುಂದೆ ಶಿಕ್ಷೆಯಾದ ಮೇಲೆ ಅವರೊಂದಿಗೆಯೆ ಹದಿನೇಳು ವರ್ಷ ಜೈಲಿನಲ್ಲಿ ಸವೆಸಿದ್ದ. ಇಷ್ಟಾಗಿಯೂ ಅವರಲ್ಲಿ ಯಾರೊಬ್ಬರ ಪೂರ್ಣ ಹೆಸರೂ ಆತನಿಗೆ ನೆನಪಾಗುತ್ತಿರಲಿಲ್ಲ, ನಾಥುರಾಮ್ ಗೋಡ್ಸೆಯ ಹೆಸರೊಂದನ್ನು ಬಿಟ್ಟು. ಒಟ್ಟಿನಲ್ಲಿ ಗೋಡ್ಸೆಯಿಲ್ಲದೆ ಆತನ ಜೀವನವೇ ಅಪೂರ್ಣವೋ ಎಂಬಂತೆ ಆತನ ಮನಸ್ಸು ಗೋಡ್ಸೆಯೊಡನೆ ಅಭೇದ್ಯವಾಗಿ ಬೆಸೆದುಕೊಂಡಿತ್ತು.

ಗೋಡ್ಸೆಯಷ್ಟೆ ಗಾಢವಾಗಿ ಪಾಹ್ವಾನ ಮನಸ್ಸನ್ನು ಆವರಿಸಿದ್ದ ಇನ್ನೋರ್ವ ವ್ಯಕ್ತಿ ಮೋಹನದಾಸ್ ಕರಮಚಂದ್ ಗಾಂಧಿ. ಸಂದರ್ಶನಸರಣಿಯ ಉದ್ದಕ್ಕೂ ಪಾಹ್ವಾ ಗೋಡ್ಸೆಯನ್ನು ಸ್ಮರಿಸಿಕೊಂಡಷ್ಟೆ ಬಾರಿ ಗಾಂಧಿಯನ್ನೂ ಸ್ಮರಿಸಿಕೊಂಡ, ಮತ್ತು ಗೋಡ್ಸೆಯ ಹೊರತಾಗಿ ಗಾಂಧಿಯೊಬ್ಬರದಷ್ಟೆ ಪೂರ್ಣನಾಮ ಆತನಿಗೆ ನೆನಪಿದ್ದುದಾಗಿತ್ತು. ಆತ ಗಾಂಧಿಯನ್ನು ದ್ವೇಷಿಸಿದ್ದು, ಆತನ ಕೊಲೆಯಲ್ಲಿ ಪಾಲುಗೊಂಡಿದ್ದು ಎಲ್ಲವೂ ಹೌದಾಗಿತ್ತು, ಆದರೆ ಗೋಡ್ಸೆಯ ಜೊತೆಗಿದ್ದಂತೆಯೆ ಆತನಿಗೆ ಗಾಂಧಿಯೊಡನೆಯೂ ಭಾವಬಂಧನವೊಂದಿತ್ತು. ಗೋಡ್ಸೆಯೊಡನೆ ಇದ್ದುದು ಪ್ರೇಮಬಂಧನವಾಗಿದ್ದರೆ ಗಾಂಧಿಯೊಡನಿದ್ದುದು ದ್ವೇಷಬಂಧನವಾಗಿತ್ತು; ಅದು ಪ್ರೀತಿ-ವಿಶ್ವಾಸಗಳಿಗೆ ತದ್ವಿರುದ್ಧವಾದ ದ್ವೇಷಭಾವವನ್ನು ಆಧರಿಸಿಕೊಂಡಿದ್ದರೂ ಅದೂ ತನ್ನದೆ ಆದ ರೀತಿಯಲ್ಲಿ ಮೊದಲ ಬಂಧನದಷ್ಟೆ ಅಭೇದ್ಯವಾದ ಬಂಧನವೊಂದಾಗಿತ್ತು. ಪಾಹ್ವಾನ ಮನೋವಿನ್ಯಾಸವೆ ತೋರಿದಂತೆ, ಒಂದೆಡೆ ಗೋಡ್ಸೆಯಿಲ್ಲದೆ ಆತನ ಜೀವನ ಹೇಗೆ ಅಪೂರ್ಣವೆಂಬಂತಾಗುತಿತ್ತೋ ಇನ್ನೊಂದೆಡೆ ಗಾಂಧಿಯಿಲ್ಲದೆಯೂ ಅದು ಅಪೂರ್ಣವೆಂಬಂತಾಗುತಿತ್ತು. ಗಾಂಧಿಯಿಲ್ಲದೆಯೆ ಪಾಹ್ವಾನಿಗೆ ತನ್ನ ಅಸ್ತಿತ್ವವನ್ನು ಕಲ್ಪಿಸಿಕೊಳ್ಳುವುದೆ ಅಸಾಧ್ಯವೆಂಬಂತಿತ್ತು, ತನ್ನ

ಜೀವನಕ್ಕೊಂದು ಅರ್ಥವನ್ನು ಕೊಟ್ಟುಕೊಳ್ಳುವುದೆ ಅಶಕ್ಯವೆಂಬಂತಿತ್ತು. ಆತನ ಕೊನೆಯ ದಿನಗಳಲ್ಲೂ ಆತನಿಗೆ ಗಾಂಧಿಯಿಂದ ಹಾಗೂ ಗಾಂಧಿಸ್ಮೃತಿಯಿಂದ ಬಿಡುಗಡೆಯೆ ಇರಲಿಲ್ಲ. ೧೯೪೦ರ ಆ ದಶಕ – ಆತನ ವೈಯಕ್ತಿಕ ಜೀವನದ ಅತ್ಯಂತ ಮಹತ್ವದ ದಶಕ – ಕಳೆದು ಅದಾಗಲೆ ಐದಾರು ದಶಕಗಳಾಗಿದ್ದರೂ, ಭವಲೋಕದಲ್ಲಿ ಗಾಂಧಿ - ಗೋಡ್ಸೆಯರಿಬ್ಬರೂ ಅಳಿದುಹೋಗಿ ಅರ್ಧಶತಮಾನವೆ ಸರಿದು ಹೋಗಿದ್ದರೂ ಆತನ ಭಾವಲೋಕದಲ್ಲಿ ಮಾತ್ರ ಕಾಲಸ್ತಂಭನವಾಗಿದೆಯೋ ಎಂಬಂತೆ ಆ ಒಂದು ದಶಕ ಚಿರವಾಗಿ ಉಳಿದುಕೊಂಡಿತ್ತು, ಗಾಂಧಿ - ಗೋಡ್ಸೆಯರಿಬ್ಬರೂ ಅಮರರಾಗಿ ಸ್ಥಾಪಿತವಾಗಿದ್ದರು.

ಗಾಂಧಿಯ ಬಗ್ಗೆ ಪಾಹ್ವಾನಿಗಿದ್ದ ದ್ವೇಷದ ಒಳರಚನೆಯೂ ಇನ್ನೊಂದು ಸೋಜಿಗದ ಸಂಗತಿಯಾಗಿತ್ತು. ಆ ದ್ವೇಷ ಶುದ್ಧವೂ ಅಮಿಶ್ರಿತವೂ ಆದ ಭಾವವೇನಾಗಿರಲಿಲ್ಲ; ಅದರೊಳಗೆ ಗಾಂಧಿಯ ಬಗ್ಗೆ ಅಪಾರ ಗೌರವವೂ ಬೆರೆತುಕೊಂಡಿತ್ತು. ದ್ವೇಷ - ಗೌರವಗಳ ಈಯೆರಡು ಭಾವಧ್ರುವಗಳ ನಡುವೆ ತೂಗುತ್ತ ಪಾಹ್ವಾನ ಅಂತರಂಗ ಗಾಂಧಿಯ ವಿಷಯದಲ್ಲಿ ಸದಾ ತೊಳಲಾಡಿ ಕೊಂಡಿತ್ತು. ಉದಾಹರಣೆಗೆ ಆತನೆ ಹಲವೊಮ್ಮೆ, ಗಾಂಧಿ ನಿಜಕ್ಕೂ ಬಹಳ ದೊಡ್ಡ ನಾಯಕನಾಗಿದ್ದ ನೆಂದೂ, ಆತ ತನ್ನ ಪಕ್ಷಪಾತಿಬುದ್ಧಿಯನ್ನು ತುಸುವಷ್ಟೆ ಕಡಿಮೆ ಮಾಡಿಕೊಂಡಿದ್ದಲ್ಲಿ ಇನ್ನೂ ಎತ್ತರಕ್ಕೆ ಏರಬಹುದಿತ್ತೆಂದೂ ಹೇಳಿದ. ಮನೋ ವಿಜ್ಞಾನದ ವಿದ್ಯಾರ್ಥಿಯಾದ ನನಗೆ, ಆತ ತನ್ನ ತಂದೆಯನ್ನೂ ಗಾಂಧಿಯನ್ನೂ ಹೀಗೆ ಏಕರೀತಿಯ ಕಟುತನದಲ್ಲಿ ಟೀಕಿಸುತ್ತಿದ್ದುದರಲ್ಲಿ ಕೊನೆಗೊಂದು ಸಾಮ್ಯದ ಹೊಳಹು ಕಾಣತೊಡಗಿತು. ತನ್ನ ತಂದೆ ಎರಡನೆಯ ಹೆಂಡತಿಯ ಪಕ್ಷ ವಹಿಸಿ ತನಗೆ ಅನ್ಯಾಯ ಮಾಡಿದ, ಅದರಂತೆಯೆ ಗಾಂಧಿ ಮುಸ್ಲಿಮರ ಪಕ್ಷ ವಹಿಸಿ ತನ್ನಂತಹ ಹಿಂದೂಗಳನ್ನು ಸಂಕಷ್ಟಕ್ಕೀಡುಮಾಡಿದ ಎಂಬುದು ಆತನ ಸುಪ್ತಪ್ರಜ್ಞೆಯಲ್ಲಿ ಅಚಲವಾಗಿ ಕೂತಿದ್ದ ನಂಬಿಕೆಯಾಗಿದೆಯೋ ಎಂಬ ಅನುಮಾನಕ್ಕೆ ಇಂಬುಗೊಡುವಂತಿತ್ತು ಆತನ ಆ ವರ್ತನೆ.

ಪಾಹ್ವಾ ತನ್ನ ಆತ್ಮಕಥನದಲ್ಲಿ ತನ್ನ ‘ಸ್ವ’ವನ್ನು ನಿರ್ವಚಿಸಿಕೊಂಡದ್ದು ಬಹುಪಾಲು ಈರ್ವರು ಅನ್ಯರನ್ನು ಆಧರಿಸಿಕೊಂಡು; ತನ್ನತನವನ್ನು ನಿರೂಪಿಸಿ ಕೊಂಡದ್ದು ಒಂದರ್ಧ ಗೋಡ್ಸೆಯ ಆಪ್ತಮಿತ್ರನ ರೂಪದಲ್ಲಿ, ಇನ್ನೊಂದರ್ಧ ಗಾಂಧಿಯ ಕಡುಶತ್ರುವಿನ ರೂಪದಲ್ಲಿ. ಇದನ್ನೆ ತುಸು ತಿರುಗಿಸಿ ಮನೋವಿಶ್ಲೇಷಣೆಯ ಪರಿಭಾಷೆಯಲ್ಲಿ ಹೇಳುವುದಾದರೆ ಪಾಹ್ವಾನಿಗೆ ಗೋಡ್ಸೆ ಆತ್ಮೀಯಮಿತ್ರನಾಗಿದ್ದ, ಹಾಗೆಯೆ ಗಾಂಧಿ ಆತನ ಆತ್ಮೀಯಶತ್ರುವಾಗಿದ್ದರು.



ಇಲ್ಲಿ ನಾನು ಪಾಹ್ವಾನಲ್ಲಿ ನಾನು ಕಂಡ ಅಶಾಂತಚಿತ್ತದ ಲಕ್ಷಣಗಳನ್ನು ಮಾತ್ರ ಪ್ರಸ್ತಾಪಿಸುತ್ತಿದ್ದೇನೆ. ಇಂಥ ಮನೋಕ್ಷೋಭೆ ಬಹಳಷ್ಟು ಬಾರಿ ಮನೋದೈಹಿಕ ಅಸ್ವಸ್ಥತೆಯ ಲಕ್ಷಣಗಳಾಗಿಯೂ ರೂಪಾಂತರಗೊಳ್ಳುವುದುಂಟು. ಅಂಥವು ಅನೇಕವು ಪಾಹ್ವಾನಲ್ಲಿಯೂ ತೋರಿಬಂದವು. ಆದರೆ ಅವುಗಳ ಚರ್ಚೆ ಮತ್ತೊಂದೆ ದೀರ್ಘವಾದ ಪ್ರಸ್ತುತಿಯನ್ನು ಬೇಡುವುದರಿಂದ ನಾನಿಲ್ಲಿ ಆ ವಿಷಯಕ್ಕೆ ಹೋಗುತ್ತಿಲ್ಲ.

ಪಾಹ್ವಾ ಎಲ್ಲೂ ಕೂಡ ತಾನು ಗಾಂಧಿಯ ಹತ್ಯೆಯಲ್ಲಿ ಭಾಗಿಯಾದುದರ ಬಗ್ಗೆ ಪಶ್ಚಾತ್ತಾಪ ವ್ಯಕ್ತಪಡಿಸಲಿಲ್ಲ; ತಾನು ತಪ್ಪು ತಿಳುವಳಿಕೆಯಲ್ಲಿ ಆ ಕೃತ್ಯ ಮಾಡಿದೆನೇನೋ ಎಂಬ ಸಂದಿಗ್ಧಭಾವವನ್ನೂ ತೋರಲಿಲ್ಲ. (ಆದರೆ, ಆತ ಹಾಗೆ ಮಾಡಬೇಕಿತ್ತೆಂದು ನಾವು ಅಪೇಕ್ಷಿಸುವುದೂ ತುಸು ಅತಿಯಾಗುತ್ತದೆ. ಆತ ಇಪ್ಪತ್ತರ ವಯಸ್ಸಿನಲ್ಲಿ ಗೈದ ಆ ಕೃತ್ಯ ಮುಂದಿನ ಐವತ್ತು ವರ್ಷಗಳವರೆಗೂ, ಆತ ಎಪ್ಪತ್ತೂಚಿಲ್ಲರೆ ವರ್ಷಗಳ ವಯಸ್ಸನ್ನು ಮುಟ್ಟುವವರೆಗೂ, ಅದು ತನ್ನ ಪರಮಸಾಧನೆಯೆಂದೂ ತನ್ನ ಜೀವನಕ್ಕೊಂದು ಅರ್ಥವನ್ನು ತಂದುಕೊಟ್ಟ ಉತ್ತುಂಗಕೃತ್ಯವೆಂದೂ ಆತನಿಗೆ ಕಂಡಿತ್ತು. ಅದು ಆತನ ಆತ್ಮಗೌರವದ ಬುನಾದಿಯಾಗಿತ್ತು. ಈಗ ಅದೆಲ್ಲವೂ ತಪ್ಪೇನೋ, ತಾನು ಮಾಡಿದ್ದನ್ನು ಮಾನವಧರ್ಮ ಒಪ್ಪದೇನೋ ಎಂದು ತನ್ನನ್ನೆ ಕೇಳಿಕೊಂಡಿದ್ದಲ್ಲಿ ಮರುಕ್ಷಣಕ್ಕೆಯೆ ಆತ ಆವರೆಗಿನ ತನ್ನ ಇಡಿಯ ಜೀವನ ಅರ್ಥಹೀನ ಹಾಗೂ ಮೌಲ್ಯಹೀನವಾದುದೆಂಬ ಹೊಸ ಅರಿವಿನ ಮರ್ಮಾಘಾತವನ್ನು ಎದುರಿಸಬೇಕಿತ್ತು.) ಇಲ್ಲ, ಪಾಹ್ವಾ ಹಾಗೆ ಪಾಪನಿವೇದನೆಯಲ್ಲೇನೂ ತೊಡಗಲಿಲ್ಲ. ಆದರೆ ನಮ್ಮ ಸಂದರ್ಶನಗಳ ಅವಧಿಯಲ್ಲಿ ಆತ ತನ್ನ ಪರಿತಪ್ತಾತ್ಮಕಥನದ ಮೂಲಕ ತನಗೆ ಅರಿವಿಲ್ಲದಂತೆಯೆ ಅಂತಹ ಘಟ್ಟಕ್ಕೆ ತುಂಬ ಸಮೀಪ ಬಂದಿದ್ದ. ಇದಕ್ಕೊಂದು ಸೂಕ್ಷ್ಮ ಸುಳಿವನ್ನು ನೀಡುವುದಾದರೆ, ಆತ ಯಾರನ್ನು ಭವಲೋಕದಿಂದ ತೊಡೆದುಹಾಕಲು ಅಷ್ಟೆಲ್ಲ ಯತ್ನಿಸಿದ್ದನೋ ಅದೇ ಗಾಂಧಿಯನ್ನು ತನ್ನ ಭಾವಲೋಕದ ತುಂಬ ತುಂಬಿಕೊಂಡಿದ್ದ.

ನಾವು ಸಂದರ್ಶಿಸಿದ ಹಂತಕರಲ್ಲೆಲ್ಲ ಪಾಹ್ವಾನದು ಆತ್ಯಂತಿಕವಾದೊಂದು ಪ್ರಸಂಗವಾಗಿತ್ತು. ಬೇರೆ, ಕಡಿಮೆ ತೀವ್ರತೆಯ ಪ್ರಸಂಗಗಳೆಲ್ಲ ಖಂಡಖಂಡವಾಗಿ ತೋರಿಸಿಕೊಟ್ಟ ಸತ್ಯವೊಂದನ್ನು ಪಾಹ್ವಾನ ಪ್ರಸಂಗ ಸಮಗ್ರರೂಪದಲ್ಲಿ ಸ್ಥಾಪಿಸಿ ಕೊಟ್ಟಿತು. ಆ ಸತ್ಯ ಇದು: ಅತ್ಯಂತ ಬರ್ಬರರೂ ಆತ್ಮಸಾಕ್ಷಿಹೀನರೂ ಆಗಿ ತೋರುವಂತಹ ಹಂತಕರಲ್ಲಿ ಕೂಡಾ, ತಾವು ಗೈದ ಹತ್ಯಾಕೃತ್ಯದ ಕುರಿತಾಗಿ ಅವರ ಅಂತರಾತ್ಮದ ಮೂಲೆಯಲ್ಲೆಲ್ಲೊ ಅಭದ್ರತೆಯ ಭಾವವೊಂದು ಅಡಗಿ ಕುಳಿತಿರುತ್ತದೆ. ಬಹಿರಂಗದಲ್ಲಿ ಅವರ ತೋರಿಕೆ - ನಡವಳಿಕೆಗಳೇನೆ ಇರಲಿ, ಆ ಅಸೌಖ್ಯಭಾವ ವಿಲಕ್ಷಣ

ರೂಪಾಂತರಗಳ ಮೂಲಕ ಅವರ ಅಂತರಂಗವನ್ನು ಬಾಧಿಸುತ್ತಿರುತ್ತದೆ. ಮೊದಲು ತಮ್ಮ ಹೊರಜೀವನದಲ್ಲಿ ಬೇರೆಯವರನ್ನು ಹಿಂಸೆಗೆ ಈಡುಮಾಡಿದ ಆ ಹಂತಕರು ಕೊನೆಗೆ ತಮ್ಮ ಒಳಜೀವನದಲ್ಲಿ ಅದೇ ಹಿಂಸೆಯ ವಿರೂಪಾಂತರಗಳಿಗೆ ತಾವೇ ಗುರಿಯಾಗಿರುತ್ತಾರೆ. ಬಹಿರಂಗದಲ್ಲಿ ಹಿಂಸೆಯ ಪ್ರತಿಪಾದಕರಾಗಿದ್ದವರು ಈಗ ಅದೇ ಹಿಂಸೆಯ ವಿಷಯದಲ್ಲಿ ತಮ್ಮದೆ ಅಂತರಾಳದ ಪ್ರತಿರೋಧಕ್ಕೆ ಗುರಿಯಾಗಿರುತ್ತಾರೆ.

ಪಲ್ಲವಿಯನ್ನು ಪುನರಾವರ್ತಿಸುತ್ತಾ ಈ ನನ್ನ ಪ್ರಸ್ತುತಿಯನ್ನು ಮುಗಿಸುತ್ತಿದ್ದೇನೆ: ನನ್ನ ಈವರೆಗಿನ ಜೀವನದಲ್ಲಿ ನಾನು ಒಬ್ಬಾನೊಬ್ಬ ಆತ್ಮಸಂತೃಪ್ತ ಹಂತಕನನ್ನೂ ಕಂಡಿಲ್ಲ. ಬದಲು ನಾನು ಕಂಡಿರುವುದು ಒಂದಲ್ಲದಿನ್ನೊಂದು ಬಗೆಯಲ್ಲಿ ತುಸುವಾದರೂ ಆತ್ಮಸಂತಪ್ತರಾದ ಹಂತಕರನ್ನು ಮಾತ್ರ, ಹೊರಗೆ ವೀರಾವೇಶ ಧರಿಸಿಕೊಂಡಿದ್ದು ಒಳಗೆ ಅಧೀರತೆಯಿಂದ ಬಳಲುತ್ತಿರುವ ಸಂತ್ರಸ್ತ ಆತ್ಮರನ್ನು ಮಾತ್ರ. ಆತ್ಮಸಂತೃಪ್ತ ಹಂತಕರು ಇಲ್ಲವೇ ಇಲ್ಲವೆಂದೇನೂ ನಾನು ಹೇಳುತ್ತಿಲ್ಲ. ಅಂಥವರು ಇರಲೂಬಹುದು, ಆದರೆ ನಾನಂತೂ ಅವರನ್ನು ಕಂಡಿಲ್ಲ. ಒಂದು ಪಕ್ಷ ಅಂಥವರು ಇರುವುದು ಹೌದೆಂದಾದರೂ ಅಲ್ಲೂ ನನಗೊಂದು ಬಲವಾದ ನಂಬಿಕೆಯುಂಟು: ಅವರನ್ನು ಒಂದಿನಿತು ವಿಶೇಷ ಸಹನೆಯಿಂದ ಹಾಗೂ ಆತ್ಮಕಥನದ ಪರಿಭಾಷೆಯಿಂದ ಶೋಧಿಸುತ್ತಹೋದಲ್ಲಿ, ಅವರಲ್ಲೂ ನಾವು ಈವರೆಗೂ ಚರ್ಚಿಸುತ್ತ ಬಂದ ಬಗೆಯ ಬಹಿರಂಗ ಹಾಗೂ ಅಂತರಂಗಗಳ ನಡುವಿನ ವಿಲಕ್ಷಣ ಅಸಾಂಗತ್ಯ ತುಸುವಾದರೂ ಗೋಚರಿಸದಿರಲಾರದು, ಅವರ ಬಾಹ್ಯವ್ಯಕ್ತಿತ್ವದ ಒಳಗಿನ ವ್ಯಸ್ತಮನಸ್ಕತೆ ಒಡೆದು ತೋರದಿರಲಾರದು.

---

(ಸಮಕಾಲೀನ ಜಗತ್ತಿನ ಧೀಮಂತ ಚಿಂತಕರಲ್ಲೊಬ್ಬರಾದ ಆಶೀಶ್ ನಂದಿ ನೀನಾಸಮ್ ಸಂಸ್ಕೃತಿ ಶಿಬಿರ - ಅಕ್ಟೋಬರ್ ೨೦೦೭ರಲ್ಲಿ ನೀಡಿದ 'Heroic and Unheroic Killers' ಶೀರ್ಷಿಕೆಯ ಉಪನ್ಯಾಸದ ಲೇಖನರೂಪ; ಸಂಗ್ರಹ - ಅನುವಾದ: ಜಸವಂತ ಜಾಧವ)



# ನೀನಾಸಮ್ ವರದಿಗಳು

**ನೀನಾಸಮ್ ರಂಗಶಿಕ್ಷಣ ಕೇಂದ್ರ:** ಬಿಹಾರದ ಸಂಜಯ ಉಪಾಧ್ಯಾಯರು ವಿದ್ಯಾರ್ಥಿಗಳಿಗೆ ಶೂದ್ರಕನ ಮೃಚ್ಛಕಟಿಕದ ಭೋಜಪುರಿ ರೂಪಾಂತರವಾದ 'ಮಾಟೀಗಾಡಿ' ಎಂಬ ನಾಟಕವನ್ನು 'ಮಣ್ಣಿನ ಬಂಡಿ' ಎಂಬ ಹೆಸರಿನಲ್ಲಿ ನಿರ್ದೇಶಿಸಿದರು (ರಚನೆ: ಹೃಷಿಕೇಶ್ ಸುಲಭ್, ಕನ್ನಡಕ್ಕೆ: ವೆಂಕಟರಮಣ ಐತಾಳ). ಮಾರ್ಚ್ ೧೭ರಿಂದ ೨೦ರವರೆಗೆ ಇದರ ಪ್ರದರ್ಶನಗಳು ನಡೆದವು. ಇಲ್ಲಿ ಮಾರ್ಚ್ ೨೨ರಿಂದ ೨೬ರವರೆಗೆ ಪೃಥ್ವೀ ಥಿಯೇಟರ್ಸ್, ಮುಂಬಯಿ ಇದರ ಇಂಡಿಯಾ ಥಿಯೇಟರ್ ಫೋರಮ್‌ನ ಆಶ್ರಯದಲ್ಲಿ ನಡೆದ 'ನಾಟ್ ದಿ ಡ್ರಾಮಾ ಸೆಮಿನಾರ್' ಎಂಬ ಕಮ್ಮಟದಲ್ಲಿ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದರು. ಆನಂತರ ಅಕ್ಷರ ಕೆ.ವಿ. ಅವರು 'ಬಹುಧಾಪ್ಯೇಕಮ್' ಎಂಬ ಹೆಸರಿನಲ್ಲಿ ಸಾತ್ವಿಕ ವಿನ್ಯಾಸದ ಕಿರುಪ್ರಯೋಗವೊಂದನ್ನು ನಡೆಸಿಕೊಟ್ಟರು. ಎಪ್ರಿಲ್ ೧೧ರಿಂದ ೨೪ರವರೆಗೆ ಚನ್ನಕೇಶವ ಅವರ ನಿರ್ದೇಶನದಲ್ಲಿ ನಡೆದ ಮಕ್ಕಳ ಬೇಸಿಗೆ ಶಿಬಿರದಲ್ಲಿ ವಿದ್ಯಾರ್ಥಿಗಳು ಸಹಾಯಕರಾಗಿ ನೆರವಾದರು. ಎಪ್ರಿಲ್ ೨೬ರಿಂದ ಮೇ ೨ರವರೆಗೆ ಈ ಸಾಲಿನ ವಾರ್ಷಿಕ ಪರೀಕ್ಷೆಗಳು ನಡೆದವು. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯವರು ಈ ಪರೀಕ್ಷೆಯನ್ನು ನಡೆಸಿಕೊಟ್ಟರು. ಕೊನೆಯಲ್ಲಿ ಮೇ ೧೧ರಿಂದ ೧೬ರವರೆಗೆ ನಡೆದ ನಾಟಕೋತ್ಸವದಲ್ಲಿ ವಿದ್ಯಾರ್ಥಿಗಳು ಈ ವರ್ಷ ತಾವು ಪ್ರಯೋಗಿಸಿದ ನಾಟಕಗಳನ್ನು ಮತ್ತೊಮ್ಮೆ ಪ್ರದರ್ಶಿಸಿದರು.

ಈ ಸಂದರ್ಭದಲ್ಲಿ ಮೇ ೧೧ರಂದು ಇಲ್ಲಿನ ಹಳೆಯ ವಿದ್ಯಾರ್ಥಿಗಳು ಕಟ್ಟಿಕೊಂಡ ತಂಡವಾದ ಬೆಂಗಳೂರಿನ ಆದ್ಯಂತದವರು 'ಪರಿತ್ಯಕ್ತ' ಎಂಬ ನಾಟಕವನ್ನು (ರಚನೆ: ಅಂಬಾತನಯ ಮುದ್ರಾಡಿ, ನಿ: ಮಂಜುನಾಥ ಬಡಿಗೇರ) ಮತ್ತು ೧೬ರಂದು ಶಿವಮೊಗ್ಗದ ಜನಶಿಕ್ಷಣ ಸಂಸ್ಥೆಯ ನೆರವಿನಲ್ಲಿ ತರಬೇತಿಪಡೆದ ಮಹಿಳಾ ಯಕ್ಷಗಾನ ತಂಡದವರಿಂದ 'ಉಷಾ ಪರಿಣಯ' (ನಿ: ಕೆ.ಜಿ. ರಾಮರಾವ್ ಮತ್ತು ಎ.ಆರ್. ಗಣಪತಿ)ಎಂಬ ಯಕ್ಷಗಾನದ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

**ನೀನಾಸಮ್ ತಿರುಗಾಟ:** ಜನವರಿಯಲ್ಲಿ ತಿರುಗಾಟ ೨೦೦೭ರ ಪ್ರದರ್ಶನಗಳು ಮುಗಿದು, ಮರುತಿರುಗಾಟ ೨೦೦೮ರ ತಾಲೀಮು ನಡೆದು ಫೆಬ್ರುವರಿ ೨೮ ಮತ್ತು ೨೯ರಂದು ಅದರ ಮೊದಲ ಪ್ರದರ್ಶನಗಳು ನಡೆದವು. ಈ ಸಂದರ್ಭದಲ್ಲಿ ಸಾಣೆಹಳ್ಳಿ

ಮಠದ ಶ್ರೀ ಪಂಡಿತಾರಾಧ್ಯ ಸ್ವಾಮೀಜಿಯವರು ನೀನಾಸಮ್‌ಗೆ ಭೇಟಿಕೊಟ್ಟು ನಾಟಕವನ್ನು ವೀಕ್ಷಿಸಿದರು. ಎಪ್ರಿಲ್ ಮೊದಲವಾರದವರೆಗೆ ಮರುತಿರುಗಾಟದ ಪ್ರದರ್ಶನಗಳು ಬೇರೆಬೇರೆ ಊರುಗಳಲ್ಲಿ ನಡೆದವು. ನಾಟಕ ಡಾ.ಚಂದ್ರಶೇಖರ ಕಂಬಾರ ಅವರ ಕಿರುಕಾದಂಬರಿ 'ಜೀಕೆ ಮಾಸ್ತರರ ಪ್ರಣಯ ಪ್ರಸಂಗ'ದ ರಂಗರೂಪ (ನಿ: ಅಕ್ಷರ ಕೆ.ವಿ). ಜುಲೈ ಕೊನೆಯ ವಾರದಲ್ಲಿ ತಿರುಗಾಟ ೨೦೦೮ರ ತಾಲೀಮುಗಳು ಪ್ರಾರಂಭವಾಗಲಿವೆ. ಈ ಸಾಲಿನ ನಾಟಕಗಳು – 'ಸ್ವಯಂವರಲೋಕ' (ರಚನೆ, ನಿರ್ದೇಶನ: ಅಕ್ಷರ ಕೆ.ವಿ.) ಮತ್ತು 'ನಟನಾರಾಯಣಿ' (ಶಂಕರ ಮೊಕಾಶಿ ಪುಣೇಕರರ ಕಾದಂಬರಿಯ ನಾಟಕರೂಪ; ನಿರ್ದೇಶನ: ನಟರಾಜ ಹೊನ್ನವಳ್ಳಿ).

**ನೀನಾಸಮ್ ಕಾರ್ಯಕ್ರಮಗಳು:** ಜನವರಿ ೧೩ರಂದು ಸಾಲಿಗ್ರಾಮ ಮಕ್ಕಳ ಮೇಳದವರ 'ಬಭ್ರುವಾಹನ' ಎಂಬ ಯಕ್ಷಗಾನ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ ಸಹಯೋಗದಲ್ಲಿ ಫೆಬ್ರುವರಿ ೨೫ ಮತ್ತು ೨೬ರಂದು ಕಚ್‌ಕಥಾ ಪಪೆಟ್ ಆರ್ಟ್ಸ್ ಟ್ರಸ್ಟ್, ನವದೆಹಲಿ ತಂಡದವರ 'ಎಬೌಟ್ ರಾಮ್' ಎಂಬ ಪ್ರಾಯೋಗಿಕ ಗೊಂಬೆಯಾಟ (ನಿ:ಅನುರೂಪ ರಾಯ್) ಮತ್ತು ಥಿಯೇಟರ್ ರೂಟ್ಸ್ ಆ್ಯಂಡ್ ವಿಂಗ್ಸ್, ತ್ರಿಶ್ಶೂರ್ ತಂಡದವರ 'ಕ್ವಿಕ್ ಡೆತ್' (ನಿ: ಶಂಕರ್ ವೆಂಕಟೇಶ್ವರನ್) ಎಂಬ ನಾಟಕದ ಪ್ರದರ್ಶನಗಳು ನಡೆದವು. ಫೆಬ್ರುವರಿ ೬ರಿಂದ ೧೦ರವರೆಗೆ **'ನೀನಾಸಮ್ ಊರುಮನೆ ಉತ್ಸವ'** ಎಂಬ ಹೊಸ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಹೆಗ್ಗೋಡು ಸುತ್ತಮುತ್ತಲಿನ ಕಲಾವಿದರು ತಾವು ಹಿಂದಿನಿಂದಲೂ ನಡೆಸಿಕೊಂಡುಬಂದಿರುವ ಹಲವು ಕಲಾಪ್ರಕಾರಗಳನ್ನು ಶಿವರಾಮ ಕಾರಂತ ರಂಗಮಂದಿರದಲ್ಲಿ ಪ್ರದರ್ಶಿಸಿದರು. ಈ ಕಾರ್ಯಕ್ರಮವನ್ನು ಕುವೆಂಪು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಬಿ.ಎಸ್. ಶೇರಿಗಾರ್ ಅವರು ಉದ್ಘಾಟಿಸಿದರು. ದಿನಾಂಕ ೬ರಂದು ಶ್ರೀ ರಾಧಾಕೃಷ್ಣ ಭಟ್ ಮತ್ತು ಶ್ರೀ ಪ್ರಶಾಂತ್ ಭಟ್ ಇವರಿಂದ ವೇದಘೋಷ, ಶ್ರೀಮತಿ ಪ್ರತಿಭಾ ರಾಘವೇಂದ್ರ ಇವರಿಂದ ಸ್ವರಚಿತ ಹಾಡುಗಳು, ಶ್ರೀಲಕ್ಷ್ಮೀ ಸ್ತ್ರೀಶಕ್ತಿ ಸ್ವಸಹಾಯ ಸಂಘ, ಸಂಪೆಕ್ಕೈ ಇವರಿಂದ ಸಂಪ್ರದಾಯದ ಹಾಡುಗಳು, ಯುವಮಿತ್ರರು ಭೀಮನಕೋಣೆ ಇವರಿಂದ ಸ್ವರಾಂಜಲಿ ಸಂಗೀತ ಸಂಜೆ; ದಿ. ೭ರಂದು ಪಿ. ನರಹರಿ ಭಟ್ಟರು ಚನ್ನಿಗನತೋಟ ಇವರಿಂದ ಹರಿಕಥೆ, ಕುಮಾರಿ ರೂಪಾ ಗಡಿಕಟ್ಟೆ ಇವರಿಂದ ಭರತನಾಟ್ಯ; ದಿ. ೮ರಂದು ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ ಭೀಮನಕೋಣೆ ಇವರಿಂದ ಜಾನಪದ ಗೀತೆಗಳು, ಶ್ರೀ ಆಂಜನೇಯ ಜೋಗಿ,



ಆನಂದೇಶ್ವರಿ ಕಲಾಸಂಘ, ಬಟ್ಟೆಮಲ್ಲಪ್ಪ ಮತ್ತು ತಂಡದವರಿಂದ ಜೋಗೇರ ಆಟ, ಶ್ರೀಮತಿ ಸಮುದ್ಯತಾ ವೆಂಕಟರಾಮು, ಶೆಡ್ತಿಕೆರೆ ಇವರಿಂದ ಗಮಕವಾಚನ; ದಿ. ೯ ರಂದು ಹಾವಾಡಿಗರ ತಂಡ ಗಡಿಕಟ್ಟೆ ಇವರಿಂದ ಸಂಸ್ಕೃತ ಶ್ಲೋಕಪಠಣ, ಶ್ರೀಮತಿ ನಿರ್ಮಲ ನಾರಾಯಣ ಭಟ್ ಇವರಿಂದ ಗಮಕವಾಚನ, ಊರುಮನೆ ಬಳಗ ಮುಂಡಿಗೇಸರ ಇವರಿಂದ ಸಂಪ್ರದಾಯದ ಹಾಡುಗಳು, ಆತವಾಡಿ ತಂಡದ ಶ್ರೀ ಎಲ್ಲಪ್ಪ, ಶ್ರೀ ನಾಗಪ್ಪ ಮತ್ತು ತಂಡದವರಿಂದ ಅಂಟಿಕೆ ಪಂಟಿಕೆ ಹಬ್ಬ ಹಾಡುವುದು, ಶ್ರೀ ಸಿ.ಎನ್. ಮಾಧವ ಭಟ್ ಚನ್ನಿಗನತೋಟ ಇವರಿಂದ ಶಾಸ್ತ್ರೀಯ ಶಿಳ್ಳುಗಾಯನ; ದಿ. ೧೦ರಂದು ಈಶ್ವರ ಯುವಕ ಸಂಘ ಬಿಲಗೋಡಿ ಇವರಿಂದ ಕೋಲಾಟ, ವರದಾಂಬ ಭಜನಾ ಮಂಡಳಿ, ವರದಾಮೂಲ ಇವರಿಂದ ಭಜನಾ ನೃತ್ಯ, ಸಿದ್ದೇಶ್ವರ ದೇವಸ್ಥಾನ ಸಮಿತಿ ಮತ್ತು ಗ್ರಾಮಸ್ಥರು, ಹೆಬ್ಬರಿಗೆ ಇವರಿಂದ ಹಬ್ಬ ಹಾಡುವುದು, ತಾಂಡವ ಮಹಿಳಾ ಕಲಾ ಸಂಘ, ಹೆಗ್ಗೋಡು ಇವರಿಂದ ಡೊಳ್ಳುಕುಣಿತ, ಮತ್ತು ಸಾಕೇತ ಕಲಾವಿದರು, ಕೆಳಮನೆ ಇವರಿಂದ ಯಕ್ಷಗಾನ ಪ್ರದರ್ಶನ – ಮುಂತಾದ ಕಾರ್ಯಕ್ರಮಗಳು ಈ ಊರುಮನೆ ಉತ್ಸವದಲ್ಲಿ ನಡೆದವು.

**ಮಾತುಕತೆ ೮೬**

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೨೬೫೬೪೬

ಖಾಸಗಿ ಪ್ರಸಾರದ ತ್ರೈ ಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಸವಂತ ಜಾಧವ್

ಸಹ ಸಂಪಾದಕ: ವೆಂಕಟರಮಣ ಐತಾಳ ಬಿ. ಆರ್.

ವಾರ್ಷಿಕ ವರ್ಗಣಿ: ಐವತ್ತು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು, ಮುದ್ರಣ: ಅಚ್ಚುಮೆಚ್ಚು, ಹೆಗ್ಗೋಡು

---

**ಮೇ ೨೦೦೮ ವರ್ಷ ಇಪ್ಪತ್ತೆರಡು ಸಂಚಿಕೆ ಎರಡು**

---


೧. **ಹಿಂಸೆಯ ಒಳ - ಹೊರಗು:**
**ಧೀರ ಹಂತಕರ ಅಧೀರ ಮನೋಲೋಕದೊಳಗೊಂದು ಸುತ್ತು**
ಅಶೀಶ್ ನಂದಿ, ಕನ್ನಡಕ್ಕೆ: ಜಶವಂತ ಜಾಧವ್ ಪುಟ ೦೧

೨. **ನೀನಾಸಮ್ ವರದಿಗಳು** ಪುಟ ೩೫


---

second cover

**MAATHUKATHE** MAY. 2008 (YEAR 22 ISSUE 2)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.50 (FIFTY ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**

Third cover

**ಅಕ್ಷರ ಪ್ರಕಾಶನ**

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**

---

| | |
|---|---|
| **ತೇಜಸ್ವಿ ಕಥನ** (ವಿಮರ್ಶೆ: ಟಿ.ಪಿ. ಅಶೋಕ) | ರೂ. ೮೦ |
| **ದಾವ್ ದ ಜಿಂಗ್** (ಅನುವಾದ: ಯು.ಆರ್. ಅನಂತಮೂರ್ತಿ) | ರೂ. ೭೦ |
| **ಕಲ್ಲ ಪಾರಿವಾಳಗಳ ಬೇಟ** (ಕವನಗಳು: ಎಸ್. ಮಂಜುನಾಥ್) | ರೂ. ೬೦ |
| **ವಿಜ್ಞಾನ-ಸಂಸ್ಕೃತಿ** (ರೊದ್ದಂ ನರಸಿಂಹ ಅವರ ಬರಹಗಳ ಅನುವಾದ ಅನು: ಅಕ್ಷರ ಕೆ.ವಿ.) | ರೂ. ೭೦ |
| **ಕೆ.ವಿ. ಸುಬ್ಬಣ್ಣ ಅವರ ಆಯ್ದ ಲೇಖನಗಳು** (ಹದಿನೈದು ಲೇಖನಗಳ ಸಂಕಲನ) | ರೂ. ೧೦೦ |
| **ನಾಪತ್ತೆಯಾದ ಗ್ರಾಮಾಫೋನು ಮತ್ತು ಇತರ ಪ್ರಬಂಧಗಳು** (ಎಸ್. ದಿವಾಕರ್) | ರೂ. ೧೫೦ |
| **ಅಲೆಗಳಲ್ಲಿ ಅಂತರಂಗ** (ವೈದೇಹಿ ಕಥೆಗಳು ೧೯೭೯-೨೦೦೪) | ರೂ ೪೦೦ |
| **ಸ್ತ್ರೀಮತವನುತ್ತರಿಸಲಾಗದೆ ?** (ಸಾಹಿತ್ಯ-ಸಂಸ್ಕೃತಿ ಕುರಿತ ಲೇಖನಗಳು ಡಾ. ಎಂ.ಎಸ್. ಆಶಾದೇವಿ) | ರೂ ೯೦ |
| **ಅರಬಿ ಎಂಬ ಕಡಲು** (ಕವನಗಳು - ಹಾ.ಮ. ಕನಕ) | ರೂ ೫೦ |
| **ಅಶ್ವಮೇಧ** (ಕಾದಂಬರಿ - ಅಶೋಕ ಹೆಗಡೆ) | ರೂ ೧೨೦ |
| **ಸಾಹಿತ್ಯ ಕಥನ** (ವಿಮರ್ಶೆ- ಡಿ.ಆರ್. ನಾಗರಾಜ್) | ರೂ ೨೦೦ |
| **ಶಿಖರಸೂರ್ಯ** (ಕಾದಂಬರಿ - ಚಂದ್ರಶೇಖರ ಕಂಬಾರ) | ರೂ ೨೦೦ |
| ಒಂದು ಬದಿ ಕಡಲು (ಕಾದಂಬರಿ - ವಿವೇಕ ಶಾನಭಾಗ) | ರೂ.೧೩೫ |
| ವೆನಿಸ್ಸಿನ ವ್ಯಾಪಾರ ಮ್ತುತು ಕ್ರಮವಿಕ್ರಮ (ಶೇಕ್ಸ್ಪಿಯರ್ ನಾಟಕಗಳ ಅನುವಾದ - ಅಕ್ಷರ ಕೆ.ವಿ.) | ರೂ.೧೦೦ |
| ಸ್ವಯಂವರಲೋಕ (ನಾಟಕ - ಅಕ್ಷರ ಕೆ.ವಿ.) | ರೂ.೬೫ |
| ಐದು ದಶಕದ ಕಥೆಗಳು (ಸಮಗ್ರ ಕಥಾಸಂಕಲನ - ಯು.ಆರ್. ಅನಂತಮೂರ್ತಿ) | ರೂ.೨೪೦ |
| ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು (ಸಂ: ವಿನಯ ಲಾಲ್ ಮತ್ತು ಅಶೀಶ್ ನಂದಿ; ಕನ್ನಡಕ್ಕೆ: ವಿವಿಧ ಲೇಖಕರು) | ರೂ. |
| ಕವಿರಾಜಮಾರ್ಗ ಮತ್ತು ಕನ್ನಡಜಗತ್ತು (ಮರುಮುದ್ರಣ - ಕೆ.ವಿ.ಸುಬ್ಬಣ್ಣ) | ರೂ. |
| ಸಿರಿಸಂಪಿಗೆ (ನಾಟಕ - ಮರುಮುದ್ರಣ - ಚಂದ್ರಶೇಖರ ಕಂಬಾರ) | ರೂ. |
| ಕೆ.ವಿ.ಸುಬ್ಬಣ್ಣ ನೆನಪಿನ ಮೊದಲ ಓದು ಮಾಲಿಕೆ (ಹತ್ತು ಪುಸ್ತಕಗಳ ೨ನೆಯ ಕಂತು) | ರೂ. |